ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಡಿಸೆಂಬರ್ 14, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 212 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999




## ಲಿಂಗಾಯತ ಸ್ವತಂತ್ರ ಧರ್ಮಕ್ಕೆ ಮಾನ್ಯತೆ ಸಿಗದಿದ್ದರೆ ಮುಂದಿನ ಪೀಳಿಗೆಗೆ ಕಷ್ಟ

**ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಮಹಿಳಾ ಘಟಕ ಉದ್ಘಾಟಿಸಿದ ರಾಜ್ಯ ಮಹಿಳಾ ಸಂಚಾಲಕಿ ಮುಕ್ತಾ ಕಾಗಲಿ**

ದಾವಣಗೆರೆ, ಡಿ.13 - ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಗದಿದ್ದರೆ ಮುಂದಿನ ಪೀಳಿಗೆಗೆ ಕಷ್ಟವಾಗುತ್ತದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಮಹಿಳಾ ಸಂಚಾಲಕಿ ಮುಕ್ತಾ ಕಾಗಲಿ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ಸರಸ್ವತಿ ಬಡಾವಣೆಯ ಬಸವ ಬಳಗದ ಆವರಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಮಹಿಳಾ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಕ್ಕೆ ಧರ್ಮವೇ ಸರಿಯಾದ ಪದ. ಸಮಾಜಕ್ಕೆ ಒಳಿತು ಮಾಡುವುದೇ ಧರ್ಮ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ಜಾತಿಗೆ ಮೀರಿದ ಧರ್ಮವನ್ನು ನಮಗೆ ಕೊಟ್ಟಿದ್ದಾರೆ. ಅದಕ್ಕಾಗಿ ಹೋರಾಟ ನಡೆಸುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಅದಕ್ಕೆ ಕಾರಣ ಯಾರು? ಎಂದು ಪ್ರಶ್ನಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಮಹಿಳೆಯರಲ್ಲಿನ ಶಕ್ತಿ ಅರಿತ ಬಸವಣ್ಣನವರು, ಅವರು ವಿಚಾರವಂತರಾಗಲೀ ಎಂದು ಅಂದೇ ವೇದಿಕೆ ಕಲ್ಪಿಸಿಕೊಟ್ಟಿದ್ದರು. ಧರ್ಮದ ಬಗೆಗಿನ ಗೊಂದಲಗಳನ್ನು ನಿವಾರಿಸಲು ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರು ವೈಚಾರಿಕತೆ ಬೆಳೆಸಿಕೊಳ್ಳಬೇಕು. ಆಗ ಸತ್ಯಾಸತ್ಯತೆ ತಿಳಿಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಿಸಿದರು.

ಪಾಂಡೋಮಟ್ಟಿ-ಕಮ್ಮತ್ತಹಳ್ಳಿ ವಿರಕ್ತಮಠದ ಡಾ.ಗುರುಬಸವ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ, ಶರಣರ ವಚನ ಸಾಹಿತ್ಯದ ವಿಚಾರವನ್ನು ಮನೆ ಮನೆಗ ತಲುಪಿಸುವ ಉದ್ದೇಶದಿಂದ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಮಹಿಳಾ ಘಟಕ ಆರಂಭಿಸಲಾಗುತ್ತಿದೆ ಎಂದು ಹೇಳಿದರು.

ಇದು ಯಾವುದೇ ಘಟಕಕ್ಕೆ ಪರ್ಯಾಯವಲ್ಲ. ಮಹಿಳೆಯರಲ್ಲಿ ಧರ್ಮ ಜಾಗೃತಿ ಮೂಡಿಸುವುದು, ಧರ್ಮದ ಬಗ್ಗೆ ಗೊಂದಲದಲ್ಲಿ ಸಿಕ್ಕ ಜನರಿಗೆ ಸ್ಪಷ್ಟತೆ ನೀಡುವುದು ಈ ಘಟಕದ ಉದ್ದೇಶ ಎಂದು ಹೇಳಿದರು.

ಮಂಗಳೂರು ವಿವಿ ನಿವೃತ್ತ (4ನೇ ಪುಟಕ್ಕೆ)

## ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಒದಗಿಸಲು ಕ್ರಮ: ಹೆಬ್ಬಾಳ್ಕರ್

ಬೆಳಗಾವಿ, ಡಿ. 13- ರಾಜ್ಯದಲ್ಲಿ ಸಾಧ್ಯವಾದಷ್ಟು ಕಡೆಗಳಲ್ಲಿ ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿಧಾನಸಭೆಗಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಷಡಕ್ಷರಿ.ಕೆ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 4 ಸಾವಿರ ಸರ್ಕಾರಿ ನಿವೇಶನಗಳಿಗೆ ಅಂಗನವಾಡಿ ಹೆಸರು ಹಾಕಿಸಲಾಗಿದೆ, ನಿವೇಶನ ದೊರೆತ ತಕ್ಷಣ ಅಗತ್ಯವಿರುವೆಡೆ ಸ್ವಂತ ಕಟ್ಟಡ ನಿರ್ಮಾಣ ಮಾಡಲಾಗುವುದು ಎಂದರು.

ಸಾರ್ವಜನಿಕ ಸೌಲಭ್ಯಕ್ಕೆ ಮೀಸಲಿಟ್ಟಿರುವ ನಿವೇಶನಗಳನ್ನು ಅಂಗನವಾಡಿ ಕಟ್ಟಡಕ್ಕೆ ಬಳಸುವ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾ ಗುವುದು ಎಂದರು.

ಶರಣಗೌಡ ಕಂದಕೂರು ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬಾಲ್ಯವಿವಾಹ ಪದ್ಧತಿಯನ್ನು ಬೇರು ಸಮೇತ ಕಿತ್ತು ಹಾಕಲು ಇಲಾಖೆ ಸನ್ನದ್ಧವಾಗಿದೆ ಎಂದರು.

ಬಾಲ್ಯವಿವಾಹ ಪ್ರಕರಣಗಳನ್ನು ಮುಚ್ಚಿಹಾಕಲು ಯಾರಿಂದಲೂ ಸಾಧ್ಯವಿಲ್ಲ, ರಾಜ್ಯದಲ್ಲಿ ಈಗ ಅತ್ಯಂತ ಪ್ರಬಲವಾದ ಕಾನೂನು ಇದೆ, ನಿರ್ದಿಷ್ಟ ಪ್ರಕರಣಗಳನ್ನು ಗಮನಕ್ಕೆ ತಂದರೆ ತಕ್ಷಣ ಕ್ರಮ ಕೈಗೊಳ್ಳಲಾಗುವುದು.

ಮಕ್ಕಳ ಹಕ್ಕುಗಳ ರಕ್ಷಣೆಗೆ ವಿವಿಧ ನಿಯಮಗಳಡಿ ಕೆಲಸ (2ನೇ ಪುಟಕ್ಕೆ)

## ಕೃಷಿ ಭಾಗ್ಯ ಶೀಘ್ರ ಅನುಷ್ಠಾನ

ಬೆಂಗಳೂರು, ಡಿ. 12 - ಕೃಷಿ ಭಾಗ್ಯ ಯೋಜನೆ ಶೀಘ್ರದಲ್ಲೇ ಅನುಷ್ಠಾನ ಗೊಳ್ಳಲಿದೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ವಿಧಾನಸಭೆಯ ಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸಿ.ಎನ್. ಬಾಲಕೃಷ್ಣ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಯೋಜನೆಗೆ ಮರುಚಾಲನೆ ನೀಡಲಾಗಿದೆ, ಇಲಾಖೆ ನಿರ್ಧಾರಕ್ಕೆ ಸಂಪುಟದ ಒಪ್ಪಿಗೆಯೂ ದೊರೆತಿದೆ ಎಂದರು.

ಕೃಷಿ ಭಾಗ್ಯ ಯೋಜನೆ ಲಾಭ ಪಡೆಯಲು ರೈತರಿಗಾಗಿ ಮಾರ್ಗಸೂಚಿ ಹೊರಡಿಸಲಾಗಿದ್ದು, ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು. (2ನೇ ಪುಟಕ್ಕೆ)

## ಸವಕಲಾಗಿರುವ 76 ಕಾಯ್ದೆಗಳ ವಾಪಸ್ ಮಸೂದೆ ಅಂಗೀಕಾರ

ನವದೆಹಲಿ, ಡಿ. 13 – ಸವಕಲಾಗಿರುವ 76 ಕಾಯ್ದೆಗಳನ್ನು ವಾಪಸ್ ಪಡೆಯುವ ಮಸೂದೆಗೆ ಸಂಸತ್ತು ಒಪ್ಪಿಗೆ ನೀಡಿದೆ.

ಕಾಯ್ದೆಗಳನ್ನು ವಾಪಸ್ ಪಡೆಯುವ ತಿದ್ದುಪಡಿ ಮಸೂದೆಗೆ ರಾಜ್ಯಸಭೆ ಧ್ವನಿಮತದ ಮೂಲಕ ಒಪ್ಪಿಗೆ ನೀಡಿದೆ. ಈ ವರ್ಷ ಜುಲೈ 27ರಂದು ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿತ್ತು.

# ಸಂಸತ್ ಭದ್ರತೆಯಲ್ಲಿ ಭಾರೀ ಲೋಪ

## ಲೋಕಸಭೆಯಲ್ಲಿ ಹಳದಿ ಹೊಗೆ ಹರಡಿದ ಇಬ್ಬರು ಮಹಿಳೆಯರು

ನವದೆಹಲಿ, ಡಿ. 13 – ವೀಕ್ಷಕರ ಗ್ಯಾಲರಿಯಿಂದ ಲೋಕಸಭೆ ಅಂಗಳಕ್ಕೆ ನುಗ್ಗಿದ ಇಬ್ಬರು ಘೋಷಣೆಗಳನ್ನು ಕೂಗುತ್ತಾ ಕ್ಯಾನ್‌ಗಳಿಂದ ಹಳದಿ ಹೊಗೆ ಹರಡಿದ ಘಟನೆ ನಡೆದಿದೆ. ಇದರಿಂದಾಗಿ ಸದನದಲ್ಲಿ ಆತಂಕ ಹಾಗೂ ಕೋಲಾಹಲ ಉಂಟಾಗಿತ್ತು. 2001ರಲ್ಲಿ ಸಂಸತ್ತಿನ ಮೇಲೆ ನಡೆದ (4ನೇ ಪುಟಕ್ಕೆ)



### ಪ್ರತಾಪ್ ಸಿಂಹ ಕಚೇರಿಯಿಂದ ಪಾಸ್ ಪಡೆದವರಿಂದ ದಾಳಿ

ಬೆಂಗಳೂರು, ಡಿ. 12 - ಸಂಸತ್ತಿನಲ್ಲಿ ಮೈಸೂರಿನ ಯುವಕ ಮನೋರಂಜನ್ ಎಬ್ಬಿಸಿದ ಗೊಂದಲ ಜಾಗತಿಕವಾಗಿ ಭಾರತವನ್ನು ಮುಜುಗರಕ್ಕೆ ಸಿಲುಕಿಸಿದ್ದು, ಸಂಸತ್ ಪ್ರವೇಶಿಸಲು ಆತ (4ನೇ ಪುಟಕ್ಕೆ)

25ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು




ಇಂದು ತಮ್ಮ 25ನೇ ವಿವಾಹ ವಾರ್ಷಿಕೋತ್ಸವದ ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ
ಬಿಂದಾಸ್ ಗ್ರೂಪ್ ಮಾಲೀಕರಾದ
ಶ್ರೀ ಜೆ. ಈಶ್ವರ್‌ಸಿಂಗ್ ಕವಿತಾಳ
ಮತ್ತು ಶ್ರೀಮತಿ ರೂಪ ಈಶ್ವರ್‌ಸಿಂಗ್
ದಂಪತಿಗೆ ಹೃದಯಪೂರ್ವಕ ಶುಭಾಶಯಗಳು.
ಅವರಿಗೆ ಆಯುರಾರೋಗ್ಯ ಭಾಗ್ಯ ಕರುಣಿಸಲಿ ಎಂದು ಶುಭ ಹಾರೈಸುವ...

✦ ಚಿ|| ಹೃತಿಕ್‌ಸಿಂಗ್ ಜೆ.ಈ. ✦ ಕು|| ಹೃಷಿಕಾ ಸಿಂಗ್ ಜೆ.ಈ. ಮತ್ತು ಬಿಂದಾಸ್ ಗ್ರೂಪ್‌ನ ಸಿಬ್ಬಂದಿ ವರ್ಗ
✦ ದಾವಣಗೆರೆ ಜಿಲ್ಲಾ ರಾಜಪೂತ್ ಸಮಾಜ, ದಾವಣಗೆರೆ ✦ ವಿಷ್ಣು ಸಮಾಜ, ದಾವಣಗೆರೆ.
✦ ದಾವಣಗೆರೆ ಜಿಲ್ಲಾ ಸಮಸ್ತ ಜೈನ್ ಸಮಾಜ, ದಾವಣಗೆರೆ. ✦ ರಿದ್ದಿ ಸಿದ್ದಿ ಫೌಂಡೇಶನ್, ದಾವಣಗೆರೆ
✦ ರಾಜಸ್ಥಾನ ಯೂತ್ ಫೆಡರೇಷನ್, ದಾವಣಗೆರೆ. ✦ ದಾವಣಗೆರೆ ಜಿಲ್ಲಾ ಲಿಕ್ಕರ್ ಅಸೋಸಿಯೇಷನ್, ದಾವಣಗೆರೆ.
✦ ಕುಂದುವಾಡ ಕೆರೆ ವಾಯುವಿಹಾರ ಬಳಗ, ದಾವಣಗೆರೆ. ✦ ಕವಿಮನೆ ಪಾಯಿಂಟ್ ಗೆಳೆಯರ ಬಳಗ, ದಾವಣಗೆರೆ.
✦ ಫ್ಯಾರಾಮೌಂಟ್ ಗೆಳೆಯರ ಬಳಗ, ದಾವಣಗೆರೆ. ✦ ಟೀ ಲಾಂಚ್ (ನಾಟಿ ಗ್ಯಾಂಗ್) ಗೆಳೆಯರ ಬಳಗ, ದಾವಣಗೆರೆ.
✦ ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ ಗೆಳೆಯರ ಬಳಗ ✦ ಮಾರುತಿ ಟೆಕ್ಸ್‌ಟೈಲ್ಸ್ ವಿದ್ಯಾರ್ಥಿ ಭವನ ಗೆಳೆಯರ ಬಳಗ
✦ ಈಶ್ವರ್‌ಸಿಂಗ್ ಕವಿತಾಳ ಆತ್ಮೀಯ ಸ್ನೇಹಿತರು ಹಾಗೂ ಬಂಧು-ಮಿತ್ರರು.

## ವಿಮಾನ ನಿಲ್ದಾಣಗಳಿಗೆ ರಾಯಣ್ಣ, ಚೆನ್ನಮ್ಮ ಹೆಸರಿಡಲು ಪರಿಶೀಲನೆ

ಬೆಳಗಾವಿ, ಡಿ. 13 – ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಾಗೂ ಬೆಳಗಾವಿ ವಿಮಾನ ನಿಲ್ದಾಣಕ್ಕೆ ವೀರರಾಣಿ ಕಿತ್ತೂರು ಚೆನ್ನಮ್ಮ ಹೆಸರಿಡಲು ಪರಿಶೀಲಿಸಲಾಗುತ್ತಿದೆ ಎಂದು ಭಾರೀ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ವಿಧಾನಸಭೆಗೆ ತಿಳಿಸಿದ್ದಾರೆ.

ನಾಮಕರಣ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಇದಕ್ಕಾಗಿ ವಿಧಾನಸಭೆ ಹಾಗೂ ಪರಿಷತ್ತುಗಳಲ್ಲಿ ನಿರ್ಣಯ ಅಂಗೀಕರಿಸಿ ಪ್ರಸ್ತಾವನೆ ಕಳಿಸಬೇಕಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಮಾತನಾಡಲಾಗುವುದು ಎಂದು ಸಚಿವ ಪಾಟೀಲ್ ಹೇಳಿದರು. ಕಾಂಗ್ರೆಸ್ ಶಾಸಕ ಎನ್.ಹೆಚ್. ಕೋನರೆಡ್ಡಿ ಹಾಗೂ ಶ್ರೀನಿವಾಸ (2ನೇ ಪುಟಕ್ಕೆ)

## ಸಂಶಿ ವೀರಣ್ಣ ನಿಧನ



ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್ ವಾಸಿ

**ಸಂಶಿ ವೀರಣ್ಣ**

ಇವರು ದಿನಾಂಕ 13.12.2023ರ ಬುಧವಾರ ಮಧ್ಯಾಹ್ನ 12.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.12.2023ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಮೊ : 98868 40861, 94810 38639




ಪಡೆಯಿರಿ ₹55 555 ರಿಂದ ₹2 55 555 ದವರೆಗೆ ಬಂಪರ್ ಉಳಿತಾಯ. ವಿವಿಧ ಮಾಡೆಲ್ ಹಾಗು ವೇರಿಯಂಟ್‌ಗಳ ಮೇಲೆ.

3 YEAR Unlimited** Kilometer Warranty
UPTO 7 YEARS Extended Warranty^
ಜನವರಿ 2024 ರಿಂದ ಬೆಲೆ ಏರಿಕೆಯ ಮೊದಲು ಖರೀದಿಸಿ
HYUNDAI

K J HYUNDAI
371/271, Avaragere, P B Road, **Davangere**, Ph: 7022042241, 7022001205, 7022001207, 9148005999.
BVKS Layout, Bheemasamudra Main Road, **Chitradurga**-577501, Ph: 9980759983, 7022001208, 7022426017, 9629868009, 7022898488.
NH-13, Holalkere Road, **Channagiri Branch** - 577213, Ph: 6366508866, 7022898487, 9148004999.
**Ranebennur** – Coming soon

Lowest cost of maintenance## | my Hyundai app | Hyundai Promise Certified Pre-Owned Car | To know more, WhatsApp us on 8447228019

*Terms & Conditions apply. Benefits include cash discount, exchange bonus and benefits for government or corporate employees, whichever is applicable. **3-year warranty or upto 1 00 000 km whichever is earlier for Grand i10 NIOS, AURA, i20 & i20 N line. 3-year unlimited km warranty is applicable for VENUE, VENUE N Line, CRETA, ALCAZAR, TUCSON, VERNA, KONA Electric and IONIQ 5. ^Upto 7 years extended warranty is applicable only for petrol variants. #Available in selected models only. ##CRETA (Petrol) and the new VENUE (Petrol) has lowest average yearly periodic maintenance service cost in its segment of ₹ 3 608 and ₹ 3 056 respectively for 5 years in Delhi. Source: Cardekho.com. HMIL reserves the right to withdraw/modify the scheme without prior notice. Visit your nearest Hyundai dealership for more details. Hyundai urges you to follow traffic rules – these are meant to keep you safe on roads. Offer for i20 and i20 N Line is for pre facelift model and for the old model stocks available only. 100% on road finance available for Salaried class and is at the sole discretion of financier. All offers mentioned is for car deliveries during December 2023.

# ರೈತರು, ಸೈನಿಕರ ಹೆಸರಿನಲ್ಲಿ ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಿದ ಕಾಶಿ ಜಗದ್ಗುರುಗಳು



ಹೊನ್ನಾಳಿ, ಡಿ.13- ಹಿರೇಕಲ್ಮಠವು ಈ ಭಾಗದ ಭಕ್ತರ ಭಾಗ್ಯದ ಬಾಗಿಲು ತೆರೆಯುವ ಹೆಬ್ಬಾಗಿಲಿದ್ದಂತೆ ಎಂದು ಕಾಶಿ ಪೀಠದ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಪಟ್ಟಣದ ಹಿರೇಕಲ್ಮಠದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಗುರು ಚನ್ನೇಶ್ವರ ಬೆಳ್ಳಿ ರಥೋತ್ಸವ, ಕದಳಿ ಕಾರ್ತಿಕ ಲಕ್ಷ ದೀಪೋತ್ಸವ, ಲಿಖಿತ ಜಪಯಜ್ಞ ಪುಸ್ತಕ ಬಿಡುಗಡೆ, ಸಂಸ್ಕೃತಿ-ಸಂಸ್ಕಾರ ಧಾರ್ಮಿಕ ಸಮಾರಂಭದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ಶಿಕ್ಷಣ-ಸಂಸ್ಕಾರ-ಆರೋಗ್ಯ ಕ್ಷೇತ್ರಗಳಲ್ಲಿ ಭಕ್ತಾದಿಗಳಿಗೆ ಶ್ರೀಮಠದಿಂದ ಮಹತ್ತರ ಕೊಡುಗೆಗಳನ್ನು ನೀಡುವ ಯೋಜನೆಗಳು ಪ್ರಕೃತಿ ಮುನಿಸಿನಿಂದ ಭೀಕರ ಬರಗಾಲ ತಲೆದೋರಿದ್ದರ ಪರಿಣಾಮವಾಗಿ ಬರುವ ವರ್ಷಕ್ಕೆ ಮುಂದೂಡಲಾಗಿದ್ದು, ಲಕ್ಷ ದೀಪೋತ್ಸವದ ಮೂಲಕ ಜನಕಲ್ಯಾಣ ಕಾರ್ಯಕ್ರಮದ ಶುಭಾರಂಭ ಮಾಡಲಾಗಿದೆ ಎಂದರು.

ಶ್ರೀಗಳ ಸಂಕಲ್ಪವು ಹಿರೇಕಲ್ಮಠದ ಕತೃತ್ವ ಶಕ್ತಿಯಿಂದ ನೆರವೇರಲಿದೆ ಎಂದು ತಿಳಿಸಿದರು. ಲಿಂ. ಶ್ರೀಗಳು ಭೌತಿಕವಾಗಿ ನಮ್ಮ ಜೊತೆಯಿಲ್ಲದಿದ್ದರೂ ಅವ್ಯಕ್ತವಾಗಿದ್ದು, ತನ್ನ ಗುರು ಪರಂಪರೆಯನ್ನು ಈಗಿನ ಶ್ರೀಗಳ ಮೂಲಕ ಶ್ರೀಮಠದ ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತಿದ್ದಾರೆ. ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹಿರೇಕಲ್ಮಠವನ್ನು ಲಿಂ.ಶ್ರೀಗಳ ಸಂಕಲ್ಪದಂತೆ ತುಂಬಾ ಅತ್ಯುತ್ತಮವಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀಮಠದ ಪರಿಸರವನ್ನು ನೋಡಿದರೆ ಇಲ್ಲಿನ ಮೂಲಪುರುಷರ ಪವಾಡಗಳು ಕಾಣುತ್ತವೆ. ಶ್ರೀಶೈಲ ಪೀಠದ ಎರಡನೇ ದೊಡ್ಡ ಶಾಖಾಮಠ ಇದಾಗಿದ್ದು, ಲಕ್ಷಾಂತರ ಭಕ್ತಾದಿಗಳನ್ನು ಸಂಪಾದಿಸಿದ ಕೀರ್ತಿ ಸಲ್ಲುತ್ತದೆ.

ಶ್ರೀ ಶೈಲ ಜಗದ್ಗುರುಗಳ ಕತೃ ಸಮಾಧಿಯನ್ನು ಹೊಂದಿರುವ ಪುಣ್ಯ ಸ್ಥಳ ಇದಾಗಿದೆ ಎಂದು ತಿಳಿಸಿದರು.

ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಲಿಂ.ಶ್ರೀಗಳ ಸಂಕಲ್ಪದಂತೆ ಶ್ರೀಮಠದಲ್ಲಿ ಚನ್ನಪ್ಪಸ್ವಾಮಿ ಜನಕಲ್ಯಾಣ ಟ್ರಸ್ಟ್ ಪ್ರಾರಂಭಿಸಿ ಅದರ ಮೂಲಕ 100 ಬೆಡ್ ಆಸ್ಪತ್ರೆ, ನರ್ಸಿಂಗ್, ಫಾರ್ಮಸಿ ಕಾಲೇಜ್, ಸಿಬಿಎಸ್ಇ ವಸತಿಯುತ ಶಾಲೆ, ಚನ್ನಪ್ಪಸ್ವಾಮಿಗಳ ಸುವರ್ಣ ಮೂರ್ತಿ, ಕೋಟಿ ದೀಪೋತ್ಸವ, ಕೋಟಿ ಬಿಲ್ವಾರ್ಚನೆಗಳನ್ನು ಶ್ರೀ ಮಠದ ಭಕ್ತಾದಿಗಳ ಶ್ರೇಯೋಭಿವೃದ್ಧಿಗಾಗಿ ಹಾಕಿಕೊಳ್ಳಲಾಗಿದ್ದು, ಬರಗಾಲವಿರುವ ಪ್ರಯುಕ್ತ ಎಲ್ಲಾ ಯೋಜನೆಗಳನ್ನು ಮುಂದಿನ ವರ್ಷಕ್ಕೆ ಮುಂದೂಡಿ ಪ್ರತೀ ವರ್ಷದ ಕದಳಿ ಕಾರ್ತಿಕೋತ್ಸವದ ಪದ್ಧತಿಯಂತೆ ಇಂದು 100505 ದೀಪಗಳನ್ನು ಹಚ್ಚುವುದರ ಮೂಲಕ ಬೃಹತ್ ಯೋಜನೆಗಳಿಗೆ ಈ ಮೂಲಕ ಚಾಲನೆ ನೀಡಲಾಗಿದೆ.

ಮುಂಬರುವ ವರ್ಷದಲ್ಲಿ 1 ತಿಂಗಳ ಪರ್ಯಂತ ಕಾಶಿ ಜಗದ್ಗುರುಗಳು ಶ್ರೀಮಠದಲ್ಲಿ ವಾಸ್ತವ್ಯ ಹೂಡಿ ಕೋಟಿ ದೀಪೋತ್ಸವ, ಕೋಟಿ ಬಿಲ್ವಾರ್ಚನೆ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿ ಭಕ್ತರನ್ನು ಆಶೀರ್ವದಿಸಲಿದ್ದಾರೆ ಎಂಬ ಆಶಾ ಭಾವನೆ ವ್ಯಕ್ತಪಡಿಸಿದರು.

ಶಿವಮೊಗ್ಗದ ವಿಘ್ನೇಶ್ವರ ಹೆಲ್ತ್ ಕೇರ್‌ನ ಶ್ರೀಮತಿ ಲಲಿತಮ್ಮ ಕೋಂ.ಲಿಂ.ಕೊಟ್ರಯ್ಯ ಮತ್ತು ಮಕ್ಕಳು ಹಾಗೂ ಲಲಿತಮ್ಮ ಚನ್ನವೀರಯ್ಯ ಮತ್ತು ಮಕ್ಕಳು ಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಿದ್ದರು.

ಧರ್ಮಸಭೆಯಲ್ಲಿ ದಿಡಗೂರಿನ ಅಣ್ಣಪ್ಪ ಸ್ವಾಮಿ, ಹೆಚ್.ಎ.ಉಮಾಪತಿ, ಹೆಚ್.ಎ.ರಾಜಪ್ಪ, ಹೊನ್ನಾಳಿ ಮಲ್ಲೇಶಪ್ಪ, ಕೋರಿ ದೀಪು, ದಾಕ್ಷಾಯಣಮ್ಮ ನಿಂಬೆಕಾಯಿ ಮತ್ತಿತರರು ಉಪಸ್ಥಿತರಿದ್ದರು.

ಪತ್ರಕರ್ತ ಹೆಚ್.ಸಿ.ಮೃತ್ಯುಂಜಯ ಪಾಟೀಲ್, ಲಿಖಿತ ಜಪಯಜ್ಞ ಪುಸ್ತಕದ ಲೇಖಕರಾದ ಹೊನ್ನಾಳಿ ಮಲ್ಲೇಶಪ್ಪ ಅವರ ವ್ಯಕ್ತಿ ಪರಿಚಯ ಮಾಡಿದರು.

ಹೊನ್ನಾಳಿ ಮಲ್ಲೇಶಪ್ಪ ವಿರಚಿತ ಲಿಖಿತ ಜಪಯಜ್ಞ ಪುಸ್ತಕವನ್ನು ಕಾಶಿ ಜಗದ್ಗುರುಗಳು ಬಿಡುಗಡೆಗೊಳಿಸಿದರು.

ಚನ್ನಪ್ಪಸ್ವಾಮಿ ವಿದ್ಯಾಪೀಠದ ಕಾರ್ಯದರ್ಶಿ ಚನ್ನಯ್ಯ ಬೆನ್ನೂರ್‌ಮಠ ಸ್ವಾಗತಿಸಿ, ವ್ಯವಸ್ಥಾಪಕ ಎಂ.ಪಿ.ಎಂ.ಚನ್ನಬಸಯ್ಯ ನಿರೂಪಿಸಿದರು.

## ಜಯಕರ್ನಾಟಕ ಸಂಘಟನೆ ಹೋರಾಟಕ್ಕೆ ಎಸ್.ರಾಮಪ್ಪ ಸಂಪೂರ್ಣ ಬೆಂಬಲ

ಹರಿಹರ, ಡಿ,13- ನಗರದ ಲೋಕೋಪಯೋಗಿ ಇಲಾಖೆ ಕಚೇರಿಯ ಮುಂದೆ ಜಯಕರ್ನಾಟಕ ಸಂಘಟನೆ ವತಿಯಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಮಾಜಿ ಶಾಸಕ ಎಸ್.ರಾಮಪ್ಪ ಭೇಟಿ ಕೊಟ್ಟು ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದರ ಜೊತೆಗೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇರುವುದರಿಂದ ಇನ್ನೂ ಐದು ದಿನಗಳಲ್ಲಿ ರಸ್ತೆ ದುರಸ್ತಿ ಪಡಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಎಸ್. ರಾಮಪ್ಪ ಅವರು, ನಾನು ಶಾಸಕರಾಗಿದ್ದ ಸಂದರ್ಭದಲ್ಲಿ ಎರಡು ಬಾರಿ ಈ ವಿಚಾರಕ್ಕೆ ಗಲಾಟೆ ಆಯಿತು, ಕಾರಣ ನಾನು ಎರಡು ಕೋಟಿ ಐವತ್ತು ಲಕ್ಷ ರೂ. ಬಿಡುಗಡೆ ಮಾಡಿಸಿಕೊಂಡು ರಸ್ತೆಯನ್ನು ದುರಸ್ತಿ ಪಡಿಸಲು ಮುಂದಾದರೆ, ಶಾಸಕ ಬಿ.ಪಿ. ಹರೀಶ್ ತಮ್ಮ ಸರ್ಕಾರ ಇದೆ ಎಂದು ದಾಂಧಲೆ ಮಾಡಿ ಅಡ್ಡಿಪಡಿಸಿದರು.

ಆಗ ಸರ್ಕಾರ ಹಣವನ್ನು ವಾಪಸ್ ಪಡೆಯಿತು. ತದನಂತರ ಮತ್ತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಇದ್ದ ಸಮಯದಲ್ಲಿ ಮತ್ತೆ ಕಾಮಗಾರಿ ಆರಂಭ ಮಾಡುವುದಕ್ಕೆ ಮುಂದಾದರೆ, ಸಂಸದ ಜಿ.ಎಂ. ಸಿದ್ದೇಶ್ವರ್ ಹಾಗೂ ಶಾಸಕ ಬಿ.ಪಿ. ಹರೀಶ್, ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಸೇರಿದಂತೆ, ಇತರೆ ಬಿಜೆಪಿ ಮುಖಂಡರು ತಡೆದರು.

ಕಾರಣ ಅವರಿಗೆ ಈ ರಸ್ತೆಯಲ್ಲಿ ದರ್ಗಾ ಇರೋದರಿಂದ ಇಷ್ಟೆಲ್ಲ ಮಾಡುವುದಕ್ಕೆ ಕಾರಣವಾಯಿತು. ಶಾಸಕ ಬಿ.ಪಿ. ಹರೀಶ್ ಅಧಿಕಾರಿಗಳ ಮೇಲೆ ಪ್ರಭಾವ ಬೀರಲು ಮುಂದಾಗಿದ್ದಾರೆ. ಅವರು ಹೇಳಿದಂತೆ ಅಧಿಕಾರಿಗಳು ಕೇಳಲಿಲ್ಲ ಎಂದಾಗ ಇಷ್ಟೆಲ್ಲಾ ನಡೆದಿದ್ದು, ಸರ್ಕಾರ ನಮ್ಮದೇ ಇರುವುದರಿಂದ ನಾನು ಇನ್ನೂ ನಾಲ್ಕು, ಐದು ದಿನಗಳಲ್ಲಿ ರಸ್ತೆಯನ್ನು ದುರಸ್ತಿ ಪಡಿಸಲು ಮುಂದಾಗುವುದಾಗಿ ಹೇಳಿದರು.

ಜಯಕರ್ನಾಟಕ ಸಂಘಟನೆ ಮುಖಂಡ ಗೋವಿಂದ ಮಾತನಾಡಿ, ನಮಗೆ ಯಾವುದೇ ಪಕ್ಷ ಅಥವಾ ಜಾತಿ ಮುಂದೆ ಇಟ್ಕೊಂಡು ಹೋರಾಟ ಮಾಡುತ್ತಿಲ್ಲ. ನಮಗೆ ಬೇಕಾಗಿರುವ ರಸ್ತೆಯನ್ನು ಆದಷ್ಟು ಬೇಗ ದುರಸ್ತಿ ಪಡಿಸಿ, ಆ ಮೂಲಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕು ಎಂಬುದಾಗಿದೆ. ಹಾಗಾಗಿ ಮಾಜಿ ಶಾಸಕ ರಾಮಪ್ಪ ಐದು ದಿನಗಳಲ್ಲಿ ದುರಸ್ತಿ ಪಡಿಸುವುದಾಗಿ ಭರವಸೆಯನ್ನು ನೀಡಿದ್ದಾರೆ. ಆದರೆ ರಸ್ತೆಯನ್ನು ದುರಸ್ತಿ ಪಡಿಸುವವರೆಗೆ ನಮ್ಮ ಧರಣಿ ನಿರಂತರವಾಗಿ ಮಾಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಭಾಗ್ಯಮ್ಮ, ಜಯಕರ್ನಾಟಕ ಸಂಘಟನೆಯ ಆನಂದ್, ಮಂಜುನಾಥ್ ಶಬರಿಶ ಇತರರು ಹಾಜರಿದ್ದರು.

## ರಾಜ್ಯಮಟ್ಟದ ಓಪನ್ ಕರಾಟೆ ಚಾಂಪಿಯನ್ ಶಿಪ್ : ಹೊರಟ್ಟಿ ಕ್ರೀಡಾ ಅಕಾಡೆಮಿಗೆ ಪ್ರಶಸ್ತಿ



ದಾವಣಗೆರೆ, ಡಿ. 13- ಶಿವಮೊಗ್ಗದಲ್ಲಿ ಮಹಾತ್ಮ ಗಾಂಧೀಜಿ ಅವರ ಸ್ಮರಣಾರ್ಥ ಇತ್ತೀಚೆಗೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಓಪನ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ನಗರದ ಹೊರಟ್ಟಿ ಕ್ರೀಡಾ ಅಕಾಡೆಮಿಯ ವಿದ್ಯಾರ್ಥಿಗಳು ಭಾಗವಹಿಸಿ ಕಟಾಸ್‌ನಲ್ಲಿ 15 ಪದಕಗಳು ಹಾಗೂ ಕುಮುಟೆಯಲ್ಲಿ 9 ಪದಕ ಪಡೆದಿದ್ದಾರೆ. ವಿಜೇತರನ್ನು ಅಕಾಡೆಮಿಯ ಅನಿಲ್ ಹೊರಟ್ಟಿ ಅಭಿನಂದಿಸಿದ್ದಾರೆ.

## ಭಾಗ್ಯ ಶೀಘ್ರ ಅನುಷ್ಠಾನ

**(1ನೇ ಪುಟದಿಂದ)** ರಾಜ್ಯದಲ್ಲಿನ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಪ್ರಸಕ್ತ ತಿಂಗಳಾಂತ್ಯದೊಳಗೆ ಬೆಳೆ ವಿಮೆ ಹಣ ಪಾವತಿಯಾಗಲಿದೆ ಎಂದರು.

ಶರಣು ಸಲಗಾರ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈ ವರ್ಷ ಬರ ಹಿಂದೆಂದಿಗಿಂತಲೂ ತೀವ್ರವಾಗಿದೆ, ಪ್ರಸಕ್ತ ಸಾಲಿನ ಬೆಳೆ ಕಟಾವು ಸಮೀಕ್ಷೆ ಪೂರ್ಣಗೊಂಡಿದ್ದು, ಉಳಿದ ರೈತರಿಗೂ ವಿಮೆ ಹಣ ಶೀಘ್ರ ತಲುಪಲಿದೆ ಎಂದರು.

## ಸ್ವಂತ ಕಟ್ಟಡ ಒದಗಿಸಲು ಕ್ರಮ

**(1ನೇ ಪುಟದಿಂದ)** ಮಾಡಲಾಗುತ್ತಿದೆ, ಅನುಷ್ಠಾನದಲ್ಲಿನ ಕೊರತೆಗಳನ್ನು ಸರ್ಕಾರ ಗಮನಿಸಿದೆ, ಅವುಗಳನ್ನು ಪರಿಹರಿಸಿ, ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಲು ಇಲಾಖೆ ಮುಂದಾಗಿದೆ. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗವು ದಾಖಲಾಗುವ ನಿರ್ದಿಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುತ್ತದೆ ಎಂದರು.

## ರಾಯಣ್ಣ, ಚೆನ್ನಮ್ಮ ಹೆಸರಿಡಲು ಪರಿಶೀಲನೆ

**(1ನೇ ಪುಟದಿಂದ)** ಮಾನೆ ಅವರು ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದಾಗ ಸಚಿವರು ಉತ್ತರಿಸಿದರು. ಬಿಜೆಪಿ ಶಾಸಕ ಅರವಿಂದ ಬೆಲ್ಲದ್ ಅವರೂ ಸಹ ಈ ಕ್ರಮವನ್ನು ಬೆಂಬಲಿಸಿದರು.

## ಪ್ಲಾಟ್‌ಫಾರಂ ಮೇಲೆ ನೀರಿನ ಟ್ಯಾಂಕ್ ಬಿದ್ದು ಹತ್ತು ಜನರಿಗೆ ಗಾಯ

ಕೊಲ್ಕೊತಾ, ಡಿ. 13 -ಪಶ್ಚಿಮ ಬಂಗಾಳದ ಬರ್ದಮಾನ್ ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಮೇಲೆ ಬೃಹತ್ ಓವರ್‌ಹೆಡ್ ಟ್ಯಾಂಕ್ ಬಿದ್ದು ಹತ್ತು ಜನರಿಗೆ ಗಾಯಗಳಾಗಿವೆ.

ಎರಡು ಹಾಗೂ ಮೂರನೇ ಪ್ಲಾಟ್‌ಫಾರಂನಲ್ಲಿ ರೈಲಿಗಾಗಿ ಕಾಯುತ್ತಿದ್ದವರ ಮೇಲೆ ಲೋಹದ ಟ್ಯಾಂಕ್ ಬಿದ್ದಿದೆ. ಈ ಘಟನೆಗೆ ಸಂಬಂಧಿಸಿದಂತೆ ಮೂವರು ರೈಲ್ವೆ ಉದ್ಯೋಗಿಗಳನ್ನು ಅಮಾನತ್ತುಗೊಳಿಸಲಾಗಿದೆ.

## ಭಾರತ ಇನ್ನೂ ಸರ್ವಜನಾಂಗದ ಶಾಂತಿಯ ತೋಟ ಆಗಿಲ್ಲ

### ಕಲಬುರ್ಗಿಯಲ್ಲಿ ಡಾ.ಅಂಬೇಡ್ಕರ್ ಮಹಾಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಪಂಡಿತಾರಾಧ್ಯ ಶ್ರೀ ವಿಷಾದ



ಸಾಣೇಹಳ್ಳಿ, ಡಿ. 13- ಬುದ್ಧ, ಬಸವ, ಗಾಂಧಿ ಮತ್ತು ಅಂಬೇಡ್ಕರ್ ಮುಂತಾದವರು ದೇಶದಲ್ಲಿ ನಮ್ಮ ಪ್ರಜ್ಞೆಯನ್ನು ಜಾಗೃತಗೊಳಿಸಿದರು. ಮಲಗಿದ ಜನರನ್ನು ಎಚ್ಚರಿಸಿದವರು. ಜಡತ್ವವನ್ನು ಹೋಗಲಾಡಿಸಿದವರು ಎಂದು ಶ್ರಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಕಲಬುರ್ಗಿಯ ಡಾ. ಬಿ. ಆರ್ ಅಂಬೇಡ್ಕರ್ ಪ್ರತಿಮೆಯ ಸ್ಥಳದಲ್ಲಿ ಜರುಗಿದ 67ನೇ ಮಹಾ ಪರಿನಿರ್ವಾಣ ದಿನ ಮತ್ತು ಡಾ. ಅಂಬೇಡ್ಕರರ ಚಳವಳಿ ಕುರಿತ ಪುಸ್ತಕ ಬಿಡುಗಡೆ ಮಾಡಿ ಸ್ವಾಮೀಜಿ ವಿಶೇಷ ಉಪನ್ಯಾಸ ನೀಡಿದರು.

ಭಾರತ ಸರ್ವ ಜನಾಂಗದ ಶಾಂತಿಯ ತೋಟ ಎಂದು ಕುವೆಂಪು ಹೇಳಿದರು. ಆದರೆ ಇನ್ನೂ ಸರ್ವಜನಾಂಗದ ಶಾಂತಿಯ ತೋಟ ಆಗಿಲ್ಲ. ಎಲ್ಲ ಕಡೆ ಏನೇನೋ ಕೋಲಾಹಲ, ಗಲಭೆ, ಜಾತಿಯ ಸಂಘರ್ಷ, ಬಡವ ಮತ್ತು ಶ್ರೀಮಂತರ ನಡುವಿನ ಹೋರಾಟ, ಸ್ತ್ರೀ-ಪುರುಷರ ಅಸಮಾನತೆ ಇವು 21ನೆಯ ಶತಮಾನದಲ್ಲೂ ಹಾಗೆಯೇ ಉಳಿದುಕೊಂಡು ಬಂದಿರುವುದು ವಿಷಾದದ ಸಂಗತಿ ಎಂದು ನುಡಿದರು.

ಸ್ವಾತಂತ್ರ್ಯ ಯಾರಿಗೆ ಬಂದಿದೆ? ಎನ್ನುವ ಪ್ರಶ್ನೆ ಹಾಕಿದರೆ ಕೆಲವರಿಗೆ ಮಾತ್ರ ಬಂದಿದೆ ಅಂತ ಬಹುತೇಕ ಜನರಲ್ಲಿ ಈಗಲೂ ಅನುಮಾನ ಮೂಡುತ್ತಾ ಇದೆ. ಬುದ್ಧ, ಬಸವ, ಅಂಬೇಡ್ಕರ್ ಹೋರಾಟವನ್ನು ನೆನಪಿಸಿಕೊಂಡು ಆ ದಾರಿಯಲ್ಲಿ ನಡೆಯುವಂಥ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ಬುದ್ಧ ಶ್ರೀಮಂತರ ಮನೆಯಲ್ಲಿ ಹುಟ್ಟಿದರೂ ಬಡತನ, ದುಃಖ, ನೋವು, ಸಾವು, ರೋಗ, ಮುಪ್ಪುಗಳನ್ನು ಕಂಡಾಗ, ಇವುಗಳಿಗೆ ಪರಿಹಾರ ಇಲ್ಲವೇ ಎಂದು ಯೋಚನೆ ಮಾಡಿದಂಥವರು. ಆ ಕಾರಣಕ್ಕಾಗಿ ಹುಟ್ಟಿದ ಮನೆಯನ್ನು, ಕಟ್ಟಿಕೊಂಡ ಹೆಂಡತಿಯನ್ನು, ಮುದ್ದಾದ ಮಗುವನ್ನು ಬಿಟ್ಟು ಜ್ಞಾನದ ಹುಡುಕಾಟ ಆರಂಭಿಸಿ. ಅನೇಕ ಸಾಧು ಸಂತರರನ್ನು ಕಾಣುತ್ತಾರೆ. ಆದರೆ ಇದಕ್ಕೆ ಸೂಕ್ತ ಪರಿಹಾರ ಸಿಗದೇ ಕೊನೆಗೆ ತಮಗೆ ತಾವೇ ಅದಕ್ಕೆ ಪರಿಹಾರ ಕಂಡುಕೊಂಡು ಬುದ್ಧ ಆಗ್ತಾರೆ. ಬುದ್ಧ ಎಂದರೆ ತನಗೆ ತಾನೇ ಅರಿವನ್ನು ಪಡೆದುಕೊಂಡವನು. ಅರಿವನ್ನು ಪಡೆದುಕೊಂಡು ಸಮಾಜದಲ್ಲಿರುವ ಅಜ್ಞಾನವನ್ನು ಕಳೆಯಲಿಕ್ಕೆ ಹೋರಾಟ ಮಾಡಿದವರು. ಆದರೆ ಬುದ್ಧನ ಹೋರಾಟವನ್ನು ಭಾರತೀಯರು ಅರ್ಥ ಮಾಡಿಕೊಳ್ಳಲಿಲ್ಲ. ಪಟ್ಟಭದ್ರ ಹಿತಾಸಕ್ತರು ಬುದ್ಧದೇವನನ್ನು ಈ ನಾಡಿನಿಂದ ಓಡಿಸಿದರು.

ನಂತರ ಬಸವಣ್ಣನವರು ಬಂದರು. ಬಸವಣ್ಣನವರು ಯಾವ ಧರ್ಮದಲ್ಲಿ ಅಸಮಾನತೆ, ಅನ್ಯಾಯ, ಶೋಷಣೆ ಇದೆಯೋ ಅವುಗಳ ವಿರುದ್ಧ ಬಂಡೆದ್ದರು. ಧರ್ಮ ಎಂದರೆ ಭಯವಲ್ಲ; ದಯೆ ಎಂದು ಹೇಳಿದರು. ಈಗಲೂ ಧರ್ಮ ಎಂದರೆ ಕೋಣ, ಕುರಿ, ಕೋಳಿ ಕಡಿದು ದೇವರಿಗೆ ಅರ್ಪಿಸಬೇಕೆಂಬ ಕೆಟ್ಟ ಮೂಢಾಚರಣೆ ಇದೆ. ಇವೆಲ್ಲ ಪಟ್ಟಭದ್ರ ಹಿತಾಸಕ್ತರು ನಮ್ಮನ್ನು ತುಳಿಯಲಿಕ್ಕೆ ಮಾಡಿದಂತಹ ಸಂಚುಗಳು ಎಂದು ಹೇಳಿದರು.


ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ತೊಡೆದು ಹಾಕಲಿಕ್ಕೆ ಏನೆಲ್ಲಾ ಹೋರಾಟ ಮಾಡಿದರು. ನನಗೇನಾದರೂ ಮುಂದಿನ ಜನ್ಮವೇನಾದರೂ ಇದ್ದರೆ ಅಸ್ಪೃಶ್ಯನಾಗಿಯೇ ಹುಟ್ಟುತ್ತೇನೆಂದು ಹೇಳಿದರು. ಇದಕ್ಕಿಂತ ವಿಭಿನ್ನವಾಗಿ ಆಲೋಚನೆ ಮಾಡಿದವರು ಬಾಬಾ ಸಾಹೇಬ್ ಅಂಬೇಡ್ಕರ್‌ರವರು. ಮುಂದಿನ ಜನ್ಮದಲ್ಲಿ ಏಕೆ ಹುಟ್ಟಿ ಬರ್ತೀರಿ ಇದೇ ಜನ್ಮದಲ್ಲಿ ಅಸ್ಪೃಶ್ಯತೆಯನ್ನು ಯಾಕೆ ತೊಡೆದು ಹಾಕಬಾರದೆಂದು ಗಾಂಧೀಜಿಯವರನ್ನು ಅಂಬೇಡ್ಕರ್ ಪ್ರಶ್ನೆ ಮಾಡ್ತಾರೆ.

ಅಂಬೇಡ್ಕರ್‌ರವರು ಬಾಲ್ಯದಿಂದಲೂ ಯಾತನೆ ಅನುಭವಿಸಿದರು. ಬಹುಶಃ ಅವರಂತಹ ಪ್ರಗತಿಪರ ಚಿಂತಕರು ಭಾರತದಲ್ಲಿ ಮತ್ತೊಬ್ಬರು ಹುಟ್ಟಿಲ್ಲ. ವಿಶ್ವದಲ್ಲೇ ಇಲ್ಲದೇ ಇರುವ ಸಂವಿಧಾನವನ್ನು ರಚನೆ ಮಾಡಿದರು. ಸಂವಿಧಾನದಲ್ಲಿ ತುಂಬಿರುವ ಶಕ್ತಿ ಅದ್ಭುತವಾದುದು. ಅದಕ್ಕಾಗಿಯೇ ನಾವೆಲ್ಲರೂ ಹೇಳುವುದು, ಭಾರತೀಯರ ಪ್ರಥಮ ಧರ್ಮ ಗ್ರಂಥ 'ಸಂವಿಧಾನ' ಅಂತ. ವಿಷಾದದ ಸಂಗತಿ ಎಂದರೆ, ಎಷ್ಟು ನಮ್ಮ ಜನಪ್ರತಿನಿಧಿಗಳು ಸಂವಿಧಾನವನ್ನು ಓದಿದ್ದಾರೋ ಗೊತ್ತಿಲ್ಲ ಎಂದರು.

ಬಿಕ್ಕುಣಿ ಸುಮಾನಾ ಅವರು ಕಾರ್ಯಕ್ರಮದ ಸಾನಿಧ್ಯ ವಹಿಸಿ ಪಂಚಶೀಲ ತತ್ವಗಳನ್ನು ಬೋಧಿಸಿದರು. ಕಲಬುರ್ಗಿ ಮಹಾನಗರ ಪಾಲಿಕೆ ಆಯುಕ್ತ ರಮೇಶ ಪಟ್ಟೇದಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ. ಅಪ್ಪಗೆರೆ ಸೋಮಶೇಖರ್ ಕೃತಿಯನ್ನು ಪರಿಚಯಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಸೂರ್ಯಕಾಂತ ಸುಜಾತ ಮತ್ತು ಉಪನ್ಯಾಸಕ ಶರಣಬಸಪ್ಪ ವಡ್ಡನಕೇರಿ ಅತಿಥಿಗಳಾಗಿ ಮಾತನಾಡಿದರು.

ರವೀಂದ್ರ ಶಾಬಾದಿ, ಪ್ರಬುದ್ಧ ಹುಬ್ಬಳ್ಳಿ, ಮಲ್ಲಿಕಾರ್ಜುನ ಸುಬಾನೆ ಉಪಸ್ಥಿತರಿದ್ದರು. ಆರಂಭಕ್ಕೆ ಡಾ. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.


## ಭಾವಪೂರ್ಣ ಶ್ರದ್ಧಾಂಜಲಿ



ನಮ್ಮನ್ನಗಲಿದ

**ಶ್ರೀ ಕೆ.ಎನ್. ಓಂಕಾರಪ್ಪ**

ಅಧ್ಯಕ್ಷರು, ಚೇತನ ವಿದ್ಯಾಸಂಸ್ಥೆ (ರಿ), ದಾವಣಗೆರೆ
ನಿರ್ದೇಶಕರು,
ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ
ಮಾಜಿ ನಿರ್ದೇಶಕರು,
ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟೆ
ಮಾಜಿ ಸೆನೆಟ್ ಸದಸ್ಯರು,
ಕುವೆಂಪು ವಿಶ್ವವಿದ್ಯಾನಿಲಯ
ಹಾಗೂ ಬಿಜೆಪಿ ಹಿರಿಯ ಮುಖಂಡರು.

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

- **ದೇವರಮನಿ ಶಿವಕುಮಾರ್**
  ಜಿಲ್ಲಾಧ್ಯಕ್ಷರು, ಅಖಿಲ ಭಾರತ ವೀರಶೈವ-ಲಿಂಗಾಯಿತ ಮಹಾಸಭಾ, ದಾವಣಗೆರೆ.
- **ದೇವರಮನಿ ಶಿವರಾಜ್**
  ವೀರಶೈವ-ಲಿಂಗಾಯಿತ ಸಮಾಜದ ಮುಖಂಡರು
- **ದೇವರಮನಿ ಮುರುಗೇಶ್**
  ಅಧ್ಯಕ್ಷರು, ಕರ್ನಾಟಕ ಯೂತ್ಸ್ ಅಸೋಸಿಯೇಷನ್


## ಮೆಳ್ಳೇಕಟ್ಟೆ ಗಿರಿಜಮ್ಮ ನಿಧನ



ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆ ಗ್ರಾಮದ ವಾಸಿ ಚಿಕ್ಕವ್ವನಾಗ್ತಿಹಳ್ಳಿ ಶಿಕ್ಷಕರಾದ ದಿ. ವೀರಪ್ಪ ಇವರ ಪತ್ನಿ ಹಾಗೂ ಸಿ.ವಿ. ತಿಮ್ಮೇಶ್ ಹಾಗೂ ಸಿ.ವಿ. ಜಯಪ್ರಕಾಶ್ ಇವರ ತಾಯಿಯವರಾದ ಶ್ರೀಮತಿ ಗಿರಿಜಮ್ಮ (90) ಇವರು ದಿನಾಂಕ 13.12.2023ರ ಬುಧವಾರ ಬೆಳಿಗ್ಗೆ 7.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.12.2023ರ ಗುರುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆ ಗ್ರಾಮದಲ್ಲಿ ಮೃತರ ಜಮೀನಿನಲ್ಲಿ ನೆರವೇರಲಿದೆ.

## ಟಿ. ರಂಗನಾಥ್ ನಿಧನ



ದಾವಣಗೆರೆ ಬೂದಾಳ್ ರಸ್ತೆ ನಿವಾಸಿ ಟಿ. ರಂಗನಾಥ (49) ಜಿಲ್ಲಾ ಕಾಂಗ್ರೆಸ್ ಮುಖಂಡರು ಇವರು ದಿನಾಂಕ 13.12.2023ರ ಬುಧವಾರ ಬೆಳಿಗ್ಗೆ 7 ಕ್ಕೆ ಹೃದಯಾಘಾತದಿಂದ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.12.2023ರ ಗುರುವಾರ ಮಧ್ಯಾಹ್ನ 2 ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

## ಮೂಲ ಬಿಜೆಪಿ - ಅಟಲ್ ಬಿಹಾರಿ ವಾಜಪೇಯಿ ಬಳಗದ ಪದಾಧಿಕಾರಿಗಳ ಆಯ್ಕೆ


ದಾವಣಗೆರೆ, ಡಿ.13- ಜಿಲ್ಲಾ ಮೂಲ ಬಿಜೆಪಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಬಳಗದ ಪದಾಧಿಕಾರಿಗಳ ಆಯ್ಕೆ ನಡೆಯಿತು. ಜಿಲ್ಲಾ ಗೌರವ ಅಧ್ಯಕ್ಷರಾಗಿ ಆವರಗೊಳ್ಳ ಷಣ್ಮುಖಯ್ಯ ಆಯ್ಕೆಯಾಗಿದ್ದಾರೆ. ಜಿಲ್ಲಾ ಅಧ್ಯಕ್ಷರಾಗಿ ಕೃಷ್ಣ ಮೂರ್ತಿ ಪವಾರ್, ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಎಸ್. ಲಿಂಗರಾಜು, ಉಪಾಧ್ಯಕ್ಷರುಗಳಾಗಿ ಶಿವಕುಮಾರಸ್ವಾಮಿ, ಚಂದ್ರಾ ನಾಯಕ್, ಅಣಬೇರು ಶಿವಮೂರ್ತಿ, ಬೆಣ್ಣೆ ದೋಸೆ ರವಿ, ಗೋಪಾಲರಾವ್ ಸಾವಂತ್, ಕೆ.ಟಿ. ಕಲ್ಲೇಶ್ ಆಯ್ಕೆಯಾದರು. ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿ ವಡ್ಡನಹಳ್ಳಿ ಸಿದ್ದೇಶ್, ಹೆಚ್.ಎಂ. ನಾಗರಾಜ್, ಶಂಕರ್ ಸಾ ಲದ್ವಾ ಹರಿಹರ, ಕೆ. ಶಿವಶಂಕರ್ ನೇಮಕಗೊಂಡಿದ್ದಾರೆ. ಜಿಲ್ಲಾ ವಕ್ತಾರರಾಗಿ ಮಾಲತೇಶ ಗುಪ್ತಾ ಹಾಗೂ ಮಹಿಳಾ ಜಿಲ್ಲಾ ಅಧ್ಯಕ್ಷರಾಗಿ ಸರೋಜಮ್ಮ ದೀಕ್ಷಿತ್ ಆಯ್ಕೆಯಾಗಿದ್ದಾರೆ.

## ನೈತಿಕ ಪೊಲೀಸ್‌ಗಿರಿ : ಶಿಕ್ಷೆ ನೀಡಲು ಕಾಂಗ್ರೆಸ್ ಮನವಿ

ದಾವಣಗೆರೆ, ಡಿ.13- ಕಾನೂನು ಸುವ್ಯವಸ್ಥೆಗೆಂದು ಸಂವಿಧಾನದಲ್ಲಿ ಕೆಲವು ಕಾನೂನು ರೂಪಿಸಿದ್ದು, ಪ್ರತಿಯೊಬ್ಬರು ಸಂವಿಧಾನಕ್ಕೆ ಗೌರವ ನೀಡಿ ನಡೆದುಕೊಳ್ಳಬೇಕು. ಕಾನೂನು ಕೈಗೆತ್ತಿಕೊಂಡವರು ಯಾರೇ ಆಗಲೀ ತಕ್ಕ ಶಿಕ್ಷೆ ನೀಡಬೇಕೆಂದು ಜಿಲ್ಲಾ ಕಾಂಗ್ರೆಸ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಮಾಡಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್. ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಯೂಬ್ ಪೈಲ್ವಾನ್, ಕೆ.ಜಿ.ಶಿವಕುಮಾರ್ ಅವರು ಕಾನೂನು ಕಾಪಾಡುವ ಹೆಸರಿನಲ್ಲಿ ನೈತಿಕ ಪೊಲೀಸ್‌ಗಿರಿ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಕಳೆದ 3-4 ದಿನಗಳ ಹಿಂದೆ ಯುವಕನೊಬ್ಬನಿಗೆ ಕೆಲವು ಕಿಡಿ ಗೇಡಿಗಳು ನೈತಿಕ ಪೊಲೀಸ್‌ಗಿರಿ ಹೆಸರಿನಲ್ಲಿ ಥಳಿಸಿದ್ದು, ಇಂತಹ ಘಟನೆಗಳು ನಗರದಲ್ಲಿ ಆಗಬಾರದಿತ್ತು ಎಂದಿರುವ ಅವರು ಗಳು, ನೈತಿಕ ಪೊಲೀಸ್ ಗಿರಿ ನಡೆಸಿರುವವರ ವಿರುದ್ಧ ಕ್ರಮ ಕೈಗೊಳ್ಳುವ ಮೂಲಕ ಪೊಲೀಸ್ ಇಲಾಖೆ ಮುಂದೆ ಇಂತಹ ದುಷ್ಕೃತ್ಯಗಳು ನಡೆಯದಂತೆ ತಡೆಯಬೇಕೆಂದು ಒತ್ತಾಯಿಸಿದ್ದಾರೆ.

## ಎಪಿಎಂಸಿ ವರ್ತಕರಾದ ಕಂದಗಲ್ಲು ಕೆ. ಹನುಮಂತಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮದ
ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ
ಎಪಿಎಂಸಿ ವರ್ತಕರಾದ,
ಕೆ. ಹನುಮಂತಪ್ಪ ಅಂಡ್ ಕೋ ಸಂಸ್ಥೆಯ ಮಾಲೀಕರೂ ಆದ

**ಶ್ರೀ ಕೂಲಂಬಿ ಹನುಮಂತಪ್ಪ**

ಇವರು ದಿನಾಂಕ 13.12.2023ರ ಬುಧವಾರ ಮಧ್ಯಾಹ್ನ 3.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 93 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ನಾಲ್ವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ.

**ಮೃತರ ಪಾರ್ಥಿವ ಶರೀರವನ್ನು ದಿನಾಂಕ 14.12.2023ರ ಗುರುವಾರ ಮಧ್ಯಾಹ್ನ 1 ಗಂಟೆಯವರೆಗೆ ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, (ಮೋದಿ ಆಸ್ಪತ್ರೆ ಕಾಂಪೌಂಡ್ ಹಿಂಭಾಗದ ರಸ್ತೆ) 2ನೇ ಮೇನ್, 2ನೇ ಕ್ರಾಸ್, ಡೋರ್ ನಂ. 2020/2ರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.** ನಂತರ ಅಂತ್ಯಕ್ರಿಯೆಯನ್ನು ದಿನಾಂಕ 15.12.2023ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಕಂದಗಲ್ಲು ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 94801 77658**

## ಮಂಜುನಾಥ್ ಎಸ್. ದೇಸಾಯಿ ನಿಧನ



ಎಂ.ಸಿ.ಸಿ. 'ಎ' ಬ್ಲಾಕ್, 4ನೇ ಮುಖ್ಯ ರಸ್ತೆ, ಡೋ.ನಂ. 2168 ವಾಸಿ
ನೀರಾವರಿ ಇಲಾಖೆಯ ನಿವೃತ್ತ ಕಾರ್ಯಪಾಲಕ ಇಂಜಿನಿಯರ್

**ಮಂಜುನಾಥ್ ಎಸ್. ದೇಸಾಯಿ**

ಇವರು, ದಿನಾಂಕ : 13.12.2023ರ ಬುಧವಾರ ಮಧ್ಯಾಹ್ನ 1.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 14.12.2023ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗವುದು.

**ದುಃಖತಪ್ತ ಕುಟುಂಬವರ್ಗ : 88801 62549**

## ನಗರದಲ್ಲಿ ಇಂದು ಪರೀಕ್ಷಾ ಮಾರ್ಗದರ್ಶಿ

ಇಂದು ಬೆಳಿಗ್ಗೆ 10.30 ಗಂಟೆಗೆ ಯುಪಿಎಸ್‌ಸಿ - ಕೆಪಿಎಸ್‌ಸಿ ಪರೀಕ್ಷಾ ಮಾರ್ಗದರ್ಶಿ ಕುರಿತು ಉಪನ್ಯಾಸವು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ನಡೆಯಲಿದೆ. ಪ್ರಾಚಾರ್ಯ ಡಾ. ಮಂಜಣ್ಣ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಬಿ.ಜಿ. ವಿನಯ್‌ಕುಮಾರ್ ಉಪನ್ಯಾಸ ನೀಡುವರು. ರಾಘು ದೊಡ್ಡಮನಿ, ಪ್ರಾಧ್ಯಾಪಕರಾದ ಶ್ರೀಮತಿ ಪೂರ್ಣಿಮಾ, ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಡಾ. ಭೀಮಣ್ಣ, ಪ್ರಾಧ್ಯಾಪಕ ಶೇಷಪ್ಪ ಪಾಲ್ಗೊಳ್ಳುವರು.



## ನೆಹರೂ ಕ್ಯಾಂಪ್‌ನಲ್ಲಿ ಲಕ್ಷ ದೀಪೋತ್ಸವ

ದಾವಣಗೆರೆ, ಡಿ.13- ಎರೇಬೂದಿಹಾಳ್ ಸಮೀಪದ ನೆಹರೂ ಕ್ಯಾಂಪ್‌ನ ಶ್ರೀ ಪಟ್ಟಾಭಿರಾಮ ದೇವಸ್ಥಾನದಲ್ಲಿ ಮೊನ್ನೆ ಲಕ್ಷ ದೀಪೋತ್ಸವ ಮತ್ತು ಅನ್ನ ಸಂತರ್ಪಣೆ ನಡೆಯಿತು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಧೂಮಪಾನದಿಂದ ಕುಗ್ಗುವ ಮೆದುಳು

**ಅಕಾಲವಾಗಿ ಮೆದುಳಿಗೆ ಎದುರಾಗುವ ವೃದ್ಧಾಪ್ಯ**

ನವದೆಹಲಿ, ಡಿ. 13 - ಧೂಮಪಾನದಿಂದ ಮೆದುಳು ಸಂಕುಚಿತವಾಗುತ್ತದೆ ಹಾಗೂ ಅವಧಿಗೆ ಮುಂಚೆ ವೃದ್ಧಾಪ್ಯದ ಅಪಾಯ ಹೆಚ್ಚಿಸುತ್ತದೆ ಎಂದು ಅಮೆರಿಕದ ವಾಷಿಂಗ್ಟನ್ ಸ್ಕೂಲ್ ಆಫ್ ಮೆಡಿಸಿನ್ ವಿಶ್ವವಿದ್ಯಾಲಯ ನಡೆಸಿದ ಅಧ್ಯಯನವೊಂದು ತಿಳಿಸಿದೆ.

ವೃದ್ಧಾಪ್ಯದಲ್ಲಿ ಮೆದುಳಿನ ಗಾತ್ರ ಸಹಜವಾಗೇ ಕುಗ್ಗುತ್ತದೆ. ಹೀಗಾಗಿ ಧೂಮಪಾನ ಮಾಡುವುದರಿಂದ ಮೆದುಳು ಕುಗ್ಗಿದರೆ, ವಯಸ್ಸು ಅವಧಿಗೆ ಮೊದಲೇ ಕಡಿಮೆಯಾಗುತ್ತದೆ ಎಂದು ಅಧ್ಯಯನದಲ್ಲಿ ಹೇಳಲಾಗಿದೆ.

ಪ್ರತಿದಿನ ಧೂಮಪಾನ ಹೆಚ್ಚಾದಷ್ಟೂ ಮೆದುಳಿನ ಗಾತ್ರ ಕಡಿಮೆಯಾಗಿರುವುದು ಅಧ್ಯಯನದಿಂದ ಕಂಡು ಬಂದಿದೆ.

ಧೂಮಪಾನಿಗಳಲ್ಲಿ ವಯೋಸಂಬಂಧ ಕಾಯಿಲೆಗಳು ಹಾಗೂ ಅಲ್ಜಿಮೀರ್ ರೀತಿಯ ಸಮಸ್ಯೆಗಳು ಏಕೆ ಹೆಚ್ಚಾಗಿ ಕಂಡು ಬರುತ್ತವೆ ಎಂಬುದನ್ನು ವಿವರಿಸಲು ಈ ಅಧ್ಯಯನ ನೆರವಾಗುತ್ತದೆ ಎಂದು ಸಂಶೋಧಕರು ಹೇಳಿದ್ದಾರೆ.

ಧೂಮಪಾನದಿಂದ ಮೆದುಳಿನ ಮೇಲೆ ಆಗುವ ಪರಿಣಾಮಗಳ ಬಗ್ಗೆ ಇತ್ತೀಚಿನವರೆಗೂ ವಿಜ್ಞಾನಿಗಳು ಗಮನ ಹರಿಸಿರಲಿಲ್ಲ.

ಧೂಮಪಾನದಿಂದ ಶ್ವಾಸಕೋಶ ಹಾಗೂ ಹೃದಯಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆಯೇ ಹೆಚ್ಚು ಗಮನ ಹರಿಸಲಾಗಿತ್ತು ಎಂದು ಅಧ್ಯಯನದ ಹಿರಿಯ ಲೇಖಕಿ ಪ್ರೊ. ಲೌರಾ ಜೆ. ಬ್ಯೂರಟ್ ಹೇಳಿದ್ದಾರೆ. ಈ ಅಧ್ಯಯನವನ್ನು 'ಬಯಲಾಜಿಕಲ್ ಸೈಕಿಯಾಟ್ರಿ : ಗ್ಲೋಬಲ್ ಓಪನ್ ಸೈನ್ಸ್' ನಿಯತಕಾಲಿಕದಲ್ಲಿ ಪ್ರಕಟಿಸಲಾಗಿದೆ.

ಆದರೆ, ಧೂಮಪಾನದಿಂದ ಮೆದುಳಿನಲ್ಲೂ ಹಾನಿಯಾಗುತ್ತದೆ ಎಂಬುದನ್ನು ಈ ಅಧ್ಯಯನ ತಿಳಿಸುತ್ತದೆ. ಧೂಮಪಾನ ವ್ಯಸನ ಬಿಟ್ಟರೆ ಮೆದುಳಿಗೆ ಇನ್ನಷ್ಟು ಹಾನಿಯಾಗುವುದು ತಪ್ಪುತ್ತದೆ. ಆದರೆ, ಮೊದಲೇ ಆಗಿರುವ ಹಾನಿ ಶಮನವಾಗದು ಎಂದು ಅಧ್ಯಯನದಲ್ಲಿ ತಿಳಿಸಲಾಗಿದೆ.

ಬ್ರಿಟನ್ ಬಯೋಬ್ಯಾಂಕ್‌ನಲ್ಲಿ ಸಂಗ್ರಹವಾಗಿರುವ 32,094 ಜನರ ಮೆದುಳು, ಧೂಮಪಾನದ ಇತಿಹಾಸ ಹಾಗೂ ಜೀನ್‌ಗಳ ಮಾಹಿತಿ ಆಧರಿಸಿ ಈ ಅಧ್ಯಯನ ವರದಿ ರೂಪಿಸಲಾಗಿದೆ. ಬ್ರಿಟನ್ ಬಯೋಬ್ಯಾಂಕ್‌ನಲ್ಲಿ ಸುಮಾರು ಐದು ಲಕ್ಷ ಜನರ ವಂಶವಾಹಿ, ಆರೋಗ್ಯ ಹಾಗೂ ವರ್ತನೆಯ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

# ಗುರು ಗ್ರಾಮದಲ್ಲಿ ಸಂಸತ್ ಮೇಲೆ ದಾಳಿಯ ಸಂಚು ಜಾಲತಾಣಗಳ ಮೂಲಕ ಸಂಪರ್ಕದಲ್ಲಿದ್ದ ಆರು ಜನ

ನವದೆಹಲಿ, ಡಿ. 13 – ಬೇರೆ ಬೇರೆ ನಗರಗಳ ಆರು ಜನರು ದೆಹಲಿ ಬಳಿ ಗುರುಗ್ರಾಮದಲ್ಲಿ ಸೇರಿಕೊಂಡು, ಸಂಸತ್ ಭದ್ರತೆ ಉಲ್ಲಂಘಿಸುವ ಸಂಚು ನಡೆಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಿ. ಮನೋರಂಜನ್ ಹಾಗೂ ಸಾಗರ್ ಶರ್ಮ ಲೋಕಸಭೆ ಅಂಗಳದಲ್ಲಿ ನುಗ್ಗಿ ಬಣ್ಣದ ಹೊಗೆ ಹರಡಿದ್ದರು. ಅಮೋಲ್ ಶಿಂಧೆ ಹಾಗೂ ನೀಲಂ ಸಂಸತ್ ಭವನದ ಹೊರಗೆ ಬಣ್ಣದ ಹೊಗೆ ಹರಡಿ ಪ್ರತಿಭಟಿಸಿದ್ದರು. ಲಲಿತ್ ಹಾಗೂ ವಿಶಾಲ್ ಶರ್ಮಾ ಎಂಬುವವರು ಈ ಸಂಚಿನಲ್ಲಿ ಭಾಗಿಯಾಗಿದ್ದಾರೆ ಎಂದು ಶಂಕಿಸಲಾಗಿದೆ. ವಿಶಾಲ್‌ನನ್ನು ಪೊಲೀಸರು ಹರಿಯಾಣದ ಗುರು ಗ್ರಾಮದಲ್ಲಿ ವಶಕ್ಕೆ ತೆಗೆದುಕೊಂಡಿದ್ದಾರೆ. ಲಲಿತ್ ಪರಾರಿಯಾಗಿದ್ದಾನೆ.

ಈ ಎಲ್ಲರೂ ಗುರುಗ್ರಾಮದ ಸೆಕ್ಟರ್ 7ರಲ್ಲಿ ವಿಶಾಲ್ ಶರ್ಮ ಬಾಡಿಗೆಗೆ ಪಡೆದಿದ್ದ ಮನೆಯಲ್ಲಿದ್ದರು.

ಮೈಸೂರಿನ ಡಿ. ಮನೋರಂಜನ್ ಬಿ.ಇ. ಪದವೀಧರ. ಈತನಿಗೆ ಮೈಸೂರಿನ ಬಿಜೆಪಿ ಸಂಸದ ಪ್ರತಾಪ್ ಸಿಂಹ ಪಾಸ್ ನೀಡಿದ್ದರು. ಉತ್ತರ ಪ್ರದೇಶದ ಸಾಗರ್ ಶರ್ಮಾಗೂ ಈತನೇ ಸಂಸದರ ಪರಿಚಯ ಮಾಡಿಸಿ ಪಾಸ್ ಕೊಡಿಸಿದ್ದ.

ಲಖ್ನೌದ ಸಾಗರ್ ಶರ್ಮ ಕೆಲ ದಿನಗಳ ಹಿಂದೆ ದೆಹಲಿಗೆ ಪ್ರತಿಭಟನೆಗೆಂದು ತೆರಳಿದ್ದ. ಮಹಾರಾಷ್ಟ್ರದ ಲಾತೂರ್‌ನವನಾದ ಶಿಂಧೆ, ದೆಹಲಿಯಲ್ಲಿ ಸೈನ್ಯದ ಭರ್ತಿಗಾಗಿ ತೆರಳುವುದಾಗಿ ಮನೆಯಲ್ಲಿ ಹೇಳಿದ್ದ. ಶಿಂಧೆ ಬಿ.ಎ. ಪದವೀಧರ. ಆತ ದಿನಗೂಲಿ ಕೆಲಸ ಮಾಡುತ್ತಿದ್ದು, ಪೊಲೀಸ್ ಹಾಗೂ ಸೈನ್ಯದ ಭರ್ತಿಗೆ ಸಿದ್ಧನಾಗುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

ರೈತರ ಹೋರಾಟ ಸೇರಿದಂತೆ, ಹಲವು ಪ್ರತಿಭಟನೆಗಳಲ್ಲಿ ನೀಲಂ ಭಾಗಿಯಾಗಿದ್ದಾಗಿ ಅವರ ಕುಟುಂಬದವರು ಹೇಳಿದ್ದಾರೆ. ನೀಲಂ ಕಳೆದ ಐದು ತಿಂಗಳಿನಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧವಾಗುತ್ತಿದ್ದುದಾಗಿ ಸಹೋದರ ರಾಮ್ ನಿವಾಸ್ ಹೇಳಿದ್ದಾರೆ. ನೀಲಂ ಸ್ನಾತಕೋತ್ತರ ಪದವಿ ಪಡೆದಿದ್ದಾಳೆಂದು ಕುಟುಂಬದವರು ಹೇಳಿದ್ದಾರೆ.

ಸಾಮಾಜಿಕ ಜಾಲತಾಣದ ಮೂಲಕ ಸಂಪರ್ಕದಲ್ಲಿದ್ದ ಆರು ಜನರು, ಸುಯೋಜಿತವಾಗಿ ದಾಳಿಯ ಸಂಚು ನಡೆಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಆರೋಪಿಗಳು ಕೆಲ ದಿನಗಳಿಂದ ಸಂಚು ನಡೆಸಿದ್ದರು. ಬುಧವಾರ ಸಂಸತ್ ಭವನಕ್ಕೆ ಬರುವುದಕ್ಕೆ ಮುಂಚೆ ಹಲವು ಬಾರಿ ಈ ಪ್ರದೇಶ ಸುತ್ತು ಹಾಕಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಐವರು ಸಂಸತ್ ಭವನಕ್ಕೆ ಬರುವುದಕ್ಕೆ ಮುಂಚೆ ಗುರುಗ್ರಾಮದಲ್ಲಿರುವ ವಿಶಾಲ್ ಮನೆಯಲ್ಲಿದ್ದರು. ಈ ಆರೂ ಜನರು ಸಂಸತ್ ಭವನದ ಒಳಗೆ ತೆರಳಲು ಉದ್ದೇಶಿಸಿದ್ದರು. ಆದರೆ, ಇಬ್ಬರಿಗೆ ಮಾತ್ರ ಪಾಸ್ ದೊರೆಯಿತು ಎಂದು ಮೂಲಗಳು ತಿಳಿಸಿವೆ.

ವಿಶಾಲ್ ಶರ್ಮ ಆಟೋರಿಕ್ಷಾ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಕುಡುಕನಾಗಿದ್ದ ಆತ, ಪತ್ನಿ ಜೊತೆ ಆಗಾಗ ಜಗಳವಾಡುತ್ತಿದ್ದ ಎಂದು ನೆರೆಹೊರೆಯವರು ತಿಳಿಸಿದ್ದಾರೆ.

ವಿಶಾಲ್ ಮನೆಗೆ ಸಾಗರ್ ಶರ್ಮಾ ಆಗಾಗ ಬರುತ್ತಿದ್ದ. ವಿಶಾಲ್ ಶರ್ಮ ಅಪರಾಧಿಕ ಹಿನ್ನೆಲೆ ಹೊಂದಿದ್ದಾನೆ. ವಿಶಾಲ್ ಹಾಗೂ ನೀಲಂ ಇಬ್ಬರು ಹಿಸಾರ್ ಜಿಲ್ಲೆಯವರು ಎಂದು ಅಧಿಕೃತ ಮೂಲಗಳು ಹೇಳಿವೆ.

## ಭಗವಂತನನ್ನು ಒಲಿಸಿಕೊಳ್ಳಲು 'ಭಕ್ತಿ ಮಾರ್ಗ' ಶ್ರೇಷ್ಠ : ಓಂಕಾರ ಶ್ರೀ



ದಾವಣಗೆರೆ, ಡಿ. 12- ಭಗವಂತನನ್ನು ಒಲಿಸಿಕೊಳ್ಳುವಲ್ಲಿ 'ಭಕ್ತಿ ಮಾರ್ಗ' ಅತ್ಯಂತ ಶ್ರೇಷ್ಠವಾದುದು. ಭಕ್ತಿ ಮಾರ್ಗಗಳಲ್ಲಿ ಶ್ರವಣ ಮೊದಲ್ಗೊಂಡು ಒಂಭತ್ತು ವಿಧಗಳನ್ನು ಕಾಣ ಬಹುದು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನುಡಿದರು.

ನಿಟುವಳ್ಳಿಯ ಶಿವ ಚಿದಂಬರ ದೇವಸ್ಥಾನದ ಸಭಾಂಗಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ದೇವನಗರಿ ತಾಲ್ಲೂಕು ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ ದಾವಣ ಗೆರೆ ಡಿ-ವಲಯ ಇವರ ಸಂಯುಕ್ತಾಶ್ರಯದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಭಕ್ತಿಮಾರ್ಗದ ಮೂಲಕ ಭಗವಂತನ ಸಾಮೀಪ್ಯಕ್ಕೆ ಹೋಗುವ ಮತ್ತು ಸಾಕ್ಷಾತ್ಕಾರ ಮಾಡಿಕೊಳ್ಳಲು ಭಕ್ತಿಮಾರ್ಗ ಶ್ರೇಷ್ಠ. ಭಕ್ತಿ ಪ್ರೇಮ ಸ್ವರೂಪವಾದುದು. ಪ್ರೀತಿ-ಪ್ರೇಮ ಭಾವವನ್ನು ಭಗವಂತನಲ್ಲಿಟ್ಟರೆ ಅದಕ್ಕೆ ಭಕ್ತಿ ಎನ್ನುತ್ತೇವೆ. ಭಗವಂತನ ಒಲುಮೆ ಪಡೆಯಲು ಭಕ್ತಿ ಮಾರ್ಗ ಸುಲಭವಾದ ಮಾರ್ಗ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಭೌತಿಕ ಬದುಕನ್ನು ರೂಪಿಸಿಕೊಳ್ಳಲು ಧಾರ್ಮಿಕ, ಅಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ಭಗವಂತನನ್ನು ಒಲಿಸಿಕೊಳ್ಳಲು ಸತ್ಯನಾರಾಯಣ ಸ್ವಾಮಿ ಪೂಜೆ ಮಾಡುತ್ತಿರುವುದು ಉತ್ತಮ ಕಾರ್ಯ ಎಂದು ಹೇಳಿದರು.

ಮಹಾನಗರ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಹಿರಿಯ ಜಿಲ್ಲಾ ನಿರ್ದೇಶಕ ಎಂ. ಲಕ್ಷ್ಮಣ್, ಮೋಹನ್ ದೀಕ್ಷಿತ್, ಜಿ.ವಿ. ಮಂಜುಳಾ, ಬಾಲಕೃಷ್ಣ ಮತ್ತಿತರರು ಭಾಗವಹಿಸಿದ್ದರು.

## ಪಾಲಿಕೆ ವಲಯ ಕಚೇರಿ ಸಮಸ್ಯೆ ಬಗೆಹರಿಸಲು ಆಗ್ರಹ



ದಾವಣಗೆರೆ,ಡಿ.13- ಮಹಾನಗರ ಪಾಲಿಕೆಯ ವಲಯ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಮತ್ತು ಅನಗತ್ಯ ಅಲೆದಾಟವನ್ನು ತಪ್ಪಿಸುವಂತೆ ಪಾಲಿಕೆ ವಿರೋಧ ಪಕ್ಷದ ನಾಯಕ ಕೆ. ಪ್ರಸನ್ನಕುಮಾರ್ ಆಗ್ರಹಿಸಿದ್ದಾರೆ.

ಪ್ರಸನ್ನಕುಮಾರ್ ನೇತೃತ್ವದಲ್ಲಿ, ಮಾಜಿ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯರಾದ ಸೋಗಿ ಶಾಂತಕುಮಾರ್, ಕೆ.ಎಂ ವೀರೇಶ್, ವೀಣಾ ನಂಜಪ್ಪ, ಮುಖಂಡರಾದ ಕುಂಬಾರ್ ನಾಗಪ್ಪ ಸೇರಿ , ಮಹಾಪೌರ ವಿನಾಯಕ ಪೈಲ್ವಾನ್ ಹಾಗೂ ಪಾಲಿಕೆಯ ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಉದಯ ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಹೊಸದಾಗಿ ವಲಯ ಕಛೇರಿ-2 ಲೋಕಿಕೆರೆ ರಸ್ತೆಯಲ್ಲಿರುವ ಟಿ.ವಿ. ಸ್ಟೇಷನ್ ಎದುರಿನ ಕಟ್ಟಡಕ್ಕೆ ಸ್ಥಳಾಂತರಿಸುವುದರಿಂದ ಬಸಾಪುರ, ಆವರಗೆರೆ ಮತ್ತು ಡಿ.ಸಿ.ಎಂ.ನಲ್ಲಿ ವಾಸಿಸುವ ಜನರಿಗಂತೂ ದೂರವಾಗುತ್ತದೆ. ಸಂಬಂಧಿಸಿದ ಕಂದಾಯ ಕಛೇರಿಯನ್ನು ಈ ಹಿಂದೆ ನಿರ್ವಹಿಸಿದಂತೆ ಮುಖ್ಯ ಕಛೇರಿಯಲ್ಲಿಯೇ ನಿರ್ವಹಿಸಲು ಈ ಕೂಡಲೇ ಕ್ರಮ ಕೈಗೊಳ್ಳಬೇಕು.

ಎಸ್.ಓ.ಜಿ. ಕಾಲೋನಿ, ರಾಮನಗರ, ಬನಶಂಕರಿ ಬಡಾವಣೆ, ವಿದ್ಯಾನಗರ, ತರಳ ಬಾಳು ಬಡಾವಣೆಗಳಲ್ಲಿ ವಾಸಿಸುವ ಜನರಿಗೆ ವಲಯ ಕಛೇರಿ-2 ಹತ್ತಿರವಿರುವುದರಿಂದ ಸದರಿ ವಾರ್ಡ್‌ಗಳನ್ನು ವಲಯ ಕಛೇರಿ-3 ರಿಂದ ತೆಗೆದು 2ರಲ್ಲಿ ಸೇರಿಸಬೇಕು.

ಸಾರ್ವಜನಿಕರು ಖಾತೆ ಬದಲಾವಣೆ, ಕಂದಾಯ ಪಾವತಿ, ಅರ್ಜಿ ಶುಲ್ಕ ಸೇರಿದಂತೆ ಶುಲ್ಕಗಳನ್ನು ಪಾವತಿಸಲು ಸಂಬಂಧಿಸಿದ ವಲಯ ಕಛೇರಿಯಲ್ಲೇ ಪಡೆಯಬೇಕು. ನಂತರ ಅದನ್ನು ಪಾವತಿಸಲು ಪುನಃ ಮುಖ್ಯ ಕಛೇರಿಗೆ ಬಂದು ಪಾವತಿಸಿದ ಚಲನ್ ಪ್ರತಿಯನ್ನು ವಾಪಸ್ ವಲಯ ಕಛೇರಿಯಲ್ಲಿಯೇ ನೀಡಬೇಕು. ಇದರಿಂದ ಸಾರ್ವಜನಿಕರಿಗೆ ಕಾಲ ವ್ಯರ್ಥವಾಗುವುದರ ಜೊತೆಗೆ ರೂ.100 ಗಳ ಶುಲ್ಕ ತುಂಬಲು 2-3 ಬಾರಿ ಸಂಚರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಕಾರಣ ಪ್ರತಿ ವಲಯ ಕಛೇರಿಯಲ್ಲಿ ಶುಲ್ಕ ಪಾವತಿಸಲು ಕೌಂಟರ್ ತೆರೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಇ-ಆಸ್ತಿ ಯೋಜನೆ ಜಾರಿಯಾಗಿದ್ದು, ಸಾರ್ವಜನಿಕರಿಗೆ ದಾಖಲೆಗಳ ಪರಿಶೀಲನೆಗೆ ವ್ಯರ್ಥವಾಗುತ್ತಿದ್ದ ಸಮಯ ಉಳಿತಾಯವಾಗಿ ನಾಗರಿಕರಿಗೆ ತ್ವರಿತವಾಗಿ ಖಾತಾ ನಕಲು ನೀಡುವ ಮಹತ್ವಾಕಾಂಕ್ಷಿ ಯೋಜನೆ ಇಂದು ಮಾರಕವಾಗಿ ಪರಿಗಣಿಸಿದೆ. ಕಂದಾಯ ದಾಖಲೆಗಳ ಡಿಜಿಟಲೀಕರಣದ ಮುಖ್ಯ ಉದ್ದೇಶ ಕ್ಷಣ ಮಾತ್ರದಲ್ಲಿ ದಾಖಲೆಗಳನ್ನು ಪರಿಶೀಲಿಸಿ ಆಸ್ತಿಯ ಅಧಿಕೃತತೆಯನ್ನು ಖಚಿತಪಡಿಸಿ, ಸಾರ್ವಜನಿಕರು ಅರ್ಜಿ ಸಲ್ಲಿಸಿದ ಕೆಲವೇ ಗಂಟೆಗಳಲ್ಲಿ ಖಾತಾ ನಕಲು ಪಡೆಯುವುದರ ಬದಲಾಗಿ ಹಲವು ದಿನಗಳು, ಇನ್ನೂ ಕೆಲವೊಮ್ಮೆ ತಿಂಗಳುಗಳಾದರೂ ಖಾತೆ ನಕಲು ಸಿಕ್ಕಿಲ್ಲವೆಂದು ಅಸಮಾಧಾನ ಸಾರ್ವಜನಿಕರಲ್ಲಿದೆ. ಖಾತೆ ಬದಲಾವಣೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ದಾಖಲೆಗಳನ್ನು ಪಡೆಯುವ ನಂತರದಲ್ಲಿ ಅನಗತ್ಯ ವಿಳಂಬವಾಗುತ್ತಿರುವುದನ್ನು ಜರೂರಾಗಿ ಪರಿಗಣಿಸಿ ಅರ್ಜಿ ಸಲ್ಲಿಸಿದ 48 ಗಂಟೆಗಳಲ್ಲಿ ಖಾತಾ ನಕಲು ನೀಡಲು ಮತ್ತು 31 ರಿಂದ 40 ದಿನಗಳೊಳಗಾಗಿ ಖಾತೆ ಬದಲಾವಣೆ ಮಾಡಿಕೊಡಲು, ಇನ್ನೊಂದು ವಾರದಲ್ಲಿ ಕ್ರಮ ಕೈಗೊಳ್ಳದೇ ಹೋದಲ್ಲಿ ಪ್ರತಿಭಟನೆ ಮಾಡುವುದಾಗಿ ಪ್ರಸನ್ನಕುಮಾರ್ ಎಚ್ಚರಿಸಿದ್ದಾರೆ.

## ದೇವಮ್ಮ ಬಸಪ್ಪ ಪ್ರೌಢಶಾಲೆಯಲ್ಲಿ ತಾಲ್ಲೂಕು ಕಸಾಪ ಸಾಹಿತ್ಯೋತ್ಸವ



ದಾವಣಗೆರೆ, ಡಿ. 13- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಶ್ರೀಮತಿ ದೇವಮ್ಮ ಬಸಪ್ಪ ಪ್ರೌಢಶಾಲೆ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಇವರ ಸಂಯುಕ್ತಾಶ್ರಯದಲ್ಲಿ ಶಾಲಾ ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಶ್ರೀಮತಿ ದೇವಮ್ಮ ಬಸಪ್ಪ ಪ್ರೌಢಶಾಲೆ ಆವರಣದಲ್ಲಿ ನಡೆಯಿತು.

ಶಾಲಾ ಮುಖ್ಯೋಪಾಧ್ಯಾಯ ಪುಟ್ಟರಂಗಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಕಸಾಪ ನಿರ್ದೇಶಕರಾದ ಶ್ರೀಮತಿ ಸೌಭಾಗ್ಯಮ್ಮ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕನ್ನಡ ಸಾಹಿತ್ಯ ಪರಿಷತ್ ನಡೆದು ಬಂದು ದಾರಿ ಹಾಗೂ ದತ್ತಿದಾನಿಗಳನ್ನು ಸ್ಮರಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸುಮತಿ ಜಯಪ್ಪ ದತ್ತಿ ಉಪನ್ಯಾಸ ನೀಡುತ್ತಾ ನಂಬಿಕೆ- ಮೂಢನಂಬಿಕೆಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕು ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ.ಬೇತೂರು ಉಪಸ್ಥಿತರಿದ್ದರು

## ಲಿಟ್ಲ್‌ಚಾಂಪ್ಸ್‌ನಲ್ಲಿ ಅಜ್ಜ-ಅಜ್ಜಿಯರ ದಿನ



ದಾವಣಗೆರೆ, ಡಿ.13- ನಗರದ ಡಿಸಿಎಂ ಲೇ ಔಟ್‌ನ ಲಿಟ್ಲ್ ಚಾಂಪ್ಸ್ ಶಾಲೆಯಲ್ಲಿ ಗ್ರ್ಯಾಂಡ್ ಪೇರೆಂಟ್ಸ್ ಡೇ ಆಚರಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ವಿಜಯಕುಮಾರ್, ಖಜಾಂಚಿ ಕಿರಣ್ ಕುಮಾರ್, ನಿರ್ದೇಶಕರಾದ ಸಹನ, ಸ್ನೇಹ, ಮುಖ್ಯೋಪಾಧ್ಯಾಯರು, ಶಿಕ್ಷಕಿಯರಾದ ನಾಗವೇಣಿ, ವಿಜಯಲಕ್ಷ್ಮಿ, ಕಾವ್ಯ, ಶೋಭಾ, ಆಶಾ, ಭಾಗ್ಯಲಕ್ಷ್ಮಿ, ಲಾವಣ್ಯ, ಗಂಗಾ ಮತ್ತಿತರರು ಉಪಸ್ಥಿತರಿದ್ದರು.

ಮಕ್ಕಳ ಅಜ್ಜ-ಅಜ್ಜಿಯರು ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರಗು ತಂದರು.

## ಮಹಿಳಾ - ಮಕ್ಕಳ ಅಭಿವೃದ್ಧಿ ಇಲಾಖೆ ಯೋಜನೆಗಳ ಸೌಲಭ್ಯ ಮಧ್ಯವರ್ತಿಗಳಿಂದ ದುರುಪಯೋಗ

ದಾವಣಗೆರೆ, ಡಿ. 13 - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಮಧ್ಯವರ್ತಿಗಳು ದುರುಪಯೋಗ ಪಡಿಸಿಕೊಳ್ಳುತ್ತಿದ್ದು, ಈ ಕುರಿತು ಸಾರ್ವಜನಿಕರು ಎಚ್ಚೆತ್ತುಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ. ವಿವಿಧ ಯೋಜನೆಗಳ ಸೌಲಭ್ಯಕ್ಕಾಗಿ ಆನ್‌ಲೈನ್ ಅಥವಾ ಭೌತಿಕವಾಗಿ ಅರ್ಜಿಗಳನ್ನು ಸಲ್ಲಿಸಲು ಸಾರ್ವಜನಿಕರು ನೇರವಾಗಿ ಇಲಾಖೆಯ ಜಿಲ್ಲಾ ಕಛೇರಿ ಅಥವಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ತೆರಳಿ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಥವಾ ಅಧಿಕಾರಿಗಳ ಹೆಸರಿನಲ್ಲಿ ಮಧ್ಯವರ್ತಿಗಳು ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವುದು ಕಂಡುಬಂದರೆ ಪೊಲೀಸ್ ಠಾಣೆ ಜಿಲ್ಲಾ ಕಛೇರಿ ದೂ.ಸಂ. 08192-264056 ಹಾಗೂ ಸಿ.ಡಿ.ಪಿ.ಓ. ಕಛೇರಿ ದೂ.ಸಂ. ದಾವಣಗೆರೆ - 9945767687, ಜಗಳೂರು-99015 21555, ಹರಿಹರ-78292 82991, ಹೊನ್ನಾಳಿ-70221 05100, ಚನ್ನಗಿರಿ-94490 80657 ಗೆ ಕರೆ ಮಾಡಿ ದೂರು ನೀಡಲು ಅವರು ತಿಳಿಸಿದ್ದಾರೆ.

## ಸ್ಕೌಟ್ಸ್‌ಗೆ ಮೂರ್ತಿನಾಯ್ಕ್ ಕಾರ್ಯದರ್ಶಿ



**ಹರಪನಹಳ್ಳಿ**

ಹರಪನಹಳ್ಳಿ, ಡಿ. 13- ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯಾಗಿ ತಾಲ್ಲೂಕಿನ ಯರಬಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಎಲ್.ಮೂರ್ತಿನಾಯ್ಕ್ ಆಯ್ಕೆಯಾಗಿದ್ದಾರೆ. ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಮಂಗಳವಾರ ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ ಹಾಗೂ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಕೆ. ಷಣ್ಮುಖಪ್ಪ ಅವರ ಸಮ್ಮುಖದಲ್ಲಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ತರಬೇತಿ ಆಯುಕ್ತರಾದ ಹುಸೇನ್ ಪೀರ್, ರೇಣುಕಾ ಸೇರಿದಂತೆ, ಇತರರು ಇದ್ದರು.

## ನಗರದಲ್ಲಿ ಇಂದು ಬಸವ ಸಂದೇಶ ಚಿಂತನೆ - ಸಂವಾದ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಮತ್ತು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಕರುಣಾ ಟ್ರಸ್ಟ್ ಕಚೇರಿಯಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಬಸವ ಸಂದೇಶ' ವಿಷಯವಾಗಿ ಚಿಂತನೆ ಮತ್ತು ಸಂವಾದ ನಡೆಯಲಿದೆ. ಚಿಂತಕರು: ಶರಣ ಸಾಹಿತ್ಯ ಪರಿಷತ್ ನಗರ ಘಟಕಾಧ್ಯಕ್ಷರಾದ ಎಂ. ಪರಮೇಶ್ವರಪ್ಪ ಸಿರಿಗೆರೆ, ಭಾಗವಹಿಸುವವರು: ಕೆ.ಪಿ. ಪರಮೇಶ್ವರಪ್ಪ, ಶ್ರೀಮತಿ ಶೈಲಜಾ ಪಾಲಾಕ್ಷ, ರುದ್ರೇಗೌಡ, ಕೊಟ್ರೇಶ್ ಐರಣಿ, ಕಲಿವೀರ್ ಕಳ್ಳಿಮನಿ, ಕೆ.ಸಿ. ನಾಗರಾಜ್, ಬಿ.ಟಿ. ಪ್ರಕಾಶ್, ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಶಿವನಕೆರೆ ಬಸವಲಿಂಗಪ್ಪ, ಮಲ್ಲಾಬಾದಿ ಬಸವರಾಜ್.

# ಹಣ, ಅಧಿಕಾರದಿಂದ ಶಾಂತಿ, ನೆಮ್ಮದಿ ಅಸಾಧ್ಯ



**'ಕಾವ್ಯ ಕನ್ನಿಕೆ' ಕವನ ಸಂಕಲನದ ಬಿಡುಗಡೆ ಸಮಾರಂಭದಲ್ಲಿ ಪಾಂಡೋಮಟ್ಟಿ ವಿರಕ್ತಮಠದ ಡಾ. ಗುರುಬಸವ ಸ್ವಾಮೀಜಿ**

ದಾವಣಗೆರೆ, ಡಿ. 13- ಹಣ, ಅಧಿಕಾರದಿಂದ ಶಾಂತಿ, ನೆಮ್ಮದಿ, ಆನಂದ ಸಾಧ್ಯವಿಲ್ಲ. ಬದಲಿಗೆ ಯೋಗ, ಧ್ಯಾನ ಮತ್ತು ಅಧ್ಯಾತ್ಮದಿಂದ ಮಾತ್ರ ಸಾಧ್ಯ ಎಂದು ಪಾಂಡೋಮಟ್ಟಿ ವಿರಕ್ತಮಠದ ಡಾ. ಗುರುಬಸವ ಸ್ವಾಮೀಜಿ ಹೇಳಿದರು.

ನಗರದ ಶ್ರೀಮತಿ ರಾಜನಹಳ್ಳಿ ಜಾನುಬಾಯಿ ಶ್ರೀನಿವಾಸಮೂರ್ತಿ ಯವರ ಧರ್ಮಶಾಲೆಯಲ್ಲಿ ಏರ್ಪಡಿಸಿದ್ದ ಲಿಂ. ಜಿ.ಕೆ. ಕಾವ್ಯ ಅವರ ಪ್ರಥಮ ವರ್ಷದ ಪುಣ್ಯಾರಾಧನೆ, ಸರ್ವ ಶರಣ ಸಮ್ಮೇಳನ ಹಾಗೂ 'ಕಾವ್ಯ ಕನ್ನಿಕೆ' ಕವನ ಸಂಕಲನ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಶಾಂತಿ, ನೆಮ್ಮದಿ, ಧ್ಯಾನ ನಮ್ಮ ಜೀವನದ ಪರಮ ಧ್ಯೇಯವಾಗಬೇಕು. ನಿತ್ಯ ಸಮಯ ನಿಗದಿ ಮಾಡಿಕೊಂಡು, ಧ್ಯಾನದಲ್ಲಿ ಮಗ್ನರಾದರೆ ಸಾಕು ಅದರಲ್ಲಿ ಸಿಗುವ ಶಾಂತಿ, ನೆಮ್ಮದಿ, ಆನಂದ ಬೇರೆ ಯಾವುದರಲ್ಲೂ ಸಿಗಲಾರದು ಎಂದರು.

ಕಾಯ ನಶ್ವರ, ಕಾಯಕ ಶಾಶ್ವತ. ಲಿಂ. ಕಾವ್ಯ ಅವರ ತಾಯಿ ಕಮಲಮ್ಮ ಅವರು ತನ್ನ ಮಗಳ ಹೆಸರಿನಲ್ಲಿ ಮಾಡುತ್ತಿರುವ ಅನಾಥರ, ಸಮಾಜ ಸೇವಾ ಕಾರ್ಯಗಳು ಮಾದರಿಯೇ ಸರಿ. ಇದೇ ವೇಳೆ ಮಗಳ ಪುತ್ಥಳಿ ಅನಾವರಣ ಹಾಗೂ 'ಕಾವ್ಯ ಕನ್ನಿಕೆ' ಕೃತಿ ಬಿಡುಗಡೆ ಮಾಡುವ ಮೂಲಕ ಸಾರ್ಥಕತೆ ಮೆರೆದಿದ್ದಾರೆಂದು ಹೇಳಿದರು.

ಶ್ರೀ ಜಡೇ ಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಮಾತನಾಡಿ, ಮನುಷ್ಯ ಜೀವನದಲ್ಲಿ ಸಾವು-ನೋವು, ನಲಿವುಗಳು ಸಹಜ. ಆದರೆ ಅವೆಲ್ಲವುಗಳನ್ನು ಸಹಿಸಿಕೊಂಡು, ಸಾಧಿಸುವುದೇ ನಿಜವಾದ ಸಾರ್ಥಕ ಜೀವನ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಮಾತನಾಡಿ, ಅಧ್ಯಾತ್ಮದಿಂದ ನಾವು ಸಂಸ್ಕಾರವಂತರಾಗಲು ಸಾಧ್ಯವಿದೆ. ಯೋಗ, ಧ್ಯಾನವನ್ನು ನಿತ್ಯ ಅಳವಡಿಸಿಕೊಂಡರೆ ಮನುಷ್ಯ ಶಾಂತಿ, ನೆಮ್ಮದಿ ಜೀವನ ನಡೆಸಲು ಸಾಧ್ಯವಿದೆ ಎಂದು ಪ್ರತಿಪಾದಿಸಿದರು.

ಹಿರಿಯ ಸಾಹಿತಿ ಎಸ್.ಟಿ. ಶಾಂತಗಂಗಾಧರ ಮಾತನಾಡಿ, ಮಗಳ ಕನಸನ್ನು ನನಸು ಮಾಡುವ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ 'ಕಾವ್ಯ ಕನ್ನಿಕೆ' ಎಂಬ ಕೃತಿ ಲೋಕಾರ್ಪಣೆ ಮಾಡುವ ತಾಯಿ ಜೀವನದ ಸಾರ್ಥಕತೆ ಮೆರೆದಿದ್ದಾರೆಂದು ತಿಳಿಸಿದರು.

ಕೃತಿ ಬಿಡುಗಡೆ ಮಾಡಿದ ಹುಬ್ಬಳ್ಳಿಯ ಪತ್ರಕರ್ತ ರಾಜೇಂದ್ರ ಪಾಟೀಲ್ ಮಾತನಾಡಿ, 'ಕಾವ್ಯ ಕನ್ನಿಕೆ' ಕವನ ಸಂಕಲನದ ಕರ್ತೃ ಲಿಂ. ಕಾವ್ಯ ಅವರು ಇಹಲೋಕ ತ್ಯಜಿಸಿದ್ದರೂ ಅವರ ತಾಯಿಯ ಪರಿಶ್ರಮದ ಫಲವಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಕೃತಿಯ ಮೂಲಕ ಅಮರರಾಗಿದ್ದಾರೆ. ಇದೊಂದು ತಾಯಿ-ಮಗಳ ಅನನ್ಯ ಪ್ರೇಮ ಕಾವ್ಯ ಎಂದು ಬಣ್ಣಿಸಿದರು.

ಚಿತ್ರದುರ್ಗದ ಬ್ರಹ್ಮಾಕುಮಾರಿ ಈಶ್ವರೀಯ ವಿವಿ ಸಂಚಾಲಕರಾದ ರಶ್ಮಿ ಮಾತನಾಡಿ, ಒಂದು ಆತ್ಮದ ಕನಸಿನ ನೆನವರಿಕೆಗೆ ಹಲವು ಆತ್ಮಗಳು ಮಾಡುವ ಪರಿಶುದ್ಧ ಸಂಕಲ್ಪ ಸಿದ್ಧಿಯನ್ನು ತಂದುಕೊಡುತ್ತದೆ ಎಂಬುದಕ್ಕೆ ಕಮಲಮ್ಮ ಉದಾಹರಣೆಯಾಗಿದ್ದಾರೆ ಎಂದರು.

ಕದಳಿ ವೇದಿಕೆ ಮಹಿಳೆಯರು ವಚನ ಗಾಯನ ನಡೆಸಿಕೊಟ್ಟರು. ನಿವೃತ್ತ ಮುಖ್ಯ ಶಿಕ್ಷಕಿ, ಕಾವ್ಯ ಅವರ ತಾಯಿ ಜಿ.ಎನ್. ಕಮಲಮ್ಮ, ಗೋಪನಾಳು ಕರಿಬಸಪ್ಪ, ಕೆಎಂಎಫ್ ನಿರ್ದೇಶಕ ಪಾಲಾಕ್ಷಪ್ಪ, ಶ್ರೀಮತಿ ಸುಧಾ, ಗಂಗಾಧರ ಬಿ. ಎಲ್. ನಿಟ್ಟೂರು ಮತ್ತಿತರರು ಉಪಸ್ಥಿತರಿದ್ದರು.

## ಸ್ವಚ್ಛತೆಗೆ ಕೈ ಜೋಡಿಸಲು ಮನವಿ

ದಾವಣಗೆರೆ, ಡಿ. 13- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸ ನಿರ್ವಹಣೆ ವ್ಯವಸ್ಥೆಯನ್ನು ಉತ್ತಮಗೊಳಿಸುವ ಸಲುವಾಗಿ ಎಲ್ಲಾ ಆರೋಗ್ಯ ನಿರೀಕ್ಷಕರುಗಳು ತಮಗೆ ಸಂಬಂಧಿಸಿದ ವಾರ್ಡ್‌ಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವಿಕೆ, ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಗಳ ಬಳಕೆ, ತ್ಯಾಜ್ಯ ವಿಂಗಡಣೆ ಮಾಡದೇ ಸಂಬಂಧಿಸಿದ ಬೀದಿ ಬದಿ ವ್ಯಾಪಾರಸ್ಥರು ಅಗತ್ಯ ಕಸದ ಬುಟ್ಟಿಗಳನ್ನಿರಿಸಿ ತ್ಯಾಜ್ಯ ವಿಂಗಡಿಸಲು ವಿಫಲರಾಗಿದ್ದಾರೆ.

ಇತರೆ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಪಿಓಎಸ್ ಮಷಿನ್ ಗಳ ಮೂಲಕ ದಂಡ ವಿಧಿಸಲು ಆರಂಭಿಸಲಾಗುತ್ತಿದೆ. ಸಾರ್ವಜನಿಕರು ಸ್ಥಳದಲ್ಲೇ ದಂಡ ವಿಧಿಸಲು ಪೂರಕವಾಗುವಂತೆ ಯುಪಿಐ, ಡೆಬಿಟ್ ಕಾರ್ಡ್ ನಗದು, ಮೂಲಕ ಹಣ ಪಾವತಿಸುವ ತಂತ್ರಾಂಶಗಳನ್ನು ಒಳಗೊಂಡು ಪಿಓಎಸ್ ಮಷೀನ್‌ಗಳನ್ನು ಆರೋಗ್ಯ ನಿರೀಕ್ಷಕರಿಗೆ ಒದಗಿಸಲಾಗಿದೆ.

1-12- 23 ರಿಂದ ಇಲ್ಲಿಯವರೆಗೆ 350 ಉಲ್ಲಂಘನೆಯದಾರರಿಂದ 122447ರೂ. ದಂಡ ವಸೂಲಿಯಾಗಿರುತ್ತದೆ. ಸಾರ್ವಜನಿಕರು, ಉದ್ದಿಮೆದಾರರು ತಮ್ಮಲ್ಲಿ ಉತ್ಪಾದಿಸಿದ ತ್ಯಾಜ್ಯವನ್ನು ಖಾಲಿ ನಿವೇಶನ, ಚರಂಡಿ, ರಸ್ತೆ, ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಎಸೆಯದೇ ಮೂಲದಲ್ಲಿಯೇ ಹಸಿ, ಒಣ, ಸ್ಯಾನಿಟರಿ ತ್ಯಾಜ್ಯಗಳಿಗೆ ವಿಂಗಡಿಸಿ ಪಾಲಿಕೆಯ ತ್ಯಾಜ್ಯ ವಿಂಗಡನಾ ವಾಹನಗಳಿಗೆ ನೀಡುವಂತೆ ಹಾಗು ಏಕ ಬಳಕೆ ಪ್ಲಾಸ್ಟಿಕ್ ಬಳಕೆಯನ್ನು ನಿರಾಕರಿಸುವ ಮೂಲಕ ನಗರ ಸ್ವಚ್ಛತೆಯೊಂದಿಗೆ ಕೈ ಜೋಡಿಸಲು ಮನವಿ ಮಾಡಲಾಗಿದೆ.


ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ (ರಿ.) ಸಿರಿಗೆರೆ.

**ಹಿರೇಮೇಗಳಗೇರಿ ಪಾಟೀಲ್ ಸಿದ್ದನಗೌಡ ಪದವಿ ಮಹಾವಿದ್ಯಾಲಯ**

ಹರಪನಹಳ್ಳಿ-583 131, ವಿಜಯನಗರ ಜಿಲ್ಲೆ.

**ಬೇಕಾಗಿದ್ದಾರೆ**

ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ (ರಿ.) ಸಿರಿಗೆರೆಯ ಅಧೀನದಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಹಿರೇಮೇಗಳಗೇರಿ ಪಾಟೀಲ್ ಸಿದ್ದನಗೌಡ (HPS) ಪದವಿ ಮಹಾವಿದ್ಯಾಲಯ, ಹರಪನಹಳ್ಳಿಯ ಕಾಲೇಜಿಗೆ ವಾಣಿಜ್ಯಶಾಸ್ತ್ರ ಉಪನ್ಯಾಸಕರು ಮತ್ತು ಅಟೆಂಡರ್ ಬೇಕಾಗಿದ್ದಾರೆ.

ಸ್ವ-ವಿವರದೊಂದಿಗೆ ಸಂಪರ್ಕಿಸಿ : ಪ್ರಾಚಾರ್ಯರು , 99724 34175

**ನೇರ ಸಂದರ್ಶನ ದಿನಾಂಕ : 16.12.2023**



**ಘನ ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ ನ್ಯಾಯಾಲಯ ದಾವಣಗೆರೆಯವರ ಸಮ್ಮುಖದಲ್ಲಿ**

**ಎಪಿ. ನಂ. 12/2022**

ಅರ್ಜಿದಾರರು :ನ್ಯಾಷನಲ್ ಹೈ ವೇಸ್ ಅಥಾರಿಟಿ ಆಫ್ ಇಂಡಿಯಾ - ವಿರುದ್ಧ -
ಪ್ರತಿವಾದಿಗಳು : ಅರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು ಮತ್ತು ಇತರೆ 21 ಜನರು

**ಪ್ರಕಟಣೆ**

**ಸಿಪಿಸಿ ಆರ್ಡರ್ 5, ರೂಲ್ 20 (1-A) ರೆಡ್ ವಿತ್ ಸೆಕ್ಷನ್ 151 ಪ್ರಕಾರ - ಮಧ್ಯಂತರ ಅರ್ಜಿ ಆದೇಶಾನುಸಾರ ಪ್ರಕರಣದ ರೆಸ್ಪಾಂಡೆಂಟ್ಸ್ ನಂ. 2 ರಿಂದ 5 ಮತ್ತು 14 ರವರೆಗೆ ನೋಟೀಸ್.**

ಮೇಲ್ಕಂಡ ಘನ ನ್ಯಾಯಾಲಯದ ಪ್ರಕರಣದಲ್ಲಿನ ರೆಸ್ಪಾಂಡೆಂಟ್ಸ್ ನಂ. 2 ರಿಂದ 5 ಮತ್ತು 14 ರವರಾದ 2) ಜಿ.ಆರ್. ಶಕುಂತಲ ಕೋಂ. ಜಿ. ರಾಮಚಂದ್ರರೆಡ್ಡಿ, 3) ಜಿ.ಆರ್. ಶೈಲಜ ಬಿನ್ ಜಿ. ರಾಮಚಂದ್ರ ರೆಡ್ಡಿ, 4) ಜಿ.ಆರ್. ಸಂಜಯ ಬಿನ್ ಜಿ. ರಾಮಚಂದ್ರರೆಡ್ಡಿ ಮತ್ತು 5) ಜಿ.ಆರ್. ಸೌಮ್ಯ ಬಿನ್ ಜಿ. ರಾಮಚಂದ್ರ ರೆಡ್ಡಿ, 14) ಜಿ.ವಿ. ಚಂಗಲರಾಯ ರೆಡ್ಡಿ ಬಿನ್ ವಾಸುದೇವ ರೆಡ್ಡಿ, ಎಲ್ಲರೂ ವ್ಯವಸಾಯಗಾರರು ಮತ್ತು ಹುಚ್ಚವ್ವನಹಳ್ಳಿ, ಜಗಳೂರು ನಿವಾಸಿಗಳು, ಇವರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಸದರಿ ಪ್ರಕರಣದಲ್ಲಿ ಸದರಿ ರೆಸ್‌ಪಾಂಡೆಂಟ್ಸ್ ರವರಿಂದ - ಜಗಳೂರು ತಾಲ್ಲೂಕು, ಬಂಗಾರಕ್ಕನ ಗುಡ್ಡ ಗ್ರಾಮದ ಸರ್ವೆ ನಂ. 18/1, 2, 3,4 ರಲ್ಲಿ 200 ಚದರ ಮೀಟರ್ಸ್ ಭೂಮಿಯನ್ನು ಪ್ರಕರಣದ ಅರ್ಜಿದಾರರು- ಕೇಂದ್ರ ಸರ್ಕಾರದ ಪರವಾಗಿ - ನ್ಯಾಶನಲ್ ಹೈವೇಸ್ ಆಕ್ಟ್ 1956 ಸೆಕ್ಷನ್ 3(ಡಿ) ಪ್ರಕಾರ ಭೂ-ಸ್ವಾಧೀನ ಪಡಿಸಿಕೊಂಡಿದ್ದು-ನಂತರ, ಸದರಿ ರೆಸ್‌ಪಾಂಡೆಂಟ್ಸ್‌ರವರುಗಳು, ಸದರಿ ಭೂ-ಸ್ವಾಧೀನದ ಬಗ್ಗೆ ಹೆಚ್ಚಿನ ಪರಿಹಾರ ಕೋರಿ ಅರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆಯವರಲ್ಲಿ ಕೇಸ್ ನಂ. ಎನ್.ಹೆಚ್. 50 ಎ.ಆರ್.ಬಿ. 51/18-19ರ ಪ್ರಕಾರ ಅರ್ಜಿ ಸಲ್ಲಿಸಿದ್ದು, ಆ ಅರ್ಜಿಯ ಮೇಲೆ ಸದರಿ ಅರ್ಬಿಟ್ರೇಟರ್ ಮತ್ತು ಜಿಲ್ಲಾಧಿಕಾರಿಗಳು, ದಾವಣಗೆರೆಯವರು ತಾ. 23.7.2021ರಂದು ಹೊರಡಿಸಿದ ಆದೇಶ/ಅವಾರ್ಡ್ ವಿರುದ್ಧ, ಸದರಿ ಅರ್ಜಿದಾರರು, ಸದರಿ ಘನ ನ್ಯಾಯಾಲಯದ ಸಮ್ಮುಖದಲ್ಲಿ ಅಪೀಲ್/ಪ್ರಕರಣವನ್ನು ಸಲ್ಲಿಸಿದ್ದು, ಸದರಿ ತಾವುಗಳೂ ಸಹ ಪ್ರಕರಣದಲ್ಲಿ ಪಾಲ್ಗೊಳ್ಳುವಂತೆ-ಸದರಿ ಘನ ನ್ಯಾಯಾಲಯವು ಈ ಮೂಲಕ ತಮಗೆ ನಿರ್ದೇಶಿಸುವುದೇನೆಂದರೆ, ತಾರೀಖು 22.1.2024ರಂದು ಬೆಳಿಗ್ಗೆ 11.00 ಗಂಟೆಗೆ ತಾವೇ ಖುದ್ದಾಗಲೀ ಅಥವಾ ತಮ್ಮ ಪರ ವಕೀಲರಾಗಲೀ ಹಾಜರಾಗಿ, ಸದರಿ ಪ್ರಕರಣದ ಬಗ್ಗೆ ತಮ್ಮ ತಕರಾರು/ಅಹವಾಲು ಮತ್ತು ದಾಖಲಾತಿ ಪುರಾವೆಗಳೇನಾದರೂ ಇದ್ದ ಪಕ್ಷದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ, ಸದರಿ ಘನ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ತಮ್ಮನ್ನು ಏಕ ಪಕ್ಷೀಯ ಮಾಡಿ ಪ್ರಕರಣವನ್ನು ನಿಮ್ಮ ಗೈರು ಹಾಜರಿಯಲ್ಲಿ ಇತ್ಯರ್ಥಗೊಳಿಸಲಾಗುವುದು ತಿಳಿಯಿರಿ.

ಘನ ನ್ಯಾಯಾಲಯದ ಆದೇಶದ ಮೇರೆಗೆ ಈ ಕೆಳಗೆ ನನ್ನ ಸಹಿಯೊಂದಿಗೆ ನ್ಯಾಯಾಲಯದ ಮೊಹರೆನಿಸಿ, ದಿನಾಂಕ : 12.12.2023 ರಂದು ನೀಡಿದ ನೋಟಿಸ್.

ಸಹಿ/- ಸಿದ್ದವೀರಪ್ಪ ಬಿ.ಕಾಂ., ಎಲ್‌ಎಲ್‌ಬಿ.,
ಅರ್ಜಿದಾರರ ಪರ ವಕೀಲರು,
ಪಿ.ಜೆ. ಬಡಾವಣೆ, ದಾವಣಗೆರೆ.
ದಿನಾಂಕ : 11.12.2023

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/- ಮುಖ್ಯ ಆಡಳಿತಾಧಿಕಾರಿಗಳು
ಪ್ರಿನ್ಸಿಪಾಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್‌ರವರ
ನ್ಯಾಯಾಲಯ, ದಾವಣಗೆರೆ.

# ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ತಿಳಿಸುವ ಪ್ರಚಾರ ಯಾತ್ರೆ



## ಜಿಗಳಿಯಲ್ಲಿ 'ನಮ್ಮ ಸಂಕಲ್ಪ ವಿಕಸಿತ ಭಾರತ' ಕಾರ್ಯಕ್ರಮ

ಮಲೇಬೆನ್ನೂರು, ಡಿ.13- ಜಿಗಳಿ ಗ್ರಾಮದ ಗ್ರಾ.ಪಂ. ಕಚೇರಿ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ನಮ್ಮ ಸಂಕಲ್ಪ ವಿಕಸಿತ ಭಾರತ' ಪ್ರಚಾರ ಕಾರ್ಯಕ್ರಮವನ್ನು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್ ಉದ್ಘಾಟಿಸಿದರು.

ಸಭೆಯ ಆರಂಭದಲ್ಲಿ 'ನಮ್ಮ ಸಂಕಲ್ಪ 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶ' ಎಂಬ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.

ಕರ್ನಾಟಕ ಬ್ಯಾಂಕಿನ ಜಿಗಳಿ ಶಾಖೆಯ ವ್ಯವಸ್ಥಾಪಕ ಗಂಗಾಧರ್ ಅವರು, ಪ್ರಾಸ್ತಾವಿಕವಾಗಿ ಬ್ಯಾಂಕಿನಿಂದ ಸಿಗುವ ಮತ್ತು ಸರ್ಕಾರದಿಂದ ಬ್ಯಾಂಕುಗಳ ಮೂಲಕ ಸಿಗುವ ಸೌಲಭ್ಯಗಳನ್ನು ಜನರಿಗೆ ತಿಳಿಸಿದರು.

ದಾವಣಗೆರೆಯ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮಲ್ಲಿಕಾರ್ಜುನ್ ಮಾತನಾಡಿ, ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರವನ್ನು ಕಡಿಮೆ ಪ್ರಮಾಣದಲ್ಲಿ ಬಳಸಬೇಕು ಮತ್ತು ಹಸಿರೆಲೆ ಗೊಬ್ಬರಕ್ಕೆ ರೈತರು ಒತ್ತು ಕೊಡಬೇಕೆಂದರು. ತಮಗೆ ಬೇಕಾದ ಬೀಜಗಳನ್ನು ರೈತರೇ ಉತ್ಪಾದನೆ ಮಾಡಿಕೊಳ್ಳಬೇಕೆಂದ ಮಲ್ಲಿಕಾರ್ಜುನ್ ಅವರು, ಡ್ರೋಣ್ ಮೂಲಕ ಬೆಳೆಗಳಿಗೆ ಔಷಧಿ ಸಿಂಪರಣೆ ಮಾಡುವ ಬಗ್ಗೆ ತಿಳಿಸಿ, ಪ್ರಾತ್ಯಕ್ಷಿಕೆ ತೋರಿಸಿದರು.

ಚನ್ನಬಸಪ್ಪ ಬಿರಾದಾರ್ ಮಾತನಾಡಿ, ಬೆಳೆಗಳಿಗೆ ಅತಿಯಾಗಿ ಯೂರಿಯಾ ಗೊಬ್ಬರ ಬಳಕೆಯಿಂದ ಮನುಷ್ಯರಿಗೆ ಕ್ಯಾನ್ಸರ್ ಕಾಯಿಲೆ ಬರುವ ಸಾಧ್ಯತೆ ಹೆಚ್ಚಿದೆ. ಅನಾವಶ್ಯಕವಾಗಿ ಯೂರಿಯಾ ಗೊಬ್ಬರವನ್ನು ಬಳಸಬೇಡಿ ಎಂದರು.

ಹೊಳೆಸಿರಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ತಿಪ್ಪೇಸ್ವಾಮಿ ಅವರು, ಆರೋಗ್ಯದ ಬಗ್ಗೆ ಹಾಗೂ ಆರೋಗ್ಯ ಕೇಂದ್ರಗಳಿಂದ ಸಿಗುವ ಚಿಕಿತ್ಸಾ ಸೌಲಭ್ಯಗಳ ಬಗ್ಗೆ ತಿಳಿಸಿದರು.

ಗ್ರಾಮದ ಮುಖಂಡ ಹಾಗೂ ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಮಾತನಾಡಿ, ನಮ್ಮ ದೇಶ ಪ್ರಗತಿ ಪಥದಲ್ಲಿದ್ದು, ಸರ್ಕಾರದ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ಸಿಗುವ ಮೂಲಕ ಬಡವರ ಪ್ರಗತಿಯೂ ಆಗಬೇಕೆಂದರು. ಫಲಾನುಭವಿ ಮಠದ ರಾಜಯ್ಯ ಮಾತನಾಡಿದರು.

ಆರ್‌ಸಿಎಫ್ ಅಧಿಕಾರಿ ಕುಲಭೂಷಣ್ ಮಾತನಾಡಿ, ಕೇಂದ್ರ ಸರ್ಕಾರ ದೇಶದಲ್ಲಿ ಈವರೆಗೆ 11.8 ಕೋಟಿ ರೈತರಿಗೆ ವಾರ್ಷಿಕ 6 ಸಾವಿರ ರೂ.ಗಳಂತೆ 2.6 ಲಕ್ಷ ಕೋಟಿ ರೂ. ನೆರವು ನೀಡಿದೆ ಎಂದರು.

ಗ್ರಾ.ಪಂ. ಉಪಾಧ್ಯಕ್ಷ ವೈ.ಚೇತನ್‌ಕುಮಾರ್, ಗ್ರಾ.ಪಂ. ಸದಸ್ಯರಾದ ಡಿ.ಎಂ.ಹರೀಶ್, ಕೆ.ಜಿ. ಬಸವರಾಜ್, ಮುಖಂಡರಾದ ನಾಗಸನಹಳ್ಳಿ ಮಹೇಶ್ವರಪ್ಪ, ಬಿ.ಸೋಮಶೇಖರಚಾರಿ, ಕೆ. ಎಸ್.ನಂದ್ಯಪ್ಪ, ಎಕ್ಕೆಗೊಂದಿ ರುದ್ರಗೌಡ, ಎಂ. ಆರ್.ನಾಗರಾಜ್, ವಿಜಯಭಾಸ್ಕರ್, ಜಿಎಫ್‌ಜಿ ಮ್ಯಾನೇಜರ್ ತೇಜಸ್ ಪಟೇಲ್, ಡಿಡಿ ಚಂದನದ ತಾರಾನಾಥ್ ಹಾಗೂ ಇತರರು ಭಾಗವಹಿಸಿದ್ದರು.

ಆರ್ಥಿಕ ಸಾಕ್ಷರತಾ ಸಲಹೆಗಾರ ಉಜ್ಜಪ್ಪ ಸ್ವಾಗತಿಸಿದರು. ಗ್ರಾಮದ ಜಿ.ಪಿ.ಹನುಮಗೌಡ ವಂದಿಸಿದರು.

# ಧರ್ಮಕ್ಕೆ ಮಾನ್ಯತೆ ಸಿಗದಿದ್ದರೆ ಮುಂದಿನ ಪೀಳಿಗೆಗೆ ಕಷ್ಟ

**(1ನೇ ಪುಟದಿಂದ)** ಪ್ರಾಧ್ಯಾಪಕ ಡಾ. ಎಚ್. ಎಂ. ಸೋಮಶೇಖರಪ್ಪ ಮಾತನಾಡಿ, "ಲಿಂಗಾಯತ ಧರ್ಮಕ್ಕೆ ಸಮಾನವಾದ ಧರ್ಮ ಮತ್ತೊಂದಿಲ್ಲ. ಬಸವಾದಿ ಶರಣರ ಸಾಮಾಜಿಕ ಚಳವಳಿಯಿಂದ ಹುಟ್ಟಿದ ಲಿಂಗಾಯತ ಧರ್ಮವು ಎಲ್ಲ ತಳ ಸಮುದಾಯದವರನ್ನು ಬರ ಸೆಳೆದು ಅಪ್ಪಿಕೊಂಡಿತು. ಹೀಗಾಗಿ, ಲಿಂಗಾಯತರು ಹಿಂದೂಗಳಾಗಲು ಸಾಧ್ಯವಿಲ್ಲ. ಬಸವಣ್ಣನವರ ಆಶಯದಂತೆ ಅಂತರ್ಜಾತಿ ವಿವಾಹವಾಗುವುದು ಒಂದೆಡೆಗಿರಲಿ, ಕನಿಷ್ಠ ಪಕ್ಷ ಲಿಂಗಾಯತ ಒಳ ಪಂಗಡಗಳಲ್ಲಾದರೂ ಮದುವೆ ಸಂಬಂಧ ಬೆಳೆಸುವ ಔದಾರ್ಯ ತೋರಬೇಕು" ಎಂದು ಕಿವಿಮಾತು ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಸಮಿತಿ ಕಾರ್ಯದರ್ಶಿ ಮಹಾಂತೇಶ್ ಅಗಡಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, 12ನೇ ಶತಮಾನದಲ್ಲಿ ಬಸವಾದಿ ಶಿವಶರಣರಿಂದ ಸ್ಥಾಪಿತವಾದ ಸ್ವತಂತ್ರ ಧರ್ಮ ಲಿಂಗಾಯತ ಧರ್ಮ ಎಂದು ಹೇಳಿದರು.

ಬಸವಣ್ಣನವರಿಗೆ ಉಪನಯನ ಮಾಡುವ ಸಂದರ್ಭದಲ್ಲಿ ಜನವಾರ ಹಾಕುವಾಗ ತನ್ನ ಅಕ್ಕನಿಗೆ ಇಲ್ಲದ್ದು ತನಗೂ ಬೇಡ ಎಂದು ಮನೆಯಿಂದ ಹೊರ ಬಂದುದು ಮಹಿಳೆಯರ ಮೇಲೆ ಅವರಿಗಿದ್ದ ಕಳಕಳಿ ತೋರಿಸುತ್ತದೆ. ಲಿಂಗಾಯತ ಧರ್ಮ ಮಹಿಳಾ ಸಮಾನತೆಗಾಗಿ ಹುಟ್ಟಿದ ಧರ್ಮ ಎಂದರು.

ಮುಂದಿನ ಪೀಳಿಗೆಗೆ ಲಿಂಗಾಯತ ಧರ್ಮದ ಆಚಾರ, ವಿಚಾರ, ವಚನ ಸಾಹಿತ್ಯದ ಕುರಿತು ತಿಳಿಸಿಕೊಡುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಘಟಕವನ್ನು ಸ್ಥಾಪಿಸಲಾಗಿದೆ ಎಂದು ಹೇಳಿದರು.

**ಜಿಲ್ಲಾ ಜಾಗತಿಕ ಲಿಂಗಾಯತ ಮಹಾಸಭಾ ಮಹಿಳಾ ಘಟಕದ ಪದಾಧಿಕಾರಿಗಳು:** ಗೌರವಾಧ್ಯಕ್ಷರಾಗಿ ಮಂದಾಕಿನಿ ಸ್ವಾಮಿ, ಅಧ್ಯಕ್ಷರಾಗಿ ಕುಸುಮಾ ಲೋಕೇಶ್, ಉಪಾಧ್ಯಕ್ಷರಾಗಿ ವಿನೋದ ಅಜಗಣ್ಣನವರ್, ಶಿವಬಸವ್ವ ಕಲಕೋಟಿ, ಮಧುಮತಿ ಗಿರೀಶ್, ಪ್ರಧಾನ ಕಾರ್ಯದರ್ಶಿಯಾಗಿ ರೇಖಾ ಓಂಕಾರಪ್ಪ, ಖಜಾಂಚಿಯಾಗಿ ಮಮತಾ ನಾಗರಾಜ್, ಸಹ ಕಾರ್ಯದರ್ಶಿಯಾಗಿ ಪೂರ್ಣಿಮ ಪ್ರಸನ್ನಕುಮಾರ್ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಶೈಲಜಾ ತಿಮ್ಮೇಶ್ ಇಂದು ಪದಗ್ರಹಣ ಸ್ವೀಕರಿಸಿದರು.

ಬಸವ ಬಳಗದ ಅಧ್ಯಕ್ಷ ಎ.ಹೆಚ್. ಹುಚ್ಚಪ್ಪ ಮಾಸ್ಟರ್ ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಹೆಚ್.ಎಂ. ಸೋಮಶೇಖರಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಕದಳಿ ಮಹಿಳಾ ವೇದಿಕೆಯ ಪೂರ್ಣಿಮಾ ಪ್ರಸನ್ನ ಕುಮಾರ್ ಹಾಗೂ ತಂಡದವರು ವಚನ ಗಾಯನದ ಮೂಲಕ ಪ್ರಾರ್ಥನೆ ನಡೆಸಿಕೊಟ್ಟರು. ಮಹಾಸಭಾದ ಕಾರ್ಯದರ್ಶಿ ಮರುಳಸಿದ್ದಯ್ಯ ಸ್ವಾಗತಿಸಿದರು. ಬಸವ ಕಲಾ ಲೋಕದವರು ವಚನ ಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟರು.

### ಪಂಗಡಗಳ ವಿಭಜನೆಯಿಂದ ಸ್ವತಂತ್ರ ಧರ್ಮದ ಮಾನ್ಯತೆ ಸಾಧ್ಯವಾಗಿಲ್ಲ

1988ರಲ್ಲಿ ಹಾವನೂರು ಆಯೋಗದ ವರದಿ ಬಂದಾಗ ಲಿಂಗಾಯತ ಸಂಖ್ಯೆ ಶೇ.19ರಷ್ಟಿತ್ತು. ಚನ್ನಪ್ಪ ರೆಡ್ಡಿ ಆಯೋಗದ ವರದಿಯಲ್ಲಿ ಶೇ.17ಕ್ಕೆ ಕುಸಿದಿತ್ತು. ಇದೀಗ ಕಾಂತರಾಜ ವರದಿ ಪ್ರಕಾರ ಶೇ.9ರಷ್ಟು ಇದೆ ಎಂದು ಹೇಳಲಾಗುತ್ತಿದೆ.

ಈ ಹಿಂದೆ ಜನರು ಮಾಡುತ್ತಿದ್ದ ಕಾಯಕದಿಂದಾಗಿ ಪಂಗಡಗಳಾಗಿದ್ದವು. ಆದರೆ ಇಂದು ಮೀಸಲಾತಿಗಾಗಿ ಜಾತಿಗಳ ವಿಭಜನೆಯಾಗುತ್ತಿವೆ. ಹಿಂದೂ ಪದದ ಮುಂದೆ ತಮ್ಮ ಪಂಗಡದ ಹೆಸರು ಸೇರಿಸುವ ಕಾರಣ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯಲು ಸಾಧ್ಯವಾಗಿಲ್ಲ. ಆದರೆ ಎಲ್ಲಾ ಪಂಗಡಗಳು ಒಂದಾಗಿ ಹೋರಾಟ ನಡೆಸಿದರೆ ಸ್ವತಂತ್ರ ಮಾನ್ಯತೆ ಪಡೆಯಲು ಸಾಧ್ಯವಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಮಹಿಳಾ ಸಂಚಾಲಕಿ ಮುಕ್ತಾ ಕಾಗಲಿ ಹೇಳಿದರು.

### ಲಿಂಗ ತಾರತಮ್ಯ ಹೆಚ್ಚಳ

ಲಿಂಗ ಸಮಾನತೆ ಕುರಿತ ಜಾಗತಿಕ ಮಟ್ಟದ ಸಮೀಕ್ಷೆಯಲ್ಲಿ ಭಾರತ ಕೆಳಮಟ್ಟದಿಂದ 8ನೇ ಸ್ಥಾನದಲ್ಲಿದೆ. 12ನೇ ಶತಮಾನದಲ್ಲಿಯೇ ಬಸವಣ್ಣನವರು ಲಿಂಗ ಸಮಾನತೆಗೆ ಹೋರಾಟ ನಡೆಸಿದ್ದರೂ, ಆದಾಗ್ಯೂ ಲಿಂಗ ತಾರತಮ್ಯ ಹೆಚ್ಚಳಕ್ಕೆ ಹೊಣೆ ಯಾರು? ಈ ಕುರಿತು ಅರ್ಥೈಸಿಕೊಳ್ಳಬೇಕು.

# ಸಂಸತ್ ಭದ್ರತೆಯಲ್ಲಿ ಭಾರೀ ಲೋಪ

**(1ನೇ ಪುಟದಿಂದ)** ಉಗ್ರವಾದಿ ದಾಳಿಗೆ 22 ವರ್ಷ ತುಂಬಿದ ದಿನದಂದೇ ಭಾರೀ ಭದ್ರತಾ ಲೋಪ ಉಂಟಾಗಿದೆ.

ಇದೇ ವೇಳೆ ಸದನದ ಹೊರಗೆ ಸಂಸತ್ ಆವರಣದಲ್ಲಿ ಇಬ್ಬರು ಮಹಿಳೆಯರು ಘೋಷಣೆಗಳನ್ನು ಕೂಗುತ್ತಾ ಹಳದಿ ಹೊಗೆ ಹರಡಿದ್ದಾರೆ. ಪೊಲೀಸರು ಇವರನ್ನೂ ಬಂಧಿಸಿದ್ದಾರೆ.

ಸುಯೋಜಿತವಾಗಿ ಹಾಗೂ ಸಮನ್ವಯದಿಂದ ಆರು ಜನರು ಸೇರಿಕೊಂಡು, ಈ ಭದ್ರತಾ ಉಲ್ಲಂಘನೆ ಮಾಡಿದ್ದಾರೆ. ಇವರೆಲ್ಲರೂ ಸಾಮಾಜಿಕ ಜಾಲತಾಣಗಳ ಮೂಲಕ ಪರಸ್ಪರ ಸಂಪರ್ಕದಲ್ಲಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಬಿಜೆಪಿ ಸದಸ್ಯ ಖಗೆನ್ ಮುರ್ಮು ಅವರು ಶೂನ್ಯ ವೇಳೆಯಲ್ಲಿ ಮಾತನಾಡುತ್ತಿದ್ದರು. ಆಗ ಒಬ್ಬಾತ ಲೋಕಸಭೆಯ ಬೆಂಚುಗಳನ್ನು ದಾಟಿ ಸಭಾಧ್ಯಕ್ಷರ ಕುರ್ಚಿಯ ಕಡೆ ತೆರಳಿದ. ಇನ್ನೊರ್ವ ವೀಕ್ಷಕರ ಗ್ಯಾಲರಿಯಿಂದ ಸದನದ ಅಂಗಳಕ್ಕೆ ಜಿಗಿದ.

ಆ ಸಂದರ್ಭದಲ್ಲಿ ಹನುಮಾನ್ ಬೇನಿವಾಲ್, ಮಲೂಕ್ ನಗರ್ ಹಾಗೂ ಗುರ್ದೀಪ್ ಸಿಂಗ್ ಔಜಿಲ ಸೇರಿದಂತೆ ಹಲವು ಸಂಸದರು ನುಸುಳಿದವರನ್ನು ಹಿಡಿದು ವಶಕ್ಕೆ ತೆಗೆದುಕೊಂಡರು. ಈ ಇಬ್ಬರನ್ನು ತದುಕಿದ ನಂತರ ಭದ್ರತಾ ಸಿಬ್ಬಂದಿ ವಶಕ್ಕೆ ಒಪ್ಪಿಸಿದರು.

ಮೈಸೂರಿನ ಸಂಸದ ಪ್ರತಾಪ್ ಸಿಂಹ ಅವರು ನೀಡಿದ ವೀಕ್ಷಕರ ಗ್ಯಾಲರಿಯ ಪಾಸ್‌ಗಳನ್ನು ಇವರು ಬಳಸಿದ್ದು ನಂತರ ಕಂಡು ಬಂತು.

ಈ ಘಟನೆ ನಡೆದ ಸಂದರ್ಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, ಕಾನೂನು ಸಚಿವ ಅರ್ಜುನ್ ಮೇಘ್ವಾಲ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ 100ಕ್ಕೂ ಹೆಚ್ಚು ಸಂಸದರಿದ್ದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಅವರು ಸದನದಲ್ಲಿರಲಿಲ್ಲ. ಅವರು ಭೋಪಾಲದಲ್ಲಿ ಮುಖ್ಯಮಂತ್ರಿ ಮೋಹನ್ ಯಾದವ್ ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಘಟನೆ ನಡೆದಾಗ ಸಭಾಧ್ಯಕ್ಷರ ಸ್ಥಾನದಲ್ಲಿದ್ದ ರಾಜೇಂದ್ರ ಅಗರ್‌ವಾಲ್ ಅವರು ಕಲಾಪವನ್ನು ಒಂದು ಗಂಟೆ ಮುಂದೂಡಿದರು.

ಇದು 2001ರಲ್ಲಿ ನಡೆದ ಉಗ್ರವಾದಿ ದಾಳಿಗಿಂತ ದೊಡ್ಡ ಭದ್ರತಾ ಉಲ್ಲಂಘನೆ ಎಂದು ಪ್ರತಿಪಕ್ಷಗಳು ಟೀಕಿಸಿವೆ. ಅಂದಿನ ದಾಳಿಯಲ್ಲಿ ಸಂಸತ್ ಭವನಕ್ಕೆ ನುಗ್ಗಲು ಐವರು ಉಗ್ರರು ಯತ್ನಿಸಿದ್ದರು. ಅವರನ್ನು ತಡೆಯುವ ಯತ್ನದಲ್ಲಿ 11 ಭದ್ರತಾ ಸಿಬ್ಬಂದಿ ಹುತಾತ್ಮರಾಗಿದ್ದರು. ದಾಳಿ ನಡೆಸಿದ ಉಗ್ರರನ್ನು ಹೊಡೆದುರುಳಿಸಲಾಗಿತ್ತು.

ಮಧ್ಯಾಹ್ನ 2 ಗಂಟೆಗೆ ಕಲಾಪ ಪುನರಾರಂಭವಾದಾಗ ಮಾತನಾಡಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ, ಸಂಸತ್ ಭವನದ ಭದ್ರತೆಯ ಸಂಪೂರ್ಣ ಪುನರ್‌ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.

ತಕ್ಷಣದಿಂದ ಜಾರಿಗೆ ಬರುವಂತೆ ವೀಕ್ಷಕರ ಗ್ಯಾಲರಿಗೆ ಪಾಸ್ ನೀಡುವುದನ್ನು ನಿಲ್ಲಿಸಲಾಗಿದೆ. ಸಂಸತ್ ಭವನದ ಭದ್ರತಾ ಕ್ರಮಗಳ ಪರಿಶೀಲಿಸಲು ಕೇಂದ್ರ ಗೃಹ ಸಚಿವಾಲಯಕ್ಕೆ ಲೋಕಸಭಾ ಕಾರ್ಯಾಲಯ ಪತ್ರ ಬರೆದಿದೆ.

ಸದನದ ಬಾವಿಗೆ ಧುಮುಕಿದವವರನ್ನು ಸಾಗರ್ ಶರ್ಮ (26) ಹಾಗೂ ಡಿ. ಮನೋರಂಜನ್ (34) ಎಂದು ಗುರುತಿಸಲಾಗಿದೆ. ಸದನದ ಹೊರಗೆ ಹಳದಿ ಬಣ್ಣ ಹರಡಿದವರನ್ನು ಅಮೋಲ್ ಶಿಂಧೆ (25) ಹಾಗೂ ನೀಲಮ್ (42) ಎಂದು ಗುರುತಿಸಲಾಗಿದೆ. ಇವರನ್ನು ಸಂಸತ್ ರಸ್ತೆಯ ಪೊಲೀಸ್ ಠಾಣೆಯ ಪೊಲೀಸರು ಪ್ರಶ್ನಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಗುರು ಗ್ರಾಮದ ಐದನೇ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

ಮನೋರಂಜನ್ ಮೈಸೂರಿನವನಾದರೆ, ಶರ್ಮಾ ಲಖ್ನೌದವನು. ಶಿಂದೆ ಲಾತೂರ್ ಹಾಗೂ ನೀಲಂ ಹಿಸಾರ್‌ಗೆ ಸೇರಿದವರೆಂದು ತಿಳಿಸಲಾಗಿದೆ. ಈ ನಾಲ್ವರು ಗುರು ಗ್ರಾಮದಲ್ಲಿ ಇನ್ನಿಬ್ಬರ ಜೊತೆ ಒಂದೇ ಮನೆಯಲ್ಲಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಸತ್ ಭವನದ ಹೊರಗಡೆ ಶಿಂಧೆ ಹಾಗೂ ನೀಲಂ, ಸರ್ವಾಧಿಕಾರಕ್ಕೆ ಅವಕಾಶ ಕೊಡುವುದಿಲ್ಲ, ಭಾರತ್ ಮಾತಾ ಕಿ ಜೈ, ಜೈ ಭೀಮ್, ಜೈ ಭಾರತ್ ಎಂದೆಲ್ಲ ಘೋಷಣೆ ಕೂಗುತ್ತಿದ್ದರು.

ನಾನು ವಿದ್ಯಾರ್ಥಿನಿ, ನಾನು ನಿರುದ್ಯೋಗಿ, ಯಾವುದೇ ಸಂಘಟನೆಗೆ ಸೇರಿದವಳಲ್ಲ. ರೈತರಿಗೆ, ಸಣ್ಣ ವ್ಯಾಪಾರಿಗಳಿಗೆ ಹಾಗೂ ದಮನಿತರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿರುವುದಾಗಿ ನೀಲಂ ಹೇಳಿದ್ದಾಳೆ.

### ಪ್ರತಾಪ್ ಕಚೇರಿಯಿಂದ ಪಾಸ್ ಪಡೆದವರಿಂದ ದಾಳಿ

**(1ನೇ ಪುಟದಿಂದ)** ಸಂಸದ ಪ್ರತಾಪ್ ಸಿಂಹ ಅವರ ಕಚೇರಿಯಿಂದ ಪಾಸ್ ಪಡೆದಿದ್ದ ಎಂಬ ಅಂಶ ಇದೀಗ ವ್ಯಾಪಕ ಚರ್ಚೆಗೆ ಗ್ರಾಸ ವಾಗಿದೆ.

ಮೈಸೂರು ಸಂಸದ ಪ್ರತಾಪ್ ಸಿಂಹ ಅವರ ಕಚೇರಿಯಿಂದ ಪಾಸ್ ಪಡೆದ ಮನೋರಂಜನ್ ಅದನ್ನು ಬಳಸಿಕೊಂಡು ಸಂಸತ್ ಪ್ರವೇಶಿಸಿದ್ದ.

ಈ ಬೆಳವಣಿಗೆ ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲೂ ಪ್ರತಿಧ್ವನಿಸಿತಲ್ಲದೆ, ಅಷ್ಟು ತಿಳಿವಳಿಕೆ ಇರುವ ಪ್ರತಾಪ್ ಸಿಂಹ ಅದೇಕೆ ಇಂತವರಿಗೆ ಪಾಸ್ ಕೊಟ್ಟರು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ ಬೆಳವಣಿಗೆ ನಡೆಯಿತು. ಸಂಸತ್ತಿನಲ್ಲಿ ನಡೆದ ಘಟನೆಯ ಕುರಿತು ಸದನದಲ್ಲಿ ವಿಷಯ ಪ್ರಸ್ತಾಪವಾದಾಗ, ಈ ಘಟನೆಯನ್ನು ನಾವೆಲ್ಲ ಖಂಡಿಸುತ್ತೇವೆ. ಆದರೆ ಪ್ರತಾಪ್ ಸಿಂಹ ಬುದ್ಧಿವಂತ. ಅಂತವರು ಯಾವ ಕಾರಣಕ್ಕೆ ಇಂತವರಿಗೆ ಪಾಸ್ ನೀಡಿ ದರು? ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಅವರು ಹಾಕಿದ ಪ್ರಶ್ನೆ ಒಂದು ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಏರಿದ ಮಾತಿನ ಚಕಮಕಿಗೆ ಕಾರಣವಾಯಿತು.

ಈ ವಿಷಯವನ್ನು ಹಿಡಿದುಕೊಂಡು ರಾಜಕೀಯ ಮಾಡಬಾರದು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರೆ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಈ ರೀತಿ ಪಾಸ್ ನೀಡಿದವರು ಕಾಂಗ್ರೆಸ್ ಪಕ್ಷದ ಸಂಸದರಾಗಿದ್ದರೆ ನೀವು ಬಿಜೆಪಿಯವರು ಏನು ಮಾಡುತ್ತಿದ್ದಿರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇವತ್ತು ಪಾಸ್ ನೀಡಿದವರು ಬಿಜೆಪಿಯ ಪ್ರತಾಪ್ ಸಿಂಹ ಅವರಲ್ಲದೆ ಕಾಂಗ್ರೆಸ್ ಪಕ್ಷದವರಾಗಿದ್ದರೆ ಇದು ದೇಶದ್ರೋಹಿಗಳ ಕೃತ್ಯ ಎಂದು ಹುಯಿಲೆಬ್ಬಿಸುತ್ತಿದ್ದಿರಿ. ಎಷ್ಟೇ ಆದರೂ ದೇಶಪ್ರೇಮವನ್ನು ಗುತ್ತಿಗೆ ತೆಗೆದುಕೊಂಡವರು ನೀವು ಎಂದು ಅವರು ಕೋಪ ವ್ಯಕ್ತಪಡಿಸಿದಾಗ, ಬಿಜೆಪಿ ಸದಸ್ಯರು ಅದನ್ನು ವಿರೋಧಿಸಿದರು. ಆದರೆ ಅಂತಿಮವಾಗಿ ಸಂಸತ್ತಿನಲ್ಲಿ ನಡೆದ ಘಟನೆಯನ್ನು ಖಂಡಿಸುವಲ್ಲಿಗೆ ಈ ವಿಷಯ ಮುಕ್ತಾಯವಾಯಿತು.

# ತಪ್ಪು ಮಾಡಿದ್ದರೆ ಗಲ್ಲಿಗೆ ಹಾಕಿ : ಮನೋರಂಜನ್ ತಂದೆಯ ಆಕ್ರೋಶ

ಬೆಂಗಳೂರು, ಡಿ. 12 - ಸಂಸತ್ತಿನಲ್ಲಿ ನಡೆದ ಅಶ್ರುವಾಯು ಘಟನೆಯಲ್ಲಿ ಭಾಗಿಯಾದ ಮನೋರಂಜನ್ ತಪ್ಪು ಮಾಡಿದ್ದರೆ ಗಲ್ಲಿಗೆ ಹಾಕುವಂತೆ ತಂದೆ ದೇವರಾಜೇಗೌಡರು ಆಕ್ರೋಶ ಭರಿತ ಪ್ರತಿಕ್ರಿಯೆ ನೀಡಿದ್ದಾರೆ.

ಮೈಸೂರಿನ ವಿಜಯನಗರದವರಾದ ದೇವರಾಜೇಗೌಡ ಅವರು ಇಂದು ಸುದ್ದಿಗಾರ ರೊಂದಿಗೆ ಮಾತನಾಡಿ, ತಮ್ಮ ಮಗ ವಿವೇಕಾನಂದರ ಆದರ್ಶಗಳಿಂದ ಪ್ರೇರೇಪಿತನಾಗಿದ್ದ. ಸಮಾಜಕ್ಕೆ ಏನಾದರೂ ಒಳ್ಳೆಯದನ್ನು ಮಾಡಬೇಕು ಎಂದು ಹಂಬಲಿಸುತ್ತಿದ್ದ. ಅಂತವನು ಹೀಗೇಕೆ ಮಾಡಿದ ಎಂಬುದು ಅರ್ಥವಾಗುತ್ತಿಲ್ಲ ಎಂದು ಅಚ್ಚರಿ ವ್ಯಕ್ತಪಡಿಸಿದರು. ಯಾರೇ ಆಗಲಿ ಸಮಾಜಕ್ಕೆ ಒಳ್ಳೆಯದು ಮಾಡಬೇಕು. ಈ ರೀತಿ ಸಮಾಜ ವಿರೋಧಿ ಕೆಲಸ ಮಾಡಿದರೆ ಗಲ್ಲಿಗೆ ಹಾಕಬೇಕು ಎಂದು ಹೇಳಿದರು.

ಆತನಿಗೆ ಮೂವತ್ನಾಲ್ಕು ವರ್ಷಗಳಾಗಿದ್ದವು. ಮದುವೆ ಮಾಡಿಕೊಳ್ಳದ ಆತ ಕೆಲಸಕ್ಕೂ ಹೋಗುತ್ತಿರಲಿಲ್ಲ. ಹೀಗಾಗಿ ಮದುವೆಯಾಗಿ, ನಾನು ಮಾಡಿರುವ ತೋಟವನ್ನು ನೋಡಿಕೋ ಎಂದು ಹೇಳುತ್ತಿದ್ದೆ. ಆದರೆ ಆತ ಅದ್ಯಾವುದನ್ನೂ ಕೇಳಿರಲಿಲ್ಲ ಎಂದು ಹೇಳಿದರು.

ನಾವು ಮೂಲತಃ ಹಾಸನ ಜಿಲ್ಲೆಯವರಾಗಿದ್ದು, ಮಗನ ವಿದ್ಯಾಭ್ಯಾಸದ ಸಲುವಾಗಿಯೇ ಹದಿನೈದು ವರ್ಷಗಳ ಹಿಂದೆ ಮೈಸೂರಿಗೆ ಬಂದೆವು. ಇಲ್ಲಿ 2ನೇ ಪಿಯುಸಿ ತನಕ ವ್ಯಾಸಂಗ ಮಾಡಿದ ಆತ ಬೆಂಗಳೂರಿನ ಬಿ.ಐ.ಟಿ ಯಲ್ಲಿ ಇಂಜಿನಿಯರಿಂಗ್ ಮಾಡಿದ್ದ.

ಆ ಸಂದರ್ಭದಲ್ಲಿ ದೇವೇಗೌಡರೇ ಅವನಿಗೆ ಬಿ.ಐ.ಟಿ ಯಲ್ಲಿ ಸೀಟು ಕೊಡಿಸಿದ್ದರು.ಆದರೆ ತದನಂತರ ಆತ ಕೆಲಸಕ್ಕೂ ಹೋಗಲಿಲ್ಲ. ಮದುವೆಯನ್ನೂ ಮಾಡಿಕೊಳ್ಳಲಿಲ್ಲ. ಕೇಳಿದರೆ ಸಮಾಜಕ್ಕಾಗಿ ಏನನ್ನಾದರೂ ಮಾಡಬೇಕು ಎನ್ನುತ್ತಿದ್ದ. ಆದರೆ ಹೀಗೆ ಮಾಡುತ್ತಾನೆ ಎಂಬ ಕಲ್ಪನೆಯಿರಲಿಲ್ಲ ಎಂದರು.

ಮೂರ್ನಾಲ್ಕು ದಿನಗಳ ಹಿಂದೆ ಬೆಂಗಳೂರಿಗೆ ಹೋಗಿ ಬರುತ್ತೇನೆ ಎಂದು ಹೇಳಿ ಹೋಗಿದ್ದ. ಆತ ದೆಹಲಿಗೆ ಹೋಗುವುದಾಗಿ ನನಗೇನೂ ಹೇಳಿರಲಿಲ್ಲ. ಯಾವ ದುರಭ್ಯಾಸಗಳೂ ಇಲ್ಲದ ಮಗ ಹೀಗೇಕೆ ಮಾಡಿದ ಎಂದು ದೇವರಾಜೇಗೌಡ ವಿಷಾದ ವ್ಯಕ್ತಪಡಿಸಿದರು.

# ಕೈಗಾರಿಕೆ ಸ್ಥಾಪನೆಗೆ ಜಮೀನು ಪಡೆಯಲು ಅರ್ಜಿ ಆಹ್ವಾನ

ದಾವಣಗೆರೆ, ಡಿ. 13 - ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಜಿಲ್ಲೆಯ ಸಾರಥಿ, ಕುರುಬರಹಳ್ಳಿ 1ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ಉದ್ದಿಮೆದಾರರಿಂದ ಕೈಗಾರಿಕೆ ಸ್ಥಾಪನೆಗೆ ಜಮೀನು ಹಂಚಿಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಉದ್ದಿಮೆದಾರರು ನಗರದ ಕರೂರು ಕೈಗಾರಿಕಾ ಪ್ರದೇಶದಲ್ಲಿನ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಅರ್ಜಿ ನಮೂನೆಯನ್ನು ಪಡೆಯಬೇಕು. ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಅದೇ ಕಚೇರಿಗೆ ಸಲ್ಲಿಸಬೇಕು ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# ರಾಣೇಬೆನ್ನೂರು : ಬಿ.ಎ.ಜೆ.ಎಸ್.ಎಸ್. ಕಾಲೇಜ್‌ಗೆ ಉತ್ತಮ ಫಲಿತಾಂಶ



ಚೈತ್ರಾ



ಯಶೋಧ

ರಾಣೇಬೆನ್ನೂರು, ಡಿ. 13 - ನಗರದ ಬಿ.ಎ.ಜೆ. ಎಸ್.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದ 2022-23 ರ ಫಲಿತಾಂಶ ಪ್ರಕಟವಾಗಿದ್ದು, ಕಾಲೇಜ್‌ಗೆ ಶೇ. 96.63 ಫಲಿತಾಂಶ ಲಭ್ಯವಾಗಿದೆ.

ಕಲಾ ವಿಭಾಗದಲ್ಲಿ ಯಶೋಧ ಪೂಜಾರ ಶೇ. 88.76 ಪ್ರತಿಶತ ಅಂಕ ಪಡೆದು ಕಾಲೇಜ್‌ಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಶೇ. 87.46 ಪ್ರತಿಶತ ಅಂಕ ಪಡೆದ ನಂದಿನಿ ತೋಟದ ದ್ವಿತೀಯ ಹಾಗೂ ಶೇ. 87.23 ಅಂಕ ಪಡೆದ ಅಕ್ಷತಾ ಸೊಪ್ಪಿನ ತೃತೀಯ ಸ್ಥಾನ ಪಡೆದಿರುತ್ತಾರೆ.

ವಾಣಿಜ್ಯ ವಿಭಾಗದಲ್ಲಿ ಕುಮಾರಿ ಚೈತ್ರಾ ಅಂತರವಳ್ಳಿ ಶೇ. 88.93 ಅಂಕ ಪಡೆದು ಕಾಲೇಜ್‌ಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ.

ಶೇ. 87.98 ಅಂಕ ಪಡೆದ ದೀಪಾ ದೇವರಗುಡ್ಡ ದ್ವಿತೀಯ ಸ್ಥಾನ ಪಡೆದರೆ, ಶೇ. 85.10 ಅಂಕ ಪಡೆದ ಶ್ವೇತಾ ಮಾಳಗಿ ತೃತೀಯ ಸ್ಥಾನ ಪಡೆದಿರುತ್ತಾರೆ. ಉಳಿದ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ರುದ್ರಪ್ಪ ಎಂ. ಲಮಾಣಿಯವರು, ಕಾರ್ಯದರ್ಶಿ / ಆಡಳಿತಾಧಿಕಾರಿ ಡಾ. ಆರ್.ಎಂ. ಕುಬೇರಪ್ಪ ಹಾಗೂ ಪ್ರಾಚಾರ್ಯರಾದ ಡಾ. ಸುರೇಶ ಬಣಕಾರ ಸೇರಿದಂತೆ ಇತರರು ಅಭಿನಂದಿಸಿದ್ದಾರೆ.


**ಸೈಟ್ ಮಾರಾಟಕ್ಕೆ**
ಆಂಜನೇಯ ಲೇಔಟ್
ಕಿರಣ್ ಭೂಸ್ನೂರ್ (ಏಜೆಂಟ್)
98440-63409, 97315-63409
ಸೈಟ್ : ಉತ್ತರ 30x55.5
ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ.
ಕೇವಲ ಅರ್ಧ ಪರ್ಸೆಂಟ್ (1/2%) ಕಮೀಷನ್ ನನ್ನದು

**ಈ ಕೆಲಸಕ್ಕೆ ನಮ್ಮಲ್ಲಿ ವಿಚಾರಿಸಿ**
* EC ಖಾತೆ ಬದಲಾವಣೆ * ಬಿಲ್ಡಿಂಗ್ ಲೈಸೆನ್ಸ್ * ಸೈಟು, ಮನೆ ಕಂದಾಯ * ಸೈಟುಗಳ ಜೋಡಣೆ & ವಿಂಗಡಿಸುವುದು * ಕಳೆದಿರುವ ಆಲಿನೇಷನ್ ಕಾಪಿ * ಲೇಔಟ್ ಪ್ಲಾನ್, ಸರ್ಟಿಫಿಕೇಟ್ ಕಾಪಿ * ಆಸ್ತಿಗಳ ನೋಂದಣಿ * ಬಿಲ್ಡಿಂಗ್ ಕನ್‌ಸ್ಟ್ರಕ್ಷನ್‌ಗಳಿಗೆ ವಿಚಾರಿಸಿ :
ಕಿರಣ್ ಭೂಸ್ನೂರ್
98440 63409

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಗ್ಲೋಬಲ್ ಸ್ಕೂಲ್ ಹತ್ತಿರ 30x50, 30x50 South ಅಕ್ಕ-ಪಕ್ಕ, Rate - 2900/- ವಿಜನ್ ಇಂಟರ್ ನ್ಯಾಷನಲ್ ಸ್ಕೂಲ್ ಹತ್ತಿರ 30x40 ,30x40 East ಅಕ್ಕ-ಪಕ್ಕ, Rate - 2600 /-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರದಲ್ಲಿ ಹೊಸ ಬನಶಂಕರಿ ಲೇಔಟ್‌ನಲ್ಲಿ 30x40, 30x40 West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x50 West, 40x60 West, 40x60 Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಸೊಸೈಟಿಯಲ್ಲಿ ಮಹಿಳೆಯರು ಕೆಲಸಕ್ಕೆ ಟೈಲರಿಂಗ್ ಕೆಲಸಕ್ಕೆ ಮಹಿಳೆಯರು ಅಂಗಡಿಯಲ್ಲಿ ಕೆಲಸಕ್ಕೆ ಎಸ್ಸೆಸ್ಸೆಲ್ಸಿ ಫೇಲಾದ ಹುಡುಗ-ಹುಡುಗಿಯರು ಪಾರ್ಟ್‌ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
91486 70932, 88614 38237

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಸಮೀಪ ರಾಷ್ಟ್ರೀಯ ಹೆದ್ದಾರಿ ಹತ್ತಿರ ಕೊಗ್ಗನೂರು ಬಳಿ 30 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99000 12266

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, Rate- 2800/- 40x60 East, 40x60 South, 30x40 East, 40x60 North, 30x50 West. 60 ಅಡಿ ರೋಡಿಗಿದೆ, Rs - 35 Lakh a/c money ಬೇಕು.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸುಸಜ್ಜಿತ ಹೋಟೆಲ್ ಕೊಡುವುದಿದೆ/ಬಾಡಿಗೆಗಿದೆ**
ದಾವಣಗೆರೆಯ ಪ್ರತಿಷ್ಠಿತ ಬಡಾವಣೆಯಲ್ಲಿ ವೆಜ್ ಅಂಡ್ ನಾನ್ ವೆಜ್ ಹೋಟೆಲ್, ತಿಂಡಿ ತಿನಿಸುಗಳು, ಚಾಟ್ಸ್, ಕೆಫೆ ತಕ್ಷಣ ನಡೆಸಿಕೊಂಡು ಹೋಗಲು ಎಲ್ಲಾ ಅನುಕೂಲತೆಯುಳ್ಳ ಹೋಟೆಲ್ ಮಾರಾಟಕ್ಕಿದೆ (ಕಟ್ಟಡ ಹೊರತುಪಡಿಸಿ)/ಬಾಡಿಗೆಗಿದೆ. ಸಂಪರ್ಕಿಸಿ:
77600 05504 / 99864 45843
What's app : 8105676876

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 09.02.2024 ರಿಂದ 19.02.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ. ಕಾಶಿ ಪ್ರವಾಸಕ್ಕೆ ಕೇವಲ 20 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ವೆಜ್ ಅಂಡ್ ನಾನ್ ವೆಜ್ ಹೋಟೆಲ್ ಗೆ ವೇಟ್ಟರ್ ಕೆಲಸಕ್ಕೆ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ.
70224 60137

**ಬೇಕಾಗಿದ್ದಾರೆ**
ಅಶೋಕ್ ಲೇಲ್ಯಾಂಡ್ ಓಡಿಸಬಲ್ಲ ಬ್ಯಾಡ್ಜ್‌ವುಳ್ಳ ಡ್ರೈವರ್ ಬೇಕಾಗಿದ್ದಾರೆ. ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
SSLC ನೇರ ಪರೀಕ್ಷೆ
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266

**SHARP WANTED**
Customer Support Engineer in Office Systems work
Diploma (Ladies)
Gaurav Communication
Davanagere.
94487 28866

**ಬೇಕಾಗಿದ್ದಾರೆ**
ಹರಿಹರ, ದೊಡ್ಡಬಾತಿ ಮತ್ತು ಕುಮಾರ ಪಟ್ಟಣಂಗೆ ಮೀಶೋ ಲಾಜಿಸ್ಟಿಕ್ಸ್ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
ಒಂದು ಡೆಲಿವರಿಗೆ 15 ರೂ. ವಿಳಾಸ : ವಿದ್ಯಾನಗರ 'ಬಿ' ಬ್ಲಾಕ್, 3ನೇ ಮೇನ್, 1ನೇ ಕ್ರಾಸ್, ಎದುರುಗಡೆ ಗ್ರಾಮ ದೇವತೆ ಆಟೋ ನಿಲ್ದಾಣ, ಭೇಟಿಯ ಸಮಯ : ಬೆ. 10.30 ರಿಂದ ಮ. 2 ರವರೆಗೆ.
86606 12391, 77604 96670

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
99642 12379

**COMMERCIAL COMPLEX FOR RENT**
Ground Floor - 600 Sq.ft
First Floor 1700 Sq.ft
Second Floor 1700 Sq.ft
with lift facility in chetan Hotel Road, Davanagere.
79752 35107

**NEED COMPUTER OPERATOR**
Near Ram & Co. Circle, Male Only.
Contact :
70221 58395

**ವಧು ಬೇಕಾಗಿದೆ**
ವಕ್ಕಲಿಗ ಗೌಡ 39 ವರ್ಷ 5.8 ಎತ್ತರ, ಡಿಪ್ಲೋಮಾ ಪದವಿಧರ, ಸ್ವಂತ ಉದ್ಯಮ ಹೊಂದಿರುವ ವಾರ್ಷಿಕ ವರಮಾನ 40 ಲಕ್ಷಕ್ಕೂ ಮೇಲ್ಪಟ್ಟು ಇರುವ ಮಕ್ಕಳಿಲ್ಲದ ವಿಚ್ಛೇದಿತ ವರನಿಗೆ ಹಿಂದೂ ಜಾತಿಯ ವಿದ್ಯಾವಂತ ವಧು ಬೇಕಾಗಿದ್ದಾರೆ.
82962 30150
(ಮಂಗಳೂರು)

**ಶಕೀರಾ ಬ್ಯೂಟಿ ಪಾರ್ಲರ್/ಸಲೂನ್**
Shakeera Beauty Parlour/Salon
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸಕ್ಕಾಗಿ ಬೇಕಾಗಿದ್ದಾರೆ.
ಬ್ಯೂಟಿಷಿಯನ್ - 2, ಸಹಾಯಕರು - 2
ಸಂಪರ್ಕಿಸಿ : 93420 19013
#741/4, 10th Main, P.J. Extension Opposite Modi Compound, Davanagere-2.

**ಪೇಪರ್ ಕಪ್ ಮಾಡುವ ಸೆಕೆಂಡ್‌ಹ್ಯಾಂಡ್ ಮಿಷನ್ ಮಾರಾಟಕ್ಕಿದೆ**
ಸಂಪರ್ಕಿಸಿ : ದಾವಣಗೆರೆ.
93807 13883

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**HOUSE FOR RENT**
Newly built house
Ground floor and First floor
# 868/51, Shankar Viihar Badavane, Near Vani Honda showroom, PB Road Block 3rd, 2nd cross, Near siddi Vinayaka Temple, Davangere -4.
97397 97638

**ರಕ್ತ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ
(Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**CHANGE OF NAME**
I Supriya Hurigejji (old name) w\o Ajay A.K. Resident of # 4090, Basava 1888 Nilaya, 11th main, 8th Cross, MCC 'B' Block Extended, Manasa Convent road, Davanagere, Karnataka - 577004, have changed my name Supriya Hurigejji (old name) to Supriya A.A (New name) vide affidavit dated 02.11.2023 sworn before notary H.M. Doddagoudar, Davanagere, Hence forth all my transactions and dealings will be in my new name Supriya A.A.

**HOUSE FOR RENT**
Newly Built House 2 BHK Ground Floor, No 269/3-11, Sukhadatri, Dollers Colony Shamanur, Behind Rastha Hotel Davanagere. Contact :
99453 63356

**ಬೇಕಾಗಿದ್ದಾರೆ**
ಮಗುವಿನ ಆರೈಕೆ ಮಾಡುವ ಕೆಲಸಕ್ಕೆ ಸ್ತ್ರೀಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
99865 99923
91642 56425

**HOUSES FOR RENT**
1BHK, 2BHK, 3BHK Duplex, Indepedent, S.S. Layout, Shivakumar swamy Layout, MCC `B' Block.
77955 06795
Dakshith Iyanahalli

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಊಟ, ವಸತಿಯ ಸೌಲಭ್ಯವಿದೆ.
ಸಂಬಳ : 8000-13000
ಫೋ. : 9632903976
97311 55583, 96329 03973

**ಹುಡುಗರು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಇರುವ ಮೆಗಾ ಮಾರ್ಟ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9.30 ರಿಂದ ರಾತ್ರಿ 9 ರವರೆಗೆ
81340 34264
81975 17215

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಹುಡುಗರು ಬೇಕಾಗಿದ್ದಾರೆ**
ಶ್ರೀ ಮಂಜುನಾಥ ಟ್ರ್ಯಾಕ್ಟರ್ಸ್
ಸೋನಾಲಿಕಾ ಟ್ರ್ಯಾಕ್ಟರ್ ಬಿಡಿ ಭಾಗಗಳ ಅಧಿಕೃತ ಮಾರಾಟಗಾರರು
ಇವರಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ದಾವಣಗೆರೆ.
99729 74626

**WANTED**
• Vendor,
• Cashier & Billing,
• Waiter
• Ladies for wash
98861 56688

**ಬೇಕಾಗಿದ್ದಾರೆ**
ನಮ್ಮ ಮಾರಾಟ ಮಳಿಗೆಯಲ್ಲಿ ಕೌಂಟರ್ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು.
ಪರಿಮಳ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
94482 72734

**2 ಬೆಡ್ ರೂಂ ಮನೆ ಬಾಡಿಗೆಗೆ**
ಡೋ.ನಂ. 240/2, 4ನೇ ಮೇನ್, ಪಿ.ಜೆ. ಬಡಾವಣೆ, ನರ್ಸರಿ ಜೈನ್ ವಿದ್ಯಾಲಯದ ಹತ್ತಿರ, ರಾಂ ಅಂಡ್ ಕೋ ಸರ್ಕಲ್ ಬಳಿ 2 ಬೆಡ್ ರೂಂನ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
93809 21540, 89719 49707

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

## ಹೊಸ ವಂಟಮುರಿ ಮಹಿಳೆ ಬೆತ್ತಲೆ ಪ್ರಕರಣ: ಎಐಎಂಎಸ್ಎಸ್ ಖಂಡನೆ



ದಾವಣಗೆರೆ, ಡಿ. 13- ಬೆಳಗಾವಿ ಜಿಲ್ಲೆಯ ಹೊಸ ವಂಟಮುರಿ ಗ್ರಾಮದಲ್ಲಿ ಮಹಿಳೆಯನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿ, ಥಳಿಸಿರುವ ಅಮಾನವೀಯ ಘಟನೆಯನ್ನು ಎಐಎಂಎಸ್ಎಸ್ ತೀವ್ರವಾಗಿ ಖಂಡಿಸಿದೆ.

ಬೆತ್ತಲೆಗೊಳಿಸಿದ್ದ ಮಹಿಳೆಯ ಮಗ ಮತ್ತು ಅದೇ ಜಾತಿಯ ಹುಡುಗಿ ಪರಸ್ಪರ ಪ್ರೀತಿಸಿ ಓಡಿ ಹೋಗಿದ್ದರು. ಇದರಿಂದ ರೊಚ್ಚಿಗೆದ್ದ ಯುವತಿಯ ಮನೆಯವರು ಯುವಕನ ತಾಯಿಯನ್ನು ವಿವಸ್ತ್ರಗೊಳಿಸಿ ಬೀದಿಗಳಲ್ಲಿ ಓಡಾಡಿಸಿ ನಂತರ ವಿದ್ಯುತ್ ಕಂಬಕ್ಕೆ ಕಟ್ಟಿ ಥಳಿಸಿದ್ದಾರೆ. ಆಕೆಯ ಮನೆಯನ್ನೂ ಸಹ ಧ್ವಂಸ ಮಾಡಲಾಗಿದೆ. ಈ ಪ್ರಕರಣವನ್ನು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್ಎಸ್) ತೀವ್ರವಾಗಿ ಖಂಡಿಸಿದೆ.

ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಾಗಿದೆ. ಇದರಲ್ಲಿ ಭಾಗಿಯಾದ ಹಲವರನ್ನು ಬಂಧಿಸಲಾಗಿದೆ. ಉಳಿದವರನ್ನು ಸರ್ಕಾರ ಕೂಡಲೇ ಬಂಧಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸಂತ್ರಸ್ತ ಮಹಿಳೆಗೆ ಭದ್ರತೆ ಮತ್ತು ನ್ಯಾಯ ಒದಗಿಸಿ ಕೊಡಬೇಕೆಂದು ಒತ್ತಾಯಿಸಿದ್ದಾರೆ.

## 45 ದಿನಗಳಲ್ಲಿ ನಾಗಮೋಹನ್ ದಾಸ್ ವರದಿ ನೀಡಲು ಸೂಚನೆ

ಬೆಂಗಳೂರು, ಡಿ. 13 – ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ 40 ಪರ್ಸೆಂಟ್ ಕಮೀಷನ್ ಆರೋಪದ ತನಿಖೆಗಾಗಿ ನೇಮಿಸ ಲಾಗಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮನೋಹನ್ ದಾಸ್ ನೇತೃತ್ವದ ಏಕ ಸದಸ್ಯ ತನಿಖಾ ಆಯೋಗ, 45ದಿನಗಳಲ್ಲಿ ಮೊಹರು ಮಾಡಿದ ಲಕೋಟೆಯಲ್ಲಿ ವರದಿ ನೀಡಬೇಕು ಎಂದು ಹೈಕೋರ್ಟ್ ತಿಳಿಸಿದೆ.ತನಿಖಾ ಆಯೋಗದ ರಚನೆ ಕ್ರಮವನ್ನು ನಿಕ್ಷೇಪ್ ಇನ್‌ಫ್ರಾ ಪ್ರಾಜೆಕ್ಟ್ಸ್ ಹಾಗೂ 44 ಇತರೆ ಗುತ್ತಿಗೆದಾರರು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ತನಿಖೆಯ ಕಾರಣದಿಂದ ಕಾಮಗಾರಿಗಳ ಬಿಲ್ ಪಾವತಿಯಾಗುತ್ತಿಲ್ಲ ಎಂದು ಅವರು ಆರೋಪಿಸಿದ್ದಾರೆ.

# ಪರಮಾತ್ಮ ಪರಂಧಾಮದಲ್ಲಿದ್ದಾನೆ

## ಅಣು ರೇಣು ತೃಣ-ಕಾಷ್ಠಗಳಲ್ಲೂ ಇಲ್ಲ, ಸರ್ವವ್ಯಾಪಿಯೂ ಅಲ್ಲ

ದಾವಣಗೆರೆ, ಡಿ. 13- ಪರಮಾತ್ಮ ಸರ್ವವ್ಯಾಪಿಯಲ್ಲ, ಅವನು ಪರಂಧಾಮದಲ್ಲಿರುತ್ತಾನೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ಪ್ರತಿಪಾದಿಸಿದರು.

ಇಲ್ಲಿನ ವಿದ್ಯಾನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾ ಲಯದ ಆವರಣದಲ್ಲಿ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ 10ನೇ ದಿನವಾದ ಬುಧವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಆತ್ಮಗಳಾದ ನಾವೆಲ್ಲಾ ಭೂ ಲೋಕದಲ್ಲಿದ್ದೇವೆ. ಭೂ ಲೋಕದ ಮೇಲೆ ಸೂಕ್ಷ್ಮ ಲೋಕವೊಂದಿದೆ ಅದು ಪುಣ್ಯ ಜೀವಿಗಳ ವಾಸಸ್ಥಳ. ಅದರಾಚೆಗೆ ಇರುವುದೇ ಪರಂಧಾಮ. ಅದಕ್ಕೆ ಮುಕ್ತಿ ಧಾಮ, ಶಿವಲೋಕ, ಆತ್ಮಲೋಕ ಎಂಬ ಹೆಸರುಗಳು ಇವೆ. ಅಲ್ಲಿ ಪರಮಾತ್ಮನಿರುತ್ತಾನೆ ಎಂದು ವಿಶ್ಲೇಷಿಸಿದರು.

ಬೈಬಲ್‌ನಲ್ಲೂ ಪರಮಾತ್ಮ ಸ್ವರ್ಗದಲ್ಲಿದ್ದಾನೆ ಎಂದು ಹೇಳಲಾಗುತ್ತಿದೆ. ಖುರಾನ್ ನಲ್ಲೂ ಸಹ ಪರಮಾತ್ಮನಾದ ಅಲ್ಲಾಹ್ ಏಳು ಲೋಕದ ಆಚೆ ಇರುತ್ತಾನೆ ಎಂದು ಹೇಳಲಾಗುತ್ತದೆ ಎಂದರು.

ಪರಮಾತ್ಮ ಸರ್ವವ್ಯಾಪಿ, ಅಣು ರೇಣು ತೃಣ-ಕಾಷ್ಠಗಳಲ್ಲೂ ಪರಮಾತ್ಮ ಇದ್ದಾನೆ ಎಂಬುದು ಎಲ್ಲರೂ ಹೇಳುವ ಸಾಮಾನ್ಯ ಮಾತಾಗಿದೆ. ಎಲ್ಲಾ ಕಡೆಯೂ ಪರಮಾತ್ಮ ಇದ್ದಾನೆ ಎನ್ನುವುದಾದರೆ ದೇವಸ್ಥಾನಗಳನ್ನು ಕಟ್ಟುವುದಾದರೂ ಏಕೆ ? ಇದರಿಂದ ಪರಮಾತ್ಮ ಎಲ್ಲಾ ಕಡೆಯೂ ಇಲ್ಲ ಎಂಬ



ಮಾತು ಅನುಭಾವಕ್ಕೆ ಬರುತ್ತದೆ ಎಂದರು.

ದೇವಸ್ಥಾನಕ್ಕೆ ಹೋದವರು ದೇವರೇ ರಕ್ಷಿಸಿ ಎಂದು ಕತ್ತು ಮೇಲೆತ್ತಿ ನೋಡಿ ನಮಸ್ಕರಿಸುತ್ತಾರೆ. ಮುದುಕರು, ಅನಾರೋಗ್ಯ ಪೀಡಿತರು ಮೇಲೆ ನೋಡಿ ದೇವರೇ ನನ್ನನ್ನು ಕರೆದುಕೊಂಡು ಬಿಡು ಎಂದು ದೇವರಲ್ಲಿ ಮೊರೆ ಇಡುತ್ತಾರೆ. ಇದರಿಂದ ತಿಳಿಯುವುದೇನೆಂದರೆ ಪರಮಾತ್ಮ ಮೇಲಿದ್ದಾನೆ ಎಂಬ ಭಾವ.

ಬಸವಾದಿ ಶಿವಶರಣರ ಆರಂಭದ ವಚನಗಳಲ್ಲಿ ಪರಮಾತ್ಮ ಎಲ್ಲಡೆ ಇದ್ದಾನೆ ಎಂದು ಹೇಳಲಾಗಿದೆಯಾದರೂ, ನಂತರದ ವಚನಗಳಲ್ಲಿ ಪರಮಾತ್ಮ ಅಣು ರೇಣು ತೃಣಕಾಷ್ಠಗಳಲ್ಲಿ ಇಲ್ಲ ಎಂಬುದನ್ನು ನಿರೂಪಿಸುತ್ತವೆ ಎಂದರು.

ಶರಣರ ವಚನಗಳಲ್ಲಿ ಮೂರು ಹಂತಗಳಿವೆ. ಪುರಾಣ, ವೇದ ಉಪನಿಷತ್‌ಗಳ ಮೇಲೆ ಪ್ರಭಾವಿತರಾಗಿ ಬರೆದಿರುವುದು ಒಂದು ಹಂತವಾದರೆ, ನಂತರ ಸಾಧನಾ ಮಾರ್ಗದಲ್ಲಿ ಬರೆದ ವಚನಗಳು ಎರಡನೇ ಹಂತ. ಮೂರನೇ ಹಂತದಲ್ಲಿ ಶರಣರು ಅನುಭವ ಮಂಟಪದಲ್ಲಿ ಯತಾರ್ಥ ಸತ್ಯ ಹುಡುಕಲು ಪ್ರಯತ್ನಿಸಿ, ಶಿವಧ್ಯಾನದಿಂದ ಸತ್ಯಾಸತ್ಯತೆ ಅರಿತು ಬರೆದ ವಚನಗಳಾಗಿವೆ ಎಂದು ಅಭಿಪ್ರಾಯಿಸಿದರು.

ಶರಣರ ವಚನಗಳನ್ನು ನಿರ್ಣಯಿಸಿ ಅರ್ಥ ಮಾಡಿಕೊಳ್ಳಲೂ ಸಹ ಪುಣ್ಯ ಬೇಕು. ಅದನ್ನು ಅರ್ಥೈಸಿಕೊಡುವ ಗುರು ಬೇಕು. ನಮಗೆ ಅಂತಹ ಮಹಾನ್ ಗುರು ಸಿಕ್ಕಿದ್ದು, ಆ ಗುರುವಿನ ಅನುಗ್ರಹದಿಂದ ಅರ್ಥ ಮಾಡಿಕೊಳ್ಳುವ ಅವಕಾಶ ಸಿಕ್ಕಿದೆ. ಆ ಗುರವೇ ಪರಮಾತ್ಮ, ಅವನು ನಿಮಗೂ ಖಂಡಿತ ಸಿಗುತ್ತಾನೆ. ಆದರೆ ದಿನಕ್ಕೆ ಒಂದು ಗಂಟೆಯಂತೆ ನೀವೆಲ್ಲಾ 108 ಗಂಟೆಗಳ ಸಮಯ ಮೀಸಲಿಡಬೇಕಾಗುತ್ತದೆ ಎಂದು ಹೇಳಿದರು.

140 ದೇಶಗಳಲ್ಲಿ ಈಶ್ವರೀಯ ವಿಶ್ವವಿದ್ಯಾಲಯದ ಶಾಖೆಯಲ್ಲಿ ಶಿವನ ವಿದ್ಯಾರ್ಥಿಗಳಿಗೆ ಶಿವನೇ ಶಿಕ್ಷಣ ಕೊಡುತ್ತಿದ್ದಾನೆ. ನೀವೂ ಬಯಸಿದರೆ ನಿಮ್ಮ ಜೊತೆಯೂ ಪರಮಾತ್ಮ ಮಾತನಾಡುತ್ತಾನೆ. ಆ ಅನುಭಾವ ನಿಮಗಾಗುತ್ತದೆ ಎಂದು ಕರೆ ನೀಡಿದರು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಸಂಸ್ಥೆಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಿಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.

## ಮಧ್ಯಪ್ರದೇಶ : ಮೋಹನ್ ಯಾದವ್ ಪ್ರಮಾಣ ವಚನ



ಭೂಪಾಲ್, ಡಿ. 13 – ಮೋಹನ್ ಯಾದವ್ ಮಧ್ಯಪ್ರದೇಶದ ಮುಖ್ಯಮಂತ್ರಿ ಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲ ಮಂಗುಭಾಯಿ ಪಟೇಲ್ ಅವರು ಲಾಲ್ ಪರೇಡ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪ್ರಮಾಣ ವಚನ ಬೋಧಿಸಿದರು. ಉಪ ಮುಖ್ಯಮಂತ್ರಿಗಳಾಗಿ ಜಗದೀಶ್ ದೇವ್ಡ ಹಾಗೂ ರಾಜೇಂದ್ರ ಶುಕ್ಲ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತಿತರರು ಉಪಸ್ಥಿತರಿದ್ದರು.

## ಕಾನೂನು ಎಲ್ಲರಿಗೂ ಒಂದೇ ಎಂಬ ಸಂದೇಶ ನೀಡಿದ ಸುಪ್ರೀಂ ತೀರ್ಪು



ದಾವಣಗೆರೆ, ಡಿ.13- ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಿರ್ಧಾರವನ್ನು ಸರ್ವೋಚ್ಛ ನ್ಯಾಯಾಲಯ ಸರಿ ಎಂದು ತೀರ್ಪು ನೀಡಿದ್ದರಿಂದ ದೇಶದ ಕಾನೂನು ಎಲ್ಲರಿಗೂ ಒಂದೇ ಎಂಬ ಸಂದೇಶವನ್ನು ನೀಡಿದಂತಾಗಿದೆ ಎಂದು ದೂಡಾ ಮಾಜಿ ಅಧ್ಯಕ್ಷ ಎ. ವೈ. ಪ್ರಕಾಶ್ ಅಭಿಪ್ರಾಯಿಸಿದ್ದಾರೆ.

ಪ್ರಧಾನಮಂತ್ರಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ತೆಗೆದುಹಾಕಿದ್ದನ್ನು ವಿರೋಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಸರ್ವೋಚ್ಛ ನ್ಯಾಯಾಲಯ ಈಗ ಸರಿಯಾದ ತೀರ್ಪು ನೀಡಿದೆ. ಅದೇ ರೀತಿ ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರ ದೇಶಾದ್ಯಂತ ಇರುವ ಎಲ್ಲಾ ಧರ್ಮದ ಜನರಿಗೆ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಕ್ರಮ ಕೈಗೊಳ್ಳಲಿ. ಈ ಹಿಂದೆ ಸುಪ್ರೀಂ ಕೋರ್ಟ್ ಸಹ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಬಗ್ಗೆ ಕೇಂದ್ರ ಸರ್ಕಾರದ ನಿರ್ಧಾರವನ್ನು ತಿಳಿಸಲು ಸೂಚನೆ ನೀಡಿತ್ತು ಎಂದು ಅವರು ತಿಳಿಸಿದ್ದಾರೆ.

# ಆರೋಗ್ಯ ಸದೃಢತೆಗೆ ಕ್ರೀಡೆಗಳು ಸಹಕಾರಿ



ಸರ್ಕಾರಿ ಪ್ರಥಮ ದರ್ಜೆ ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿನ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಜೆ.ಎಸ್. ವೀರೇಶ್

ದಾವಣಗೆರೆ, ಡಿ. 13 - ಗ್ರಾಮೀಣ ಕ್ರೀಡೆಗಳು ನಶಿಸುತ್ತಿರುವ ಇಂದಿನ ದಿನಗಳಲ್ಲಿ ಸರ್ಕಾರ ಜ್ಯೂಡೋ ಕ್ರೀಡೆಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಜೆ.ಎಸ್. ವೀರೇಶ್ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ಗುರುವಾರ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಆಶ್ರಯದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯ ಮಟ್ಟದ ಅಂತರಕಾಲೇಜ್, ಪುರುಷರ ಮತ್ತು ಮಹಿಳೆಯರ ಜ್ಯೂಡೋ ಸ್ಪರ್ಧೆ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯ ಜ್ಯೂಡೋ ಪಟುಗಳ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ದೇಹ ಸದೃಢಗೊಳಿಸಿಕೊಳ್ಳುವ ಜೊತೆಗೆ ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳಲು ಕ್ರೀಡೆಗಳು ಸಹಕಾರಿಯಾಗಿವೆ ಎಂದರು.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಮತ್ತು ದುಶ್ಚಟಗಳ ದಾಸರಾಗಿ ತಮ್ಮ ಬದುಕನ್ನೇ ನಾಶ ಮಾಡಿಕೊಳ್ಳುತ್ತಿದ್ದಾರೆ. ಯುವಕರು ಇಂತಹ ಕ್ರೀಡೆಗಳಲ್ಲಿ ಭಾಗವಹಿಸುವ ಜೊತೆಗೆ ಸದೃಢ ಆರೋಗ್ಯ ಕಾಪಾಡಿಕೊಂಡು, ಉನ್ನತ ಹುದ್ದೆಯನ್ನು ಪಡೆದು ತಂದೆ-ತಾಯಿಗಳನ್ನು ನೋಡಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಭಾರಿ ಪ್ರಾಂಶುಪಾಲ ಕೊಟ್ರಪ್ಪ, ಜ್ಯೂಡೋ ಕ್ರೀಡೆ ಜಪಾನ್ ಮೂಲದ ಕ್ರೀಡೆಯಾಗಿದೆ. ಈ ಕ್ರೀಡೆಯಿಂದ ವಿದ್ಯಾರ್ಥಿಗಳ ದೇಹ ಬಲಿಷ್ಠಗೊಳ್ಳುವ ಜೊತೆಗೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು. ಹೀಗಾಗಿ ಜ್ಯೂಡೋ ಕ್ರೀಡೆಯಲ್ಲಿ ಹೆಚ್ಚು ಹೆಚ್ಚು ಭಾಗವಹಿಸಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ಪ್ರಭಾರಿ ನಿರ್ದೇಶಕರಾದ ಪ್ರೊ. ವೆಂಕಟೇಶ್, ಕ್ರೀಡಾಧಿಕಾರಿ ಡಾ. ಬಿ.ಎಚ್. ವೀರಪ್ಪ, ದಾವಣಗೆರೆ ವಿಶ್ವವಿದ್ಯಾನಿಲಯದ, ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಬಸವರಾಜ ತಹಶೀಲ್ದಾರ್, ಹಿರಿಯ ಪತ್ರಕರ್ತ ಎ.ಎನ್. ನಿಂಗಪ್ಪ, ಸಹಾಯಕ ಪ್ರಾಧ್ಯಾಪಕ ಪ್ರೊ. ಎಸ್. ವೆಂಕಟೇಶ್ ಬಾಬು, ವಾಣಿಜ್ಯಶಾಸ್ತ್ರ ವಿಭಾಗದ, ಸಹಾಯಕ ಪ್ರಾಧ್ಯಾಪಕ ಪ್ರೊ. ಶಂಭುಲಿಂಗಪ್ಪ ನಲ್ಲನವರ್, ಪರಿಸರ ವಿಜ್ಞಾನ, ಆಂಗ್ಲಭಾಷೆ ಸಹಾಯಕ ಪ್ರಾಧ್ಯಾಪಕ ಪ್ರೊ. ಜಿ. ಮಂಜುನಾಥ, ಕೊಟ್ರಪ್ಪ ಸೇರಿದಂತೆ ಇನ್ನಿತರರಿದ್ದರು.

## ಲೋಕಸಭಾ ಘಟನೆ ಭಾರೀ ಭದ್ರತಾ ಲೋಪ

ಹೈದರಾಬಾದ್, ಡಿ. 13 – ಲೋಕಸಭೆಯಲ್ಲಿ ಭಾರೀ ಭದ್ರತಾ ಲೋಪವಾಗಿದೆ ಎಂದು ಸಂಸತ್ತಿನ ಭದ್ರತೆಯ ಮಾಜಿ ವಿಶೇಷ ಕರ್ತವ್ಯಾಧಿಕಾರಿ ವಿ. ಪುರುಷೋತ್ತಮ್ ರಾವ್ ಅಭಿಪ್ರಾಯ ಪಟ್ಟಿದ್ದಾರೆ.

2001ರಲ್ಲಿ ಸಂಸತ್ತಿನ ಮೇಲೆ ದಾಳಿ ನಡೆಸಿದಾಗ ಆಗಿನ ಲೋಕಸಭಾ ಉಪಾಧ್ಯಕ್ಷರ ನೇತೃತ್ವದ ಸಮಿತಿ ಹಲವಾರು ಶಿಫಾರಸ್ಸುಗಳನ್ನು ಮಾಡಿತ್ತು. ಈ ಶಿಫಾರಸ್ಸು ಜಾರಿಗೆ ತಂದಿದ್ದರೆ, ಬುಧವಾರದ ಘಟನೆ ನಡೆಯುತ್ತಿರಲಿಲ್ಲ ಎಂದವರು ಹೇಳಿದ್ದಾರೆ.ವೀಕ್ಷಕರ ಗ್ಯಾಲರಿಗೆ ಗುಂಡು ನಿರೋಧಕ ಗಾಜಿನ ತಡೆ ಅಳವಡಿಸುವಂತೆ ಆಗಿನ ಸಮಿತಿ ಶಿಫಾರಸ್ಸು ಮಾಡಿತ್ತು. ಆದರೆ, ಈ ನಿಯಮಗಳನ್ನು ಪಾಲಿಸಿಲ್ಲ ಎಂದು ರಾವ್ ತಿಳಿಸಿದ್ದಾರೆ. ವೀಕ್ಷಕರ ಗ್ಯಾಲರಿಗೆ ಪಾಸ್‌ಗಳನ್ನು ಕೊಡುವ ಬಗ್ಗೆ ಸಂಸದರು ಸಾಕಷ್ಟು ಎಚ್ಚರಿಕೆ ವಹಿಸಬೇಕು ಎಂದೂ ಅವರು ಹೇಳಿದ್ದಾರೆ.

# ಅಮಾನತ್ತಾದ ಅಧಿಕಾರಗಳ ವರ್ಗಾವಣೆ ಮಾಡದಿದ್ದರೆ ಹೋರಾಟ : ಎಚ್ಚರಿಕೆ

ದಾವಣಗೆರೆ, ಡಿ. 13- ಲೋಕಾಯುಕ್ತ ದಾಳಿಗೆ ಬಲಿಯಾಗಿ ಅಮಾನತ್ತುಗೊಂಡಿದ್ದ ಅಧಿಕಾರಿಗಳು ಜಾಮೀನು ಪಡೆದು ಪುನಃ ಅದೇ ಹುದ್ದೆಗೆ ಬಂದು ಅಧಿಕಾರ ಚಲಾವಣೆ ಮಾಡುತ್ತಿದ್ದಾರೆ. ಈ ಕೂಡಲೇ ಇಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡದಿದ್ದರೆ, ಉಗ್ರ ಹೋರಾಟ ನಡೆಸುವುದಾಗಿ ಸನ್ನದುದಾರ ಡಿ.ಜಿ. ರಘುನಾಥ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಕಳೆದ ಸೆ. 13 ರಂದು ದಾವಣಗೆರೆ ಲೋಕಾಯುಕ್ತ ಪೊಲೀಸರಿಂದ ದಾಳಿಗೆ ಒಳಗಾಗಿ ಬಂಧಿತರಾಗಿ, ಇದೀಗ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದು ಮತ್ತದೇ ಸ್ಥಾನಕ್ಕೆ ಬಂದು ಅಧಿಕಾರ ಚಲಾಯಿಸುತ್ತಿರುವ ಅಬಕಾರಿ ಇಲಾಖೆ ಐವರು ಅಧಿಕಾರಿಗಳನ್ನು ಇನ್ನೂ ಹತ್ತು ದಿನಗಳೊಳಗಾಗಿ ವರ್ಗಾವಣೆ ಮಾಡದಿದ್ದರೆ ಅಬಕಾರಿ ಉಪ ಆಯುಕ್ತರ ಇಲಾಖೆ ಮುಂಭಾಗ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಮದ್ಯದಂಗಡಿ ಪರವಾನಿಗೆ ನೀಡಲು ಅಬಕಾರಿ ಉಪ ಆಯುಕ್ತರು ಮತ್ತವರ ಅಧೀನದಲ್ಲಿ ಬರುವ ಅಧಿಕಾರಿಗಳು 60 ಲಕ್ಷ ಲಂಚದ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡಿದ ಹಿನ್ನೆಲೆಯಲ್ಲಿ ಲೋಕಾಯುಕ್ತರ ನಿರ್ದೇಶನದಂತೆ ಮುಂಗಡ ಹಣ ಮೂರು ಲಕ್ಷ ರೂ. ಗಳನ್ನು ನೀಡುವ ವೇಳೆ ಅಶೋಕ್, ಸ್ವಪ್ನ, ಜೆ.ಕೆ. ಶೀಲಾ, ಶೈಲಶ್ರೀ ಇವರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ನೀಡಲಾಗಿತ್ತು ಎಂದು ಮಾಹಿತಿ ನೀಡಿದರು.

ಸಾಕ್ಷಿ ನಾಶಪಡಿಸುವ ಸಾಧ್ಯತೆ ಇರುವ ಕಾರಣ ಅವರನ್ನು ಬೇರೆಡೆ ನಾನ್ ಎಕ್ಸಕ್ಯೂಟಿವ್ ಹುದ್ದೆಗೆ ವರ್ಗಾವಣೆ ಮಾಡುವಂತೆ ಒತ್ತಾಯಿಸಿದರು.

ಇದಲ್ಲದೇ ಸರ್ಕಾರ ಲೋಕಾಯುಕ್ತ ದಾಳಿಯಾಗಿ ಅಧಿಕಾರಿಗಳು ಅಮಾನತ್ತು ಆದ ದಿನದಿಂದ (ದಿನಾಂಕ 15 ಅಕ್ಟೋಬರ್ ನಿಂದ ನವೆಂಬರ್ 7 ರವರೆಗೆ) ದಾವಣಗೆರೆ ಅಬಕಾರ ಉಪ ಆಯುಕ್ತರ ಹುದ್ದೆಗೆ ಯಾರನ್ನೂ ನೇಮಕ ಮಾಡದೇ, ಯಾರಿಗೂ ಅಧಿಕಾರಿ ಹಸ್ತಾಂತರ ಮಾಡದೇ ಕಚೇರಿ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಿರುತ್ತಾರೆ. ಇದು ಅನೇಕ ಅನುಮಾನಗಳಿಗೆ ಅವಕಾಶ ಮಾಡಿಕೊಡುತ್ತದೆ ಎಂದರು.

ಸರ್ಕಾರದ ಅಧಿಸೂಚನೆಯಂತೆ ಯಾವುದೇ ಅಧಿಕಾರಿಗಳು, ಸಿಬ್ಬಂದಿ ಲೋಕಾಯುಕ್ತರ ದಾಳಿಗೆ ಒಳಗಾಗಿ ಪ್ರಾಥಮಿಕ ತನಿಖೆಯ ನಂತರ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿ ಆರೋಪಿತರಾಗಿ ಅಮಾನತ್ತಿನಲ್ಲಿ ಇಟ್ಟ ನಂತರ, ಪುನರ್ ಸ್ಥಾಪಿಸುವ ಮುನ್ನ ಲೋಕಾಯುಕ್ತ ಅಧಿಕಾರಿಗಳೊಂದಿಗೆ ಚರ್ಚಿಸಬೇಕೆಂಬ ಆದೇಶವಿದೆ ಎಂದು ಮಾಹಿತಿ ನೀಡಿದರು.

ಆರೋಪಿಗಳ ಪ್ರಭಾವದಿಂದ ಸರ್ಕಾರದ ನೀತಿ, ನಿಯಮಗಳನ್ನು ಗಾಳಿಗೆ ತೂರಿ ಅವರ ಹುದ್ದೆಗಳಿಗೆ ಬೇರೆಯವರನ್ನು ನೇಮಿಸಿ, ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

## ಯಾಸೀನ್ ಪೀರ್ ರಜ್ವಿ ಅವರಿಗೆ ಪಾಲಿಕೆ ರಾಜ್ಯೋತ್ಸವ ಪ್ರಶಸ್ತಿ



ದಾವಣಗೆರೆ, ಡಿ. 13- ಮಹಾನಗರ ಪಾಲಿಕೆ ವತಿಯಿಂದ ಈಚೆಗೆ ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ತಂಜೀಮ್ ಫೌಂಡ್ ಅಸೋಸಿಯೇಷನ್ ಮಾಜಿ ಕಾರ್ಯದರ್ಶಿ ಯಾಸೀನ್ ಪೀರ್ ರಜ್ವಿ ಅವರನ್ನು ಮಹಾಪೌರರಾದ ವಿನಾಯಕ ಪೈಲ್ವಾನ್ ಅವರು ಸನ್ಮಾನಿಸಿ, ಗೌರವಿಸಿದರು.

## ರಾಜಭವನಕ್ಕೆ ಬಾಂಬ್ ಬೆದರಿಕೆ ಹಾಕಿದವನ ಬಂಧನ

ಬೆಂಗಳೂರು, ಡಿ. 13 - ರಾಜಭವನಕ್ಕೆ ಬಾಂಬ್ ಇರಿಸಿರುವುದಾಗಿ ಬೆದರಿಕೆ ಕರೆ ಮಾಡಿದ್ದ ಆರೋಪಿ ಭಾಸ್ಕರ್‌ನನ್ನು ವಿಧಾನ ಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪೊಲೀಸರು ಎಷ್ಟರ ಮಟ್ಟಿಗೆ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಪರಿಶೀಲಿಸಲು ಕರೆ ಮಾಡಿದ್ದೆ ಎಂದು ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ ಎಂದು ಪೊಲೀಸರು ಹೇಳಿದರು. ಬಂಧಿತ ವ್ಯಕ್ತಿ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ವಡ್ಡಹಳ್ಳಿಯವನು.

## ರಂಗನಾಥ್ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಡಿ.13- ಕಾಂಗ್ರೆಸ್ ಮುಖಂಡರೂ, 'ತಾಯಿ ಬೇಡಿಕೆ' ಪತ್ರಿಕೆಯ ಸಂಪಾದಕರೂ ಆದ ರಂಗನಾಥ್ ನಿಧನಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಸಂತಾಪ ವ್ಯಕ್ತಪಡಿಸಿದ್ದಾರೆ.

## ಹರಗನಹಳ್ಳಿ ಬಳಿ ಕಾರು ಅಪಘಾತ: ಪಿಎಸ್ಐ ಪ್ರಭು ಪ್ರಾಣಾಪಾಯದಿಂದ ಪಾರು

ಮಲೇಬೆನ್ನೂರು, ಡಿ.13- ಹರಗನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮಲೇಬೆನ್ನೂರು ಪೊಲೀಸ್ ಠಾಣೆಯ ಪಿಎಸ್ಐ ಪ್ರಭು ಕೆಳಗಿನಮನೆ ಅವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ರಾಣೇಬೆನ್ನೂರಿನಿಂದ ಮಲೇಬೆನ್ನೂರಿಗೆ ಪ್ರಭು ಅವರೇ ಚಲಾಯಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ ಸೇತುವೆ ಮೇಲೆ ಬಿದ್ದಿದೆ ಎನ್ನಲಾಗಿದೆ. ಅಪಘಾತವಾದ ತಕ್ಷಣ ಕಾರಿನಲ್ಲಿ ಏರ್ ಬ್ಯಾಗ್ ಓಪನ್ ಆಗಿದ್ದರಿಂದ ಪ್ರಭು ಅವರಿಗೆ ಯಾವುದೇ ತೊಂದರೆ ಆಗಿಲ್ಲ. ಕಾರು ಪಲ್ಟಿಯಾಗಿ ಪುನಃ ಸಹಜವಾಗಿ ನಿಂತ ನಂತರ ಪ್ರಭು ಅವರು ಕಾರಿನಿಂದ ಇಳಿದು ಬಂದಿದ್ದಾರೆ. ಈ ವೇಳೆ ಇವರ ಕಾರಿನ ಹಿಂದೆ ಯಾವುದೇ ವಾಹನಗಳು ಇಲ್ಲದಿದ್ದರಿಂದ ಇವರು ಬಚಾವ್ ಆಗಿದ್ದಾರೆಂದು ಸ್ಥಳೀಯರು ತಿಳಿಸಿದ್ದಾರೆ. ತಕ್ಷಣ ಪ್ರಭು ಅವರನ್ನು ದಾವಣಗೆರೆಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲು ಮಾಡಿದ್ದಾರೆ.

## ಬಿಜೆಪಿ ಮುಖಂಡ ಕೆ.ಎನ್. ಓಂಕಾರಪ್ಪ ನಿಧನಕ್ಕೆ ಸಂತಾಪ

ದಾವಣಗೆರೆ,ಡಿ. 13- ಬಿಜೆಪಿ ಮುಖಂಡ ಕೆ.ಎನ್. ಓಂಕಾರಪ್ಪ ಅವರಿಗೆ ಜಿಲ್ಲೆಯ ಬಿಜೆಪಿ ಮೂಲ ಕಾರ್ಯಕರ್ತರು ಸಂತಾಪ ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಇಂದು ಕರೆಯಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸಲಾಯಿತು. ಈ ಸಂದರ್ಭದಲ್ಲಿ ಮೂಲ ಬಿಜೆಪಿ ಜಿಲ್ಲಾಧ್ಯಕ್ಷರಾದ ಎಂ.ಪಿ. ಕೃಷ್ಣಮೂರ್ತಿ ಪವಾರ್, ಹೆಚ್.ಎಸ್. ಲಿಂಗರಾಜ್, ಡಿ.ಎಸ್. ಶಿವಶಂಕರ್, ರಾಮಚಂದ್ರ ವದ್ವಾನಿ, ಕೆ.ಟಿ. ಕಲ್ಲೇಶ, ಷಣ್ಮುಖಯ್ಯ, ಗೋಪಾಲ್ ಸಾವಂತ್, ಮಾಲತೇಶ್ ಗುಪ್ತಾ, ಆರ್. ಪ್ರತಾಪ್, ಸಂತೋಷ್ ಪೈಲ್ವಾನ್, ಮಧು, ಸುರೇಶ್, ಬೆಣ್ಣೆದೋಸೆ ರವಿ, ವೀರಯ್ಯ ಮುಂತಾದವರು ಉಪಸ್ಥಿತರಿದ್ದರು.

## ಲೀಲಾವತಿ ನಿಧನಕ್ಕೆ ನಾಗರಾಜ್ ಸಂತಾಪ

ದಾವಣಗೆರೆ, ಡಿ. 13- ಹಿರಿಯ ಚಲನಚಿತ್ರ ನಟಿ ಲೀಲಾವತಿ ನಿಧನಕ್ಕೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಸಂತಾಪ ವ್ಯಕ್ತಪಡಿಸಿದ್ದಾರೆ. ಬದುಕಿನಲ್ಲಿ ಅನೇಕ ಕಷ್ಟಬಂದರೂ ಪರೋಪಕಾರ ಜೀವನ ನಡೆಸಿದ ಲೀಲಾ ವತಿ ಅವರು ಸಮಾಜ ಸೇವೆಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಅಗಲಿಕೆಯು ಚಿತ್ರರಂಗ ಮತ್ತು ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ನಾಗರಾಜ್ ಹೇಳಿದ್ದಾರೆ.

## ಡಾ. ಹೆಗಡೆ ಅವರಿಂದ ಶಿಬಿರ

ದಾವಣಗೆರೆ, ಡಿ. 13- ಶಿರಸಿಯ ವೇದ ವೆಲ್ನೆಸ್ ಸೆಂಟರ್, ನಿಸರ್ಗ ಮನೆ ಮುಖ್ಯಸ್ಥ ಡಾ.ವೆಂಕಟ ರಮಣ ಹೆಗಡೆ ಶಿರಸಿ ಅವರು ಇದೇ ದಿನಾಂಕ 16 ಮತ್ತು 17ರ ಭಾನುವಾರ ನಗರದ ಎಸ್.ಎಲ್.ಎನ್. ಕಾನ್ವೆಂಟ್‌ನಲ್ಲಿ ಉಚಿತ ಸಂದರ್ಶನ, ಮುಖತಃ ಭೇಟಿ ಮಾಡಲಿದ್ದಾರೆ. ಅಲ್ಫಾ ನ್ಯಾಚುರಲ್ ಆಹಾರ ಔಷಧಿಗಳೂ ಶಿಬಿರದಲ್ಲಿ ಲಭ್ಯವಿವೆ. ಸಂಪರ್ಕಿಸಿ : 8073320479, 8970822508.

# ಧೀರಜ್ ಸಾಹು ಮನೆಯಲ್ಲಿ ಕೋಟಿಗಟ್ಟಲೇ ಹಣ: ಬಿಜೆಪಿ ಪ್ರತಿಭಟನೆ



ದಾವಣಗೆರೆ, ಡಿ.13- ಜಾರ್ಖಂಡ್ ರಾಜ್ಯ ಸಭಾ ಸದಸ್ಯ ಧೀರಜ್ ಸಾಹು ಮನೆಯಲ್ಲಿ ಕೋಟಿಗಟ್ಟಲೇ ಹಣ ಪತ್ತೆ ಪ್ರಕರಣವನ್ನು ಖಂಡಿಸಿ, ಜಿಲ್ಲಾ ಬಿಜೆಪಿ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು. ಜಿಲ್ಲಾ ಬಿಜೆಪಿ ಕಚೇರಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ರೈಲು ನಿಲ್ದಾಣದ ಮುಂಭಾಗ ತೆರಳಿ ಪ್ರತಿಭಟನೆ ನಡೆಸಿತು.

ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಮಾತನಾಡಿ, ಕಾಂಗ್ರೆಸ್ ಎಂದರೆ ಭ್ರಷ್ಟಾಚಾರ ಎಂಬುದಕ್ಕೆ ಸಾಹು ಅವರ ಮನೆಯಲ್ಲಿ ಸಿಕ್ಕ ಕೋಟಿಗಟ್ಟಲೆ ಹಣವೇ ಸಾಕ್ಷಿ ಎಂದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಲಿದೆ. ಬಿಜೆಪಿ ಭರ್ಜರಿ ಗೆಲುವು ಸಾಧಿಸಲಿದೆ. ನರೇಂದ್ರ ಮೋದಿ ಮತ್ತೆ ಪ್ರಧಾನಿ ಆಗುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಕೋಳೇನಹಳ್ಳಿ ಸತೀಶ್, ಲೋಕಿಕೆರೆ ನಾಗರಾಜ್, ಹನುಮನಾಯ್ಕ, ಎನ್. ಹೆಚ್. ಹಾಲೇಶ್, ಕಲ್ಲೇಶ್, ಟಿಂಕರ್ ಮಂಜಣ್ಣ, ವಿಶ್ವಾಸ್ ಇತರರು ಇದ್ದರು.

# ಪಾರಂಪರಿಕ ವೈದ್ಯ ವೃತ್ತಿಗೆ ಮುಕ್ತ ಅವಕಾಶಕ್ಕೆ ಒತ್ತಾಯ



ದಾವಣಗೆರೆ, ಡಿ. 13 - ಪಾರಂಪರಿಕ ವೈದ್ಯರ ಕೋಟಾದಲ್ಲಿ ಸುಕನ್ಯಾ ಹಿರೇಮಠ ಇವರಿಗೆ ನೀಡಿರುವ ಬಿಎಎಂಎಸ್ ಸೀಟಿನ ಕುರಿತು ಸಿಓಡಿ ತನಿಖೆಗೆ ಆದೇಶಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪಾರಂಪರಿಕ ವೈದ್ಯ ಪರಿಷತ್ ಕರ್ನಾಟಕದಿಂದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಬೆಳಗಾವಿಯ ಸುವರ್ಣಸೌಧದ ಎದುರು ಪ್ರತಿಭಟನೆ ನಡೆಸಿರುವ ಪರಿಷತ್‌ನ ಕಾರ್ಯಕರ್ತರು, ಸುಕನ್ಯ ಬಿನ್ ಚಂಬಯ್ಯ ಗದಿಗಯ್ಯ ಹಿರೇಮಠ ಗುಂಡೇನಹಟ್ಟಿ, ಖಾನಾಪುರ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಬಿ.ಎ.ಎಂ.ಎಸ್. ಸೀಟನ್ನು ಪಾರಂಪರಿಕ ವೈದ್ಯರ ಕೋಟಾದಲ್ಲಿ ಆಯುಶ್ ಇಲಾಖೆ ನೀಡಿದ್ದು, ಈಗಾಗಲೇ ಇವರು ಪಾರಂಪರಿಕ ವೈದ್ಯರು ಅಲ್ಲವೆಂದು ಅಲ್ಲಿಯ ಗ್ರಾಮಸ್ಥರಿಂದ ಮಾಹಿತಿ ಬಂದಿದೆ. ಇದರಿಂದ ಮೂಲ ಪಾರಂಪರಿಕ ವೈದ್ಯರ ಮಗನಿಗೆ ಸಿಗಬೇಕಾದ ಅವಕಾಶ ತಪ್ಪಿದ್ದು, ಇದರ ಹಿಂದೆ ಅಲ್ಲಿನ ಗ್ರಾಮ ಪಂಚಾಯಿತಿ ಪಿ.ಡಿ.ಓ ಮತ್ತು ಇಲಾಖೆಯ ಕಾಣದ ಕೈಗಳು ಕೆಲಸ ಮಾಡಿವೆ ಎಂದು ಹರಿಹಾಯಿದ್ದಾರೆ.

ಈ ಹಗರಣದಿಂದ ಮೀಸಲಾತಿ ಮೂಲ ಉದ್ದೇಶವೇ ಬುಡಮೇಲಾಗಿದ್ದು, ಮುಂದಿನ ದಿನಗಲ್ಲಿ ಪಾರಂಪರಿಕ ವೈದ್ಯರಿಗೆ ಈ ಸೌಲಭ್ಯ ಸಿಗದೇ ಬೇರೆಯವರೇ ಈ ಸ್ಥಾನವನ್ನು ಪಡೆದುಕೊಳ್ಳುತ್ತಾರೆ. ಆದುದರಿಂದ ಸ್ಥಳೀಯ ಗ್ರಾಮ ಪಂಚಾಯಿತಿ ಪಿ.ಡಿ.ಓ ಮತ್ತು ಬೆಳಗಾವಿ ಜಿಲ್ಲೆ ಆಯುಶ್ ಅಧಿಕಾರಿಗಳೇ ಇದಕ್ಕೆ ಹೊಣೆಗಾರರಾಗಿದ್ದು, ಇವರುಗಳನ್ನು ಸೇವೆಯಿಂದ ಅಮಾನತ್ತಿನಲ್ಲಿಟ್ಟು ಈ ಹಗರಣದ ಸಿ ಓ ಡಿ ತನಿಖೆ ನಡೆಸಿ ತಪ್ಪಿತಸ್ಥರನ್ನು ಸೇವೆಯಿಂದ ವಜಾಗೊಳಿಸಿ ಪಾರಂಪರಿಕ ವೈದ್ಯರುಗಳಿಗೆ ನ್ಯಾಯಕ್ಕಾಗಿ ಒತ್ತಾಯಿಸಿದರು.

ಇದಲ್ಲದೇ, ಪಾರಂಪರಿಕ ವೈದ್ಯ ವೃತ್ತಿಯನ್ನು ಮಾಡಲು ಮುಕ್ತ ಅವಕಾಶ ನೀಡಬೇಕು, ಪಾರಂಪರಿಕ ವೈದ್ಯ ಪದ್ಧತಿಯನ್ನು ಉಳಿಸಿ, ಬೆಳೆಸಲು ಪಾರಂಪರಿಕ ವೈದ್ಯ ಅಭಿವೃದ್ಧಿ ಮಂಡಳಿಯನ್ನು ರಚಿಸಬೇಕು, ಪಾರಂಪರಿಕ ವೈದ್ಯರ ರಾಜ್ಯ ಸಮ್ಮೇಳನಗಳನ್ನು ಮಾಡಲು ರಾಜ್ಯ ಸರ್ಕಾರ ಪ್ರತಿ ವರ್ಷದ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು, ಪಾರಂಪರಿಕ ವೈದ್ಯರುಗಳ ಮಕ್ಕಳು ಪಾರಂಪರಿಕ ವೈದ್ಯವನ್ನ ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ಗಳಲ್ಲಿ (ಬಿಎಎಂಎಸ್) ಕಲಿಕೆಗಾಗಿ ಕರ್ನಾಟಕ ಸರ್ಕಾರ ಶೇ.2 ರಷ್ಟು ಸೀಟುಗಳನ್ನು ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಲಾಯಿತು.

ಪರಿಷತ್‌ನ ಅಧ್ಯಕ್ಷ ಜಿ. ಮಹದೇವಯ್ಯ, ಪ್ರಧಾನ ಕಾರ್ಯದರ್ಶಿ ಅನುಗನಾಳು ಕೃಷ್ಣಮೂರ್ತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ವಕೀಲರ ದಿನಾಚರಣೆಯಲ್ಲಿ ಹಿರಿಯ ವಕೀಲರಿಗೆ ಸನ್ಮಾನ



ದಾವಣಗೆರೆ, ಡಿ.13 - ಜಿಲ್ಲಾ ವಕೀಲರ ಸಂಘದಿಂದ ನಡೆದ ವಕೀಲರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ವಕೀಲರಾದ ಹೆಚ್.ಎನ್. ರಾಜಶೇಖರಪ್ಪ, ಎಂ.ಬಿ. ಶಿವಾನಂದಪ್ಪ ಮತ್ತು ರಾಮಚಂದ್ರ ಕಲಾಲ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶರಾದ ಎನ್. ಶ್ರೀಪಾದ್, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರವೀಣ್‌ಕುಮಾರ್ ಆರ್. ಎನ್., ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ಕಾರ್ಯದರ್ಶಿ ಎಸ್. ಬಸವರಾಜ್, ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್, ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾದ ವಾಗೀಶ್ ಕಟಗಿಹಳ್ಳಿಮಠ, ಎಂ. ಚೌಡಪ್ಪ, ಸಂತೋಷ್ ಕುಮಾರ್ ಜಿ.ಜೆ., ರಾಘವೇಂದ್ರ ಎಂ., ಅಜ್ಜಯ್ಯ ಆವರಗೆರೆ, ಭಾಗ್ಯಲಕ್ಷ್ಮಿ ಆರ್., ನಾಗರಾಜ್ ಎಲ್., ನೀಲಕಂಠಯ್ಯ ಕೆ.ಎಂ., ಮಧುಸೂದನ್ ಟಿ.ಹೆಚ್. ಮತ್ತು ವಕೀಲರ ಸಂಘದ ಸದಸ್ಯರು ಹಾಜರಿದ್ದರು.

## ಗ್ರಾಮೀಣ ಮಟ್ಟದ ನಿರುದ್ಯೋಗಿ ಯುವ ಜನರಿಗೆ ತರಬೇತಿ

ದಾವಣಗೆರೆ, ಡಿ. 13- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ , ರೇಷ್ಮೆ ಇಲಾಖೆ ಆವರಣ, ಹಳೆ ತೋಳಹುಣಸೆ ಹಾಗೂ ಜಿಲ್ಲಾ ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಟ್ಟದ ಪುರುಷ ಅಭ್ಯರ್ಥಿಗಳಿಗಾಗಿ ಇದೇ ದಿನಾಂಕ 27 ರಿಂದ ವಿದ್ಯುತ್ ಪಂಪ್‌ಸೆಟ್ ಮತ್ತು ಮೋಟಾರ್ ರಿವೈಂಡಿಂಗ್ ತರಬೇತಿ ಆರಂಭವಾಗಲಿದೆ. 19 ರಿಂದ 44 ವಯೋಮಿತಿಯ ಜಿಲ್ಲೆಯ ಗ್ರಾಮೀಣ ಮಟ್ಟದ ಬಿಪಿಎಲ್ ಪುರುಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ನಿರುದ್ಯೋಗಿ ಅಭ್ಯರ್ಥಿಗಳು ದಾಖಲೆಗಳೊಂದಿಗೆ ಹೆಸರನ್ನು ನೋಂದಾಯಿಸಬಹುದು. ಸಂಪರ್ಕಿಸಿ : ನಿರ್ದೇಶಕರು, ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ತೋಳಹುಣಸೆ, ದಾವಣಗೆರೆ (7019980484, 9483386143, 9964111314, 9538395817, 9481977076).

# ಭೂ ಅಕ್ರಮ : ಅಧಿಕಾರಿಗಳ ಮೇಲೂ ಕ್ರಮ

## ಕೇಸ್ ಬೈ ಕೇಸ್ ಕಾನೂನು ಕ್ರಮ: ವಿಧಾನ ಪರಿಷತ್‌ನಲ್ಲಿ ಸಚಿವ ಕೃಷ್ಣ ಭೈರೇಗೌಡ



**ರಾಜ್ಯದ ಯಾವ ಜಿಲ್ಲೆ, ಯಾವ ಭಾಗದಲ್ಲಿ, ಯಾವ ಜಮೀನನ್ನು ಅಧಿಕಾರಿಗಳು ಅಕ್ರಮವಾಗಿ ಖಾಸಗಿಯವರಿಗೆ ಪರಭಾರೆ ಮಾಡಿದ್ದಾರೆ ಎಂಬ ಕುರಿತು ವಿಸ್ಕೃತ ವರದಿ ನೀಡುವಂತೆ, ಪ್ರಾದೇಶಿಕ ಆಯುಕ್ತರಿಗೆ ಸೂಚಿಸಲಾಗಿದೆ**

ಬೆಂಗಳೂರು, ಡಿ. 12 - ಭೂ ಮಾಫಿಯಾ ಜೊತೆಗೆ ಕೈಜೋಡಿಸಿ ಸರ್ಕಾರಿ ಜಮೀನಿನ ಅಕ್ರಮ ಪರಭಾರೆಗೆ ಸಹಕರಿಸಿದ ಎಲ್ಲಾ ಅಧಿಕಾರಿಗಳ ವಿರುದ್ಧವೂ ಕೇಸ್ ಬೈ ಕೇಸ್ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಅಲ್ಲದೆ, ಸರ್ಕಾರಿ ಜಮೀನನ್ನು ವಶಕ್ಕೆ ಪಡೆಯುವ ಕೆಲಸ, ಆಂದೋಲನದ ಮಾದರಿಯಲ್ಲಿ ಆರಂಭಿಸಲಾಗಿದೆ ಎಂದು ಸಚಿವ ಕೃಷ್ಣ ಭೈರೇಗೌಡ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ವೈ.ಎ. ನಾರಾಯಣ ಸ್ವಾಮಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಸರ್ಕಾರಿ ಭೂ ಒತ್ತುವರಿ ಎಂಬುದು ಬೆಂಗಳೂರು ಮಾತ್ರವಲ್ಲ ರಾಜ್ಯಾದ್ಯಂತ ಇದೀಗ ದೊಡ್ಡ ಸಮಸ್ಯೆಯಾಗಿದೆ ಎಂದರು.

ಸರ್ಕಾರಿ ಅಧಿಕಾರಿಗಳೇ ಭೂ ಮಾಫಿಯಾ ಜೊತೆಗೆ ಕೈಜೋಡಿಸಿ ಜಮೀನುಗಳನ್ನು ಖಾಸಗಿ ಯವರಿಗೆ ಅಕ್ರಮವಾಗಿ ಪರಭಾರೆ ಮಾಡುತ್ತಿರುವುದು ದುರಾದೃಷ್ಟಕರ. ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಇಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಮುಂದಾಗಿದೆ ಎಂದು ಮಾಹಿತಿ ನೀಡಿದರು.

ಸರ್ಕಾರಿ ಭೂಮಿ ಅಕ್ರಮ ಪರಭಾರೆ ಪ್ರಕರಣದಲ್ಲಿ ಬೆಂಗಳೂರಿನ ಉಪವಿಭಾಗಾಧಿಕಾರಿ ವಿರುದ್ಧ 2 ಎಫ್‌ಐಆರ್ ಮಾಡಲಾಗಿದೆ. ಆನೇಕಲ್ ತಹಶೀಲ್ದಾರ್, ಕೆಆರ್ ಪುರ ತಹಶೀಲ್ದಾರ್ ಹಾಗೂ ಯಲಹಂಕ ತಹಶೀಲ್ದಾರ್ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಈ ಎಲ್ಲಾ ಪ್ರಕರಣದಲ್ಲೂ ಎಫ್‌ಐಆರ್ ಜೊತೆಗೆ ಕ್ರಿಮಿನಲ್ ಪ್ರಕರಣವನ್ನೂ ದಾಖಲಿಸಿ ವಿಚಾರಣೆ ಕೈಗೊಳ್ಳಲಾಗಿದೆ. ರಾಜ್ಯಾದ್ಯಂತ ಅಕ್ರಮದಲ್ಲಿ ಶಾಮೀಲಾದ ಎಲ್ಲಾ ಅಧಿಕಾರಿಗಳ ವಿಚಾರದಲ್ಲೂ ಕೇಸ್ ಬೈ ಕೇಸ್ ಕ್ರಮ ತೆಗೆದುಕೊಳ್ಳ ಲಾಗುತ್ತಿದೆ ಎಂದು ಅವರು ತಿಳಿಸಿದರು. ಇದಲ್ಲದೆ, ಬೆಂಗಳೂರಿನ ಮಟ್ಟಿಗೆ ಇಲ್ಲಿ ತಹಶೀಲ್ದಾರ್ ಆಗಿ ಕೆಲಸ ನಿರ್ವಹಿಸಿದ ಅಧಿಕಾರಿಗಳೇ ಭವಿಷ್ಯದಲ್ಲಿ ಉಪ ವಿಭಾಗಾಧಿಕಾರಿಗಳಾಗಿ ನೇಮಕವಾಗುವ ಪ್ರಸಂಗ ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ. ಭ್ರಷ್ಟಾಚಾರ ಹೆಚ್ಚಾಗಲು ಮತ್ತು ಸರ್ಕಾರಿ ಜಮೀನು ಖಾಸಗಿಯವರ ಪಾಲಾಗಲು ಇದೂ ಸಹ ಒಂದು ಕಾರಣ. ಹೀಗಾಗಿ ಮುಂದಿನ ದಿನಗಳಲ್ಲಿ ಈ ಬಗ್ಗೆಯೂ ಕ್ರಮ ವಹಿಸಲಾಗುವುದು ಎಂದು ಸಚಿವ ಕೃಷ್ಣ ಭೈರೇಗೌಡ ಅವರು ಸದನಕ್ಕೆ ತಿಳಿಸಿದರು.

ರಾಜ್ಯದ ಯಾವ ಜಿಲ್ಲೆ, ಯಾವ ಭಾಗದಲ್ಲಿ, ಯಾವ ಜಮೀನನ್ನು ಅಧಿಕಾರಿಗಳು ಅಕ್ರಮವಾಗಿ ಖಾಸಗಿಯವರಿಗೆ ಪರಭಾರೆ ಮಾಡಿದ್ದಾರೆ ಎಂಬ ಕುರಿತು ವಿಸ್ಕೃತ ವರದಿ ನೀಡುವಂತೆ, ಪ್ರಾದೇಶಿಕ ಆಯುಕ್ತರಿಗೆ ಸೂಚಿಸಲಾಗಿದೆ. ಈ ವರದಿ ಆಧರಿಸಿ ಈಗಾಗಲೇ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಆಂದೋಲನ ಮಾದರಿಯಲ್ಲಿ ಕಾರ್ಯಾಚರಣೆ ನಡೆಸುವ ಮೂಲಕ ಸಾವಿರಾರು ಕೋಟಿರೂ.ಗಳ ಸರ್ಕಾರಿ ಆಸ್ತಿಯನ್ನು ವಶಕ್ಕೆ ಪಡೆಯಲಾಗುವುದು ಎಂದು ಅವರು ಭರವಸೆ ನೀಡಿದರು.

ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಜಾಗಗಳ ರಕ್ಷಣೆಗೆ ಸರ್ಕಾರ ಮುಂದಾಗಿದೆ. ದಾಖಲೆಗಳಲ್ಲಿರುವ ಎಲ್ಲಾ ಜಮೀನಿನ ವಿವರಗಳನ್ನೂ ಈಗಾಗಲೇ ಆ್ಯಪ್‌ಗೆ ಅಪ್ಲೋಡ್ ಮಾಡಲಾಗಿದೆ. ಅಲ್ಲದೆ, ಮೊಬೈಲ್ ಆ್ಯಪ್ ಮೂಲಕ ಖಾಲಿ ಜಾಗಗಳನ್ನು ಜಿ.ಪಿ.ಎಸ್. ಮೂಲಕ ಗಡಿ ಗುರುತಿಸಲಾಗಿದೆ ಎಂದರು.

ಕಂದಾಯ ಇಲಾಖೆ ಅಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಖಾಲಿ ಜಾಗಗಳಿಗೆ ಭೇಟಿ ನೀಡಿ, ಪರಿಶೀಲನೆ ಮಾಡಲು ಬೀಟ್ ವ್ಯವಸ್ಥೆ ಜಾರಿ ಮಾಡಲಾಗಿದೆ. ಒತ್ತುವರಿ ಯಾಗಿರುವುದು ಕಂಡುಬಂದರೆ, ಕೂಡಲೇ ಸಂಬಂಧ ಪಟ್ಟ ತಹಶೀಲ್ದಾರ್ ತೆರವುಗೊಳಿಸಬೇಕು. ಬೀಟ್ ವ್ಯವಸ್ಥೆ ಮೊಬೈಲ್ ಲೋಕೇಷನ್ ಆಧಾರದ ಮೇಲೆ ಕಾರ್ಯ ನಿರ್ವಹಿಸುವುದರಿಂದ ಅಧಿಕಾರಿಗಳು ಕಡ್ಡಾಯ ಸ್ಥಳಕ್ಕೇ ತೆರಳಬೇಕು. ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

# ಚಿಗಟೇರಿ ಆಸ್ಪತ್ರೆಗೆ 3.35 ಕೋ.ರೂ. ಉಪಕರಣಗಳ ಹಸ್ತಾಂತರ



**ಪವರ್‌ಗ್ರಿಡ್ ಕಾರ್ಪೊರೇಷನ್ ಸಿ.ಎಸ್.ಆರ್. ನಿಧಿಯಿಂದ ಕೊಡುಗೆ**

ದಾವಣಗೆರೆ, ಡಿ. 13 - ಪವರ್ ಗ್ರಿಡ್ ನಿಗಮದ ದಕ್ಷಿಣ ಪ್ರಾಂತ್ಯದ ಹಿರಿಯೂರು ಉಪ ಕೇಂದ್ರದ ವತಿಯಿಂದ 3.35 ಕೋಟಿ ರೂ. ವೆಚ್ಚದ ವಿವಿಧ ವೈದ್ಯಕೀಯ ಉಪಕರಣಗಳನ್ನು ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಹಸ್ತಾಂತರಿಸಲಾಯಿತು.

ಆಸ್ಪತ್ರೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪವರ್ ಗ್ರಿಡ್ ಪ್ರಧಾನ ಮಹಾಪ್ರಬಂಧಕ ಮಿಥಿಲೇಶ್ ಕುಮಾರ್ ಅವರು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಅವರಿಗೆ ಉಪಕರಣಗಳನ್ನು ಸಾಂಕೇತಿಕವಾಗಿ ಹಸ್ತಾಂತರಿಸಿದರು. ಸಿ.ಎಸ್.ಆರ್. (ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ) ಯೋಜನೆಯಡಿ ಈ ಉಪಕರಣಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನ ಮಹಾಪ್ರಬಂಧಕ ಮಿಥಿಲೇಶ್ ಕುಮಾರ್, ಸಿ.ಎಸ್.ಆರ್. ಯೋಜನೆ ಜಾರಿಯಾಗುವುದಕ್ಕೆ ಮೊದಲಿ ನಿಂದಲೂ ಕಂಪನಿಯು ಸಾಮಾಜಿಕ ಹೊಣೆಗಾರಿಕೆಗಳನ್ನು ನಿರ್ವಹಿಸುತ್ತಾ ಬಂದಿದೆ. ಹಾಲಿನ ಡೈರಿಗಳಿಗೆ ಕಂಪನಿ ನೆರವು ನೀಡುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಎಂ. ವಿ. ವೆಂಕಟೇಶ್, ಚಿಗಟೇರಿ ಆಸ್ಪತ್ರೆಗೆ ಸುತ್ತಲಿನ ಐದು ಜಿಲ್ಲೆಗಳ ಬಡವರು ಹಾಗೂ ಸಮಾಜದ ಅತ್ಯಂತ ದಮನಿತರು ಚಿಕಿತ್ಸೆಗಾಗಿ ಬರುತ್ತಾರೆ. ಈಗ ನೀಡಲಾಗಿರುವ ಉಪಕರಣಗಳು ಬಡವರ ಕಣ್ಣೀರು ಒರೆಸಲು ನೆರವಾಗಲಿವೆ ಎಂದರು. ಅಲ್ಟ್ರಾಸೌಂಡ್, ಲ್ಯಾಪ್ರೋಸ್ಕೋಪಿ, ಎಂಡೋಸ್ಕೋಪಿ, ಎಕ್ಸ್‌ರೇ ಹಾಗೂ ರಕ್ತ ಬ್ಯಾಂಕ್‌ಗೆ ಬಳಸಲಾಗುವ ಉಪಕರಣಗಳನ್ನು ಕಂಪನಿ ಸಿ.ಎಸ್.ಆರ್. ನಿಧಿಯಿಂದ ನೀಡಿದೆ. ಇದು ಅತ್ಯಂತ ಸ್ವಾಗತಾರ್ಹ ಎಂದರು.

ಕಾರ್ಯಕ್ರಮದ ವೇದಿಕೆ ಮೇಲೆ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಷಣ್ಮುಖಪ್ಪ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಾಗೇಂದ್ರಪ್ಪ ಹಾಗೂ ಪವರ್ ಗ್ರಿಡ್ ಕಾರ್ಪೊರೇಷನ್ ಪ್ರಧಾನ ವ್ಯವಸ್ಥಾಪಕ ಹರೀಶ್ ನಾಯರ್ ಉಪಸ್ಥಿತರಿದ್ದರು.

**ಓಂಕಾರಪ್ಪಗೆ ಶ್ರದ್ಧಾಂಜಲಿ**

ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾದ ನಿರ್ದೇಶಕ ಕೆ.ಎನ್. ಓಂಕಾರಪ್ಪ ಅವರ ಒತ್ತಾಸೆಯಿಂದಾಗಿ ಸಿ.ಜಿ. ಆಸ್ಪತ್ರೆಗೆ 3.35 ಕೋಟಿ ರೂ.ಗಳ ಉಪಕರಣಗಳನ್ನು ಸಿ.ಎಸ್.ಆರ್. ನಿಧಿಯಿಂದ ಒದಗಿಸಲಾಗಿತ್ತು. ಆದರೆ, ಉಪಕರಣಗಳ ಹಸ್ತಾಂತರದ ಮುನ್ನಾ ದಿನ ಅವರು ಅಕಾಲಿಕವಾಗಿ ಸಾವನ್ನಪ್ಪಿದರು. ಓಂಕಾರಪ್ಪ ಅವರಿಗೆ ಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

## ರೈತರು ಮೇವು ಸಂಗ್ರಹಿಸಿ ಗೋ ಶಾಲೆಗೆ ನೀಡಲು ಕರೆ



ದಾವಣಗೆರೆ, ಡಿ.13- ರಾಜ್ಯದಲ್ಲಿ ಮಳೆಯ ಅಭಾವದಿಂದ ಬರ ಪರಿಸ್ಥಿತಿ ತಲೆದೋರಿದ್ದು, ದಾವಣಗೆರೆ ಜಿಲ್ಲೆ ಹೊಸಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಗೋಶಾಲೆಗೆ ಹೆಚ್ಚುವರಿ ಮೇವನ್ನು ಸಂಗ್ರಹಿಸಬೇಕಾಗಿರುತ್ತದೆ.

ಜಿಲ್ಲೆಯಲ್ಲಿ ಅಧಿಕ ಮೇವಿನ ದಾಸ್ತಾನಿರುವ ರೈತರು, ಮೇವು ಪೂರೈಕೆದಾರರು ಮೇವನ್ನು ಗೋಶಾಲೆಗೆ ನೀಡಲು ಅವಕಾಶವಿದ್ದು, ಬೇಲು ಮಾಡಿದ ಸ್ಥಿತಿಯಲ್ಲಿ ಒಣಗಿದ ಭತ್ತದ ಹುಲ್ಲು, ಒಣಗಿದ ಮೆಕ್ಕೆಜೋಳದ ಸಪ್ಪೆ, ಬಿಳಿಜೋಳದ ಸಪ್ಪೆ ಮತ್ತು ಒಣಗಿದ ರಾಗಿ ಹುಲ್ಲಿಗೆ ಪ್ರತಿ ಮೆಟ್ರಿಕ್ ಟನ್ ಮೇವಿನ ದರವನ್ನು ನಮೂದಿಸಿ, ಇದೇ ದಿನಾಂಕ 26 ರೊಳಗೆ ಉಪನಿರ್ದೇಶಕರು (ಆಡಳಿತ) ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ದಾವಣಗೆರೆ ಕಚೇರಿಗೆ ಸಲ್ಲಿಸಿದಲ್ಲಿ ಉಪನಿ ರ್ದೇಶಕರು (ಆಡಳಿತ) ಮೇವಿನ ಗುಣಮಟ್ಟವನ್ನು ಪರಿಶೀಲಿಸಿ ಗೋಶಾಲೆಗೆ ಅವಶ್ಯವಿರುವಷ್ಟು ಮೇವನ್ನು ನಿಯಮಾನುಸಾರ ಖರೀದಿಸಲಾಗುವುದು. ಹೊಸಳ್ಳಿ ಗ್ರಾಮದ ಗೋಶಾಲೆಗೆ ಹತ್ತಿರವಿರುವ ರೈತರು ಮತ್ತು ಮೇವು ಪೂರೈಕೆದಾರರಿಗೆ ಆದ್ಯತೆ ನೀಡಲಾಗುವುದು ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಚಂದ್ರಶೇಖರ್ ಸುಂಕದ್ ತಿಳಿಸಿದ್ದಾರೆ.

## ಹಳೇಬಾತಿ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾಗಿ ಬಿ.ಹೆಚ್. ಸುರೇಶ್



ದಾವಣಗೆರೆ, ಡಿ. 13- ತಾಲ್ಲೂಕಿನ ಹಳೇಬಾತಿ ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿ.ಹೆಚ್. ಸುರೇಶ್, ಉಪಾಧ್ಯಕ್ಷರಾಗಿ ಚಂದ್ರಮ್ಮ ಪರುಸಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ರಿಟರ್ನಿಂಗ್ ಅಧಿಕಾರಿ ಆರ್. ರಮೇಶ್ ತಿಳಿಸಿದ್ದಾರೆ.

## ಗೃಹರಕ್ಷಕ ದಳದಿಂದ ನಗರದಲ್ಲಿ ಇಂದು ಕ್ರೀಡಾಕೂಟ

ಗೃಹರಕ್ಷಕ ದಳದಿಂದ ಜಿಲ್ಲಾ ಮಟ್ಟದ ವಾರ್ಷಿಕ ವೃತ್ತಿಪರ ಮತ್ತು ಕ್ರೀಡಾಕೂಟದ ಉದ್ಘಾಟನಾ ಸಮಾರಂಭವು ಇಂದು ಮಧ್ಯಾಹ್ನ 1 ಕ್ಕೆ ಜಿಲ್ಲಾ ಗೃಹರಕ್ಷಕ ದಳ ಕಛೇರಿಯಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಮಲ್ಲೇಶ್ ದೊಡ್ಡಮನಿ ಆಗಮಿಸಲಿದ್ದು, ಡಾ. ಸುಜಿತ್ ಕುಮಾರ್ ಎಸ್.ಎಚ್. ಅಧ್ಯಕ್ಷತೆ ವಹಿಸುವರು.

# ಸಮರಕಂಡ್ ಕಡೆ ಭಾರತದ ವೈದ್ಯಕೀಯ ವಿದ್ಯಾರ್ಥಿಗಳ ಗಮನ

**ಉಕ್ರೇನ್ ಸಮರದ ನಂತರ ಹಲವು ಪಟ್ಟು ಹೆಚ್ಚಿದ ದಾಖಲಾತಿ**

ಸಮರಕಂಡ್ (ಉಜ್ಬೇಕಿಸ್ತಾನ), ಡಿ. 13 - ಸಮರದ ಕಾರಣದಿಂದ ಉಕ್ರೇನ್‌ನಲ್ಲಿ ಎಂ.ಬಿ.ಬಿ.ಎಸ್. ಅಧ್ಯಯನದ ಬಾಗಿಲು ಮುಚ್ಚುತ್ತಿರುವಂತೆಯೇ, ಭಾರತದ ಹಲವಾರು ಆಕಾಂಕ್ಷಿಗಳು ಸಮರಕಂಡ್ ಕಡೆ ಗಮನ ಹರಿಸಿದ್ದಾರೆ. ಉಜ್ಬೇಕಿಸ್ತಾನದ ಸಮರಕಂಡ್ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಭಾರತೀಯ ವಿದ್ಯಾರ್ಥಿಗಳ ದಾಖಲಾತಿ ಹಲವು ಪಟ್ಟು ಹೆಚ್ಚಾಗಿದೆ.

2021ರವರೆಗೆ ಈ ಸಾರ್ವಜನಿಕ ವಿಶ್ವವಿದ್ಯಾಲಯಕ್ಕೆ ಭಾರತೀಯ ವಿದ್ಯಾರ್ಥಿಗಳ ಪ್ರವೇಶ 100 ರಿಂದ 150ರಷ್ಟಿತ್ತು. 2023ರಲ್ಲಿ ಅದು 3,000ಕ್ಕೆ ತಲುಪಿದೆ. 2022ರಲ್ಲಿ ಉಕ್ರೇನ್ ಸಮರ ಆರಂಭವಾದಾಗ, ಅಲ್ಲಿಂದ ಹೊರ ಬಂದ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈಗಾಗಲೇ ಈ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದಾರೆ.

ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಹಲವು ಪಟ್ಟು ಹೆಚ್ಚಾಗಿದೆ. ನಾವು ಅವರಿಗೆ ಸಮರ್ಪಕ ವ್ಯವಸ್ಥೆ ಮಾಡುತ್ತಿದ್ದೇವೆ. ಅವರಿಗೆ ಯಾವುದೇ ಅನಾನುಕೂಲ ಆಗದಂತೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಸರ್ಕಾರಿ ಸ್ವಾಮ್ಯದ ಸಮರಕಂಡ್ ವೈದ್ಯಕೀಯ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಜಫರ್ ಅಮಿನೊವ್ ಹೇಳಿದ್ದಾರೆ.

ನಾವು ಭಾರತದ 40 ಬೋಧಕರನ್ನು ಈ ವರ್ಷ ನೇಮಿಸಿಕೊಂಡಿದ್ದೇವೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಬೋಧನೆ ಹಾಗೂ ಕಲಿಕೆ ಇಂಗ್ಲಿಷ್‌ನಲ್ಲೇ ಇದೆ. ಆದರೂ, ಉಚ್ಚಾರದ ಕಾರಣದಿಂದಾಗಿ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳುತ್ತೇವೆ ಎಂದು ಅಮಿನೊವ್ ಹೇಳಿದ್ದಾರೆ. ನಮ್ಮ ಶಿಕ್ಷಕರು ಸಾಂಸ್ಕೃತಿಕವಾಗಿಯೂ ಸಹ ವಿದ್ಯಾರ್ಥಿಗಳಿಗೆ ಹತ್ತಿರವಾಗಿರುತ್ತಾರೆ. ಇದರಿಂದ ವಿದ್ಯಾರ್ಥಿಗಳನ್ನು ಸಮರ್ಪಕವಾಗಿ ನಿಭಾಯಿಸಲು ಶಿಕ್ಷಕರಿಗೆ ಸಾಧ್ಯವಾಗಲಿದೆ ಎಂದವರು ತಿಳಿಸಿದ್ದಾರೆ.

ಉಕ್ರೇನ್ ಯುದ್ಧದ ಕಾರಣದಿಂದ ಅತಂತ್ರರಾಗಿದ್ದ ಹಲವಾರು ಭಾರತೀಯ ವಿದ್ಯಾರ್ಥಿಗಳಿಗೆ ಸಮರಕಂಡ್ ಈಗ ಆಸರೆಯಾಗುತ್ತಿದೆ. ಆಕಾಂಕ್ಷಿಗಳಿಗೆ ಹೊಸ ಆಯ್ಕೆಗಳು ಸಿಗುತ್ತವೆ.

ಯುದ್ಧ ಆರಂಭವಾದ ನಂತರ ಎಂ.ಬಿ.ಬಿ.ಎಸ್. ಅಧ್ಯಯನ ಅರ್ಧಕ್ಕೇ ಬಿಟ್ಟಿದ್ದ ಹಾಗೂ ರಕ್ಷಿಸಲ್ಪಟ್ಟಿದ್ದ ವಿದ್ಯಾರ್ಥಿಗಳನ್ನು ತನ್ನಲ್ಲಿ ಸೇರ್ಪಡೆ ಮಾಡಿಕೊಳ್ಳಲು ವಿಶ್ವವಿದ್ಯಾಲಯ ಸಲಹೆಗಾರರ ಮೂಲಕ ಕ್ರಮಗಳನ್ನು ತೆಗೆದುಕೊಂಡಿತ್ತು. ಭಾರತದಲ್ಲಿ ವೈದ್ಯಕೀಯ ಶಿಕ್ಷಣದ ಅವಧಿ ಐದೂವರೆ ವರ್ಷವಾಗಿದ್ದರೆ, ಉಜ್ಬೇಕಿಸ್ತಾನದಲ್ಲಿ ಆರು ವರ್ಷವಾಗಿದೆ. ಆದರೂ, ಇಂಗ್ಲಿಷ್ ಮೂಲಕ ಕಲಿಕೆ, ಶಾಂತಿಯುತ ವಾತಾವರಣ, ಕೈಗೆಟಕುವ ದರದ ಶುಲ್ಕ ಹಾಗೂ ಪ್ರಾಯೋಗಿಕ ಕಲಿಕೆಯ ಮೂಲಕ ವಿದ್ಯಾರ್ಥಿಗಳನ್ನು ಸೆಳೆಯಲು ವಿಶ್ವವಿದ್ಯಾಲಯ ಮುಂದಾಗಿದೆ.

ಸಮರಕಂಡ್ ಮಧ್ಯ ಏಷಿಯಾದಲ್ಲಿ ಕಲಿಕೆಯ ಉತ್ತಮ ಅವಕಾಶ ನೀಡುತ್ತಿದೆ. ಯುದ್ಧದ ನಂತರ ಉಜ್ಬೇಕಿಸ್ತಾನದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗುತ್ತಿದೆ ಎಂದು ಎಂ.ಡಿ. ಹೌಸ್ ಸಲಹಾ ಸಂಸ್ಥೆಯ ನಿರ್ದೇಶಕ ಸುನೀಲ್ ಶರ್ಮ ತಿಳಿಸಿದ್ದಾರೆ.

ಶಾಂತಿಯುತ ವಾತಾವರಣ ಇರುವುದೇ ಇಲ್ಲಿನ ಒಳ್ಳೆಯ ಅಂಶ. ಭಾರತ ಹಾಗೂ ಪಾಕಿಸ್ತಾನದ ಉತ್ತಮ ಜ್ಞಾನವುಳ್ಳ ಬೋಧಕರು ಇಲ್ಲಿದ್ದಾರೆ. ಇಲ್ಲಿ ಭಾಷೆಯ ಸಮಸ್ಯೆಯೂ ಇಲ್ಲ. ನಮಗೆ ಅನುಕೂಲವಾಗುವ ಭಾಷೆಯಲ್ಲಿ ಕಲಿಸಲಾಗುತ್ತಿದೆ ಎಂದು ಬಿಹಾರದ ಮಧುಬನ್ ವಿದ್ಯಾರ್ಥಿ ಮೊಹಮ್ಮದ್ ಆಫ್ತಾಬ್ ಹೇಳಿದ್ದಾರೆ.

ಸಮರಕಂಡ್‌ನಲ್ಲಿ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ತಾತ್ಕಾಲಿಕವಲ್ಲ. ಮುಂದಿನ ದಿನಗಳಲ್ಲಿ ಇವರ ಸಂಖ್ಯೆ ಇನ್ನಷ್ಟು ಹೆಚ್ಚಾಗಲಿದೆ ಎಂದು ಸಲಹಾ ಸಂಸ್ಥೆಗಳು ಅಭಿಪ್ರಾಯ ಪಡುತ್ತಿವೆ.

## 45 ದಿನಗಳಲ್ಲಿ ನಾಗಮೋಹನ್ ದಾಸ್ ವರದಿ ನೀಡಲು ಸೂಚನೆ

ಬೆಂಗಳೂರು, ಡಿ. 13 – ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ 40 ಪರ್ಸೆಂಟ್ ಕಮೀಷನ್ ಆರೋಪದ ತನಿಖೆಗಾಗಿ ನೇಮಿಸ ಲಾಗಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮನೋಹನ್ ದಾಸ್ ನೇತೃತ್ವದ ಏಕ ಸದಸ್ಯ ತನಿಖಾ ಆಯೋಗ, 45ದಿನಗಳಲ್ಲಿ ಮೊಹರು ಮಾಡಿದ ಲಕೋಟೆಯಲ್ಲಿ ವರದಿ ನೀಡಬೇಕು ಎಂದು ಹೈಕೋರ್ಟ್ ತಿಳಿಸಿದೆ.ತನಿಖಾ ಆಯೋಗದ ರಚನೆ ಕ್ರಮವನ್ನು ನಿಕ್ಷೇಪ್ ಇನ್‌ಫ್ರಾ ಪ್ರಾಜೆಕ್ಟ್ಸ್ ಹಾಗೂ 44 ಇತರೆ ಗುತ್ತಿಗೆದಾರರು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ತನಿಖೆಯ ಕಾರಣದಿಂದ ಕಾಮಗಾರಿಗಳ ಬಿಲ್ ಪಾವತಿಯಾಗುತ್ತಿಲ್ಲ ಎಂದು ಅವರು ಆರೋಪಿಸಿದ್ದಾರೆ.

## ಪುಣೆ ಕ್ಷೇತ್ರಕ್ಕೆ ಉಪ ಚುನಾವಣೆಗೆ ಆದೇಶ

**ಅಲ್ಪಾವಧಿಗಾಗಿ ಚುನಾವಣೆ ನಡೆಸಲಾಗದು ಎಂಬ ಚುನಾವಣಾ ಆಯೋಗದ ವಾದ ಒಪ್ಪದ ಹೈಕೋರ್ಟ್**

ಮುಂಬೈ, ಡಿ. 13 – ಪುಣೆ ಲೋಕಸಭಾ ಕ್ಷೇತ್ರಕ್ಕೆ ತಕ್ಷಣವೇ ಉಪ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಬಾಂಬೆ ಹೈಕೋರ್ಟ್ ಆದೇಶಿಸಿದೆ.

2024ರ ಲೋಕಸಭಾ ಚುನಾವಣೆಗೆ ಸಿದ್ಧತೆ ನಡೆಸುತ್ತಿರುವ ಕಾರಣ ಉಪ ಚುನಾವಣೆ ನಡೆಸಲಾಗದು ಎಂದು ಚುನಾವಣಾ ಆಯೋಗ ಹೇಳಿರುವುದನ್ನು ನ್ಯಾಯಮೂರ್ತಿಗಳಾದ ಗೌತಮ್ ಪಟೇಲ್ ಹಾಗೂ ಕಮಲ್ ಖಾತ ಅವರನ್ನು ಒಳಗೊಂಡ ಪೀಠ ತಳ್ಳಿ ಹಾಕಿದೆ.

ಚುನಾವಣಾ ಆಯೋಗ ನೀಡಿರುವ ವಿವರಣೆ ವಿಚಿತ್ರ ಹಾಗೂ ಸಂಪೂರ್ಣ ಅಕಾರಣವಾಗಿದೆ ಎಂದು ಪೀಠ ಹೇಳಿದೆ. 2024ರ ಏಪ್ರಿಲ್ - ಮೇ ತಿಂಗಳಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ ನಡೆಯಲಿದೆ.

ಪುಣೆಯ ಸಂಸದರಾಗಿದ್ದ ಬಿಜೆಪಿಯ ಗಿರೀಶ್ ಬಾಪಟ್ ಅವರು ಕಳೆದ ಮಾರ್ಚ್ 29 ರಂದು ನಿಧನರಾಗಿದ್ದರು. ಆಗಿನಿಂದಲೂ ಈ ಸ್ಥಾನ ಖಾಲಿ ಇದೆ.

ಪ್ರಜಾಪ್ರಭುತ್ವದಲ್ಲಿ ಜನರ ಧ್ವನಿಯಾಗಿರುವ ಜನಪ್ರತಿನಿಧಿಗಳು ಆಡಳಿತ ನಡೆಸುತ್ತಾರೆ. ಜನಪ್ರತಿನಿಧಿ ಇರದೇ ಹೋದರೆ, ಬೇರೆಯವರಿಗೆ ಸ್ಥಾನ ಕಲ್ಪಿಸಬೇಕು. ಜನರು ಪ್ರಾತಿನಿಧ್ಯ ರಹಿತವಾಗಿ ಇರಬಾರದು. ಇದು ಸಂಪೂರ್ಣ ಸಂವಿಧಾನ ಬಾಹಿರ ಎಂದು ಹೈಕೋರ್ಟ್ ಹೇಳಿದೆ.

ಪುಣೆ ಲೋಕಸಭೆಗೆ ಉಪ ಚುನಾವಣೆ ನಡೆಸದೇ ಇರುವುದನ್ನು ಪ್ರಶ್ನಿಸಿ ಸ್ಥಳೀಯ ನಿವಾಸಿ ಸುಘೋಷ್ ಜೋಷಿ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

2024ರ ಲೋಕಸಭಾ ಚುನಾವಣೆ ಸೇರಿದಂತೆ ಹಲವು ಚುನಾವಣೆಗಳ ವ್ಯಸ್ತವಾಗಿದ್ದೇವೆ. ಈಗ ಉಪ ಚುನಾವಣೆ ನಡೆಸಿದರೂ ಸಹ, ಆಯ್ಕೆಯಾಗುವ ಜನಪ್ರತಿನಿಧಿಯ ಅವಧಿ ಅಲ್ಪವಾಗಿರಲಿದೆ ಎಂದು ಚುನಾವಣಾ ಆಯೋಗ ಹೇಳಿತ್ತು.

ಇದನ್ನು ಒಪ್ಪದ ಪೀಠ, ಚುನಾವಣಾ ಆಯೋಗವು ಸಂವಿಧಾನಿಕ ಕರ್ತವ್ಯ ಹಾಗೂ ಹೊಣೆಗಾರಿಕೆಗಳನ್ನು ಕೈ ಬಿಡುವುದನ್ನು ಒಪ್ಪಲಾಗದು ಎಂದು ತಿಳಿಸಿದೆ.

ಲೋಕಸಭಾ ಅವಧಿ ಮುಂದಿನ ವರ್ಷ ಜೂನ್‌ವರೆಗೆ ಇದೆ. ಆದರೆ, ಪುಣೆ ಕ್ಷೇತ್ರ ಈ ವರ್ಷ ಮಾರ್ಚ್‌ನಿಂದಲೂ ಖಾಲಿ ಇದೆ. ಇಡೀ ಚುನಾವಣಾ ಆಯೋಗ 2024ರ ಲೋಕಸಭಾ ಚುನಾವಣೆಯಲ್ಲಿ ತೊಡಗಿದೆ ಎಂಬುದು ವಿಚಿತ್ರ ಹೇಳಿಕೆ ಎಂದು ಹೈಕೋರ್ಟ್ ತಿಳಿಸಿದೆ.

## ನಗರದಲ್ಲಿ ನಾಳೆ ಉತ್ಸವಾಂಬದೇವಿ ಕಾರ್ತಿಕ ದೀಪೋತ್ಸವ



ದಾವಣಗೆರೆ, ಡಿ. 13- ಇಲ್ಲಿನ ವಸಂತ ರಸ್ತೆಯಲ್ಲಿರುವ ಉತ್ಸವಾಂಬದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ದೇವಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ ಕಾರ್ತಿಕ ದೀಪೋತ್ಸವವು ನಾಡಿದ್ದು ದಿನಾಂಕ 15ರ ಶುಕ್ರವಾರ ನೆರವೇರಲಿದೆ. ಅಂದು ಬೆಳಗಿನ ಜಾವ 4.30ಕ್ಕೆ ಮಹಾರುದ್ರಾಭಿಷೇಕ, ಸಂಜೆ 7.30ಕ್ಕೆ ಕಾರ್ತಿಕ ದೀಪೋತ್ಸವ ನಡೆಯಲಿದೆ.


ಬೇಕಾಗಿದ್ದಾರೆ

ಟೂನ್ಜ್
ದಾವಣಗೆರೆಯ ಪ್ರತಿಷ್ಠಿತ ಆಟಿಕೆಗಳ ಹಾಗೂ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ.

TOONZ
7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
70199 85487
73492 47160



ssims
SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ – ಬೆಂಗಳೂರು, ಇಲ್ಲಿನ ಪ್ರಮುಖ ವೈದ್ಯ ಮತ್ತು ಮಧುಮೇಹ ತಜ್ಞರು
ದಾವಣಗೆರೆ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕನಲ್ಲಿ ಲಭ್ಯರಿರುತ್ತಾರೆ
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ|| ಸಮಿತ್ ಎ ಶೆಟ್ಟಿ
MBBS, MDRC, PGDD (UK) (Cambridge University)
Consultant Diabetologist

ಇದಕ್ಕಾಗಿ ಸಮಾಲೋಚಿಸಿ:
- ಗರ್ಭಾವಸ್ಥೆಯ ಮಧುಮೇಹ
- ಥೈರೊಯ್ಡ್ ಸಮಸ್ಯೆಗಳು
- ಮಧುಮೇಹದಲ್ಲಿ ಮೂತ್ರಪಿಂಡದ ಕಾಯಿಲೆ
- ಹೃದ್ರೋಗಿಗಳಲ್ಲಿ ಮಧುಮೇಹ
- ನರಮಂಡದ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ನರಗಳ ತೊಂದರೆಗಳು
- ಮಧುಮೇಹಕ್ಕೆ ಸಂಬಂಧಿಸಿದ ಕಣ್ಣಿನ ತೊಂದರೆಗಳು

ದಿನಾಂಕ: ಶನಿವಾರ, 16ನೇ ಡಿಸೆಂಬರ್ 2023 । ಸಮಯ: ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

|| ಶ್ರೀ ಶಿವನಾರದ ಮುನಿ ಪ್ರಸನ್ನ ||





ದಾವಣಗೆರೆ ತಾ. ಪುಟಗನಾಳ್ ಗ್ರಾಮದ ವಾಸಿ
ದಿ. ಶ್ರೀಮತಿ ಹನುಮಮ್ಮ ದಿ. ರಾಮನಗೌಡ್ರು ಮಗನಾದ
ಗೌಡ್ರು ಶ್ರೀ ರೇವಣಸಿದ್ದಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ: 06.12.2023ನೇ ಬುಧವಾರ ಬೆಳಿಗ್ಗೆ 9 ಕ್ಕೆ
ನಮ್ಮ ಪೂಜ್ಯ ಅಣ್ಣನವರಾದ



ಗೌಡ್ರು ಶ್ರೀ ಓಂಕಾರಪ್ಪನವರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆಯನ್ನು' ದಿನಾಂಕ:14.12.2023ನೇ ಗುರುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ. ಪುಟಗನಾಳ್ ಗ್ರಾಮದ ಮೃತರ ಸ್ವಗೃಹದಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು : ಧರ್ಮಪತ್ನಿ ಗೌಡ್ರು ಶ್ರೀಮತಿ ಅನುಸೂಯಮ್ಮ ಮತ್ತು ಮಕ್ಕಳು, ಮೃತರ ಸಹೋದರರು, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಗೌಡ್ರು ವಂಶಸ್ಥರು, ಪುಟಗನಾಳ್ ಹಾಗೂ ಬಂಧು ಮಿತ್ರರು.
ಮೊ : 95356 13563, 74834 91353

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ